# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಸೋಮವಾರ, ಫೆಬ್ರವರಿ 06, 2023

ಸಂಪುಟ : 49 ಸಂಚಿಕೆ : 265 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




# ಕೊಟ್ಟೂರು ಭಕ್ತರಿಗೆ ಮೊದಲ ರ್‍ಯಾಂಕ್

ಕೊಟ್ಟೂರು, ಫೆ. 5 – ತರಳಬಾಳು ಹುಣ್ಣಿಮೆ ಕಾರ್ಯಕ್ರಮದಲ್ಲಿ ಅಡ್ಡಪಲ್ಲಕ್ಕಿ ಉತ್ಸವ ನಡೆಸುವ ವಿಷಯದಲ್ಲಿ ಕೊಟ್ಟೂರಿನ ಭಕ್ತರು ಮೊದಲ ರ್‍ಯಾಂಕ್‌ನಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಹುಣ್ಣಿಮೆ ಮಹೋತ್ಸವದ ಕೊನೆಯ ದಿನದಂದು ಸದ್ಧರ್ಮ ಸಿಂಹಾಸನ ಅಲಂಕರಿಸಿ ಆಶೀರ್ವಚನ ನೀಡಿದ ಶ್ರೀಗಳು, ಅಡ್ಡಪಲ್ಲಕ್ಕಿ ಉತ್ಸವದ ದಿನ ಭಕ್ತರ ಪರೀಕ್ಷೆಯಾಗಲಿದೆ ಎಂದು ನಿನ್ನೆ ಹೇಳಿದ್ದೆವು. ಅದರಂತೆ ಪರೀಕ್ಷೆ ನಡೆದಿದ್ದು, ಭಕ್ತರು ಮೊದಲ ರ್‍ಯಾಂಕ್‌ನಲ್ಲಿ ಪಾಸ್ ಆಗಿದ್ದಾರೆ ಎಂದರು.

ಆದರೆ, ಹುಣ್ಣಿಮೆ ಮಹೋತ್ಸವದಲ್ಲಿ ಪಾಲ್ಗೊಂಡು ಮರಳುವಾಗ ಮೋಟರ್ ಬೈಕ್ ಅಪಘಾತದಲ್ಲಿ ಹರಪನಹಳ್ಳಿಯ ಬೆಣ್ಣೆಹಳ್ಳಿಯ ವೃಷಭೇಂದ್ರಪ್ಪ ಮೃತಪಟ್ಟಿರುವುದು ಮತ್ತು ಕಾಳಾಪುರ ಘಟನೆಯ ತನಿಖೆಗೆ ಬಂದಿದ್ದ ಹಂಪಿಯ

## ಅಡ್ಡಪಲ್ಲಕ್ಕಿ ಉತ್ಸವ ನೆರವೇರಿಸಿದ ರೀತಿಗೆ ಜಗದ್ಗುರುಗಳ ಮೆಚ್ಚುಗೆ

ಎ.ಎಸ್.ಐ. ಶಬ್ಬೀರ್ ಹುಸೇನ್ ಅವರು ಅಪಘಾತದಲ್ಲಿ ಸಾವನ್ನಪ್ಪಿರುವುದು ತಮ್ಮಲ್ಲಿ ವಿಷಾದ ತಂದಿದೆ ಎಂದು ಶ್ರೀಗಳು ಹೇಳಿದರು.

ಉಭಯ ಕುಟುಂಬದವರಿಗೆ ತಲಾ ಒಂದು ಲಕ್ಷ ರೂ.ಗಳನ್ನು ಹುಣ್ಣಿಮೆ ಮಹೋತ್ಸವ ಸಮಿತಿಯ ವತಿಯಿಂದ ಪರಿಹಾರ ನೀಡಲಾಗುವುದು. ಇವರ ಕುಟುಂಬದವರು ಮಕ್ಕಳು ಸಿರಿಗೆರೆ ಶಿಕ್ಷಣ ಸಂಸ್ಥೆಗಳಲ್ಲಿ ಪದವಿ ಕಾಲೇಜಿನವರೆಗೆ ಉಚಿತ ಶಿಕ್ಷಣ ಪಡೆಯಲು ಅವಕಾಶ ಕಲ್ಪಿಸಲಾಗುವುದು ಎಂದು ಶ್ರೀಗಳು ತಿಳಿಸಿದರು. ಸಮಾರಂಭದಲ್ಲಿ (2ನೇ ಪುಟಕ್ಕೆ)

## ಜನಸಾಗರದ ನಡುವೆ ನೆರವೇರಿದ ಅಡ್ಡಪಲ್ಲಕ್ಕಿ ಉತ್ಸವ

ಕೊಟ್ಟೂರು, ಫೆ. 5 – ಇಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ ಕೊನೆಯ ದಿನವಾದ ಭಾನುವಾರದಂದು ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರ ಅಡ್ಡಪಲ್ಲಕ್ಕಿ ಉತ್ಸವ ಜರುಗಿತು.

ಬೆಳಿಗ್ಗೆ ಕೊಟ್ಟೂರಿನ ಮುಖ್ಯ ರಸ್ತೆಗಳಲ್ಲಿ ಪ್ರಭಾತ್ ಪೇರಿ ಹಾಗೂ ನಂತರ ಶರಣ ಧ್ವಜಾರೋಹಣ ನೆರವೇರಿತು.

ಮಧ್ಯಾಹ್ನ ಶ್ರೀ ಶಿವಮೂರ್ತಿ ಸ್ವಾಮೀಜಿ ಅವರ ಅಡ್ಡಪಲ್ಲಕ್ಕಿ ಉತ್ಸವ ನಗರದ ಪ್ರಮುಖ ಬೀದಿಗಳಲ್ಲಿ ಸಂಭ್ರಮದಿಂದ ನೆರವೇರಿತು. ಮೆರವಣಿಗೆಯಲ್ಲಿ ಸ್ವಾಮೀಜಿಗಳನ್ನು ಕಾರ್ಯಕ್ರಮದ ಮಂಟಪಕ್ಕೆ ಕರೆ ತರಲಾಯಿತು. ಮೆರವಣಿಗೆಯಲ್ಲಿ ಅಪಾರ ಜನಸ್ತೋಮ ಭಾಗಿಯಾಗಿತ್ತು. ಕೊಟ್ಟೂರಿನ (2ನೇ ಪುಟಕ್ಕೆ)

## ಬೆಟ್ಟಿಂಗ್, ಅನಧಿಕೃತ ಸಾಲ: 232 ಆಪ್‌ಗಳಿಗೆ ಕೇಂದ್ರ ಸರ್ಕಾರದ ತಡೆ

ನವದೆಹಲಿ, ಫೆ. 5- ಬೆಟ್ಟಿಂಗ್, ಜೂಜು ಹಾಗೂ ಅನಧಿಕೃತ ಸಾಲ ಸೇವೆಗಳಲ್ಲಿ ತೊಡಗಿದ್ದ 232 ಆಪ್‌ಗಳ ಮೇಲೆ ಕೇಂದ್ರ ಸರ್ಕಾರ ತಡೆ ಹಾಕಿದೆ. ಇದರಲ್ಲಿ ಚೀನಾದ ಆಪ್‌ಗಳೂ ಸೇರಿವೆ.

ಕೇಂದ್ರ ಎಲೆಕ್ಟ್ರಾನಿಕ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವಾಲಯ ಈ ಬಗ್ಗೆ ಆದೇಶ ಹೊರಡಿಸಿದೆ. ಗೃಹ ಸಚಿವಾಲಯದ ಸೂಚನೆಯ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ತಡೆಯಲಾಗಿರುವ ಆಪ್‌ಗಳ ಪೈಕಿ 138 ಜೂಜು, ಅಕ್ರಮ ಹಣ ಹಾಗೂ ಬೆಟ್ಟಿಂಗ್‌ನಲ್ಲಿ ತೊಡಗಿದ್ದವು. 94 ಆಪ್‌ಗಳು ಅನಧಿಕೃತ ಸಾಲ ಸೇವೆಯಲ್ಲಿ ತೊಡಗಿದ್ದವು ಎಂದು (2ನೇ ಪುಟಕ್ಕೆ)

## ತೈಲದ ಆಕಸ್ಮಿಕ ಲಾಭ ತೆರಿಗೆ ಹೆಚ್ಚಿಸಿದ ಕೇಂದ್ರ

ನವದೆಹಲಿ, ಫೆ. 5 – ದೇಶೀಯವಾಗಿ ಉತ್ಪಾದಿಸಲಾಗುವ ಕಚ್ಚಾ ತೈಲ ಹಾಗೂ ಡೀಸೆಲ್ ಮತ್ತು ಎ.ಟಿ.ಎಫ್. ರಫ್ತಿನ ಮೇಲೆ ವಿಧಿಸಲಾಗುವ ಆಕಸ್ಮಿಕ ಲಾಭದ ತೆರಿಗೆಯನ್ನು ಕೇಂದ್ರ ಸರ್ಕಾರ ಹೆಚ್ಚಿಸಿದೆ.

ಒ.ಎನ್.ಜಿ.ಸಿ. ರೀತಿಯ ಕಂಪನಿಗಳು ಉತ್ಪಾದಿಸುವ ಕಚ್ಚಾ ತೈಲಕ್ಕೆ ಪ್ರತಿ ಟನ್‌ಗೆ 5,050 ರೂ.ಗಳ ತೆರಿಗೆ ವಿಧಿಸಲಾಗುವುದು. ಇದು ಫೆಬ್ರವರಿ 3ರಿಂದ ಜಾರಿಗೆ ಬಂದಿದೆ. ಈ ಹಿಂದೆ 1,900 ರೂ.ಗಳ ತೆರಿಗೆ ಇತ್ತು.

ಡೀಸೆಲ್ ರಫ್ತಿನ ಮೇಲಿನ ತೆರಿಗೆಯನ್ನು ಪ್ರತಿ ಲೀಟರ್‌ಗೆ 5 ರೂ.ಗಳಿಂದ 7.50 ರೂ.ಗಳಿಗೆ ಹೆಚ್ಚಿಸಲಾಗಿದೆ. ವೈಮಾನಿಕ ಇಂಧನವಾದ ಎ.ಟಿ.ಎಫ್. ಮೇಲಿನ ತೆರಿಗೆಯನ್ನು ಲೀಟರ್‌ಗೆ 3.50 ರೂ.ಗಳಿಂದ 6 ರೂ.ಗಳಿಗೆ ಹೆಚ್ಚಿಸಲಾಗಿದೆ. ಇದು ಫೆಬ್ರವರಿ 4ರಿಂದ (2ನೇ ಪುಟಕ್ಕೆ)

# ಪ್ರಯೋಗಾಲಯಕ್ಕೆ ಭೂಮಿ ಪೂಜೆ

## ಶೀಘ್ರ ಕಾಮಗಾರಿ ಮುಗಿಸಲು ಸಂಸದ ಜಿ.ಎಂ. ಸಿದ್ದೇಶ್ವರ ಸೂಚನೆ

ದಾವಣಗೆರೆ, ಫೆ.5- ನಗರದ ಜಿಲ್ಲಾ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಸಮಗ್ರ ಜನ ಆರೋಗ್ಯ ಪ್ರಯೋಗಾಲಯ ನಿರ್ಮಾಣಕ್ಕೆ ಭಾನುವಾರ ಸಂಸದ ಜಿ.ಎಂ. ಸಿದ್ದೇಶ್ವರ ಹಾಗೂ ಶಾಸಕ ಎಸ್.ಎ. ರವೀಂದ್ರನಾಥ್ ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಸಂಸದ ಜಿ.ಎಂ. ಸಿದ್ದೇಶ್ವರ, ಆದಷ್ಟು ಶೀಘ್ರದಲ್ಲಿಯೇ ಪ್ರಯೋಗಾಲಯ ನಿರ್ಮಾಣ ಕಾಮಗಾರಿ ಮುಗಿಸಿ ಲೋಕಾರ್ಪಣೆ ಮಾಡುವಂತೆ ಅಧಿಕಾರಿಗಳು ಹಾಗೂ ಗುತ್ತಿಗೆದಾರಿಗೆ ಸೂಚಿಸಿರುವುದಾಗಿ ಹೇಳಿದರು.

1.10 ಕೋಟಿ ರೂ. ವೆಚ್ಚದಲ್ಲಿ 305 ಚದರ ಮೀಟರ್ ಜಾಗದಲ್ಲಿ ನಿರ್ಮಾಣವಾಗುತ್ತಿರುವ ಸಮಗ್ರ ಜನ ಆರೋಗ್ಯ ಪ್ರಯೋಗಾಲಯ ಪೂರ್ಣಗೊಳಿಸಲು ಆರು ತಿಂಗಳ ಕಾಲಾವಕಾಶ ನೀಡಲಾಗಿದೆ. ಆದರೆ ಆರೋಗ್ಯ ಇಲಾಖೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಮೂರು ತಿಂಗಳೊಳಗೆ ಕಾಮಗಾರಿ ಪೂರ್ಣಗೊಳಿಸುವುದಾಗಿ ಹೇಳಿದ್ದಾರೆ ಎಂದರು.

ಪ್ರಸ್ತುತ ಜಿಲ್ಲಾಸ್ಪತ್ರೆಯಲ್ಲಿ ರಕ್ತ ಮತ್ತು ಮೂತ್ರದ ಕಲ್ಚರ್ ಟೆಸ್ಟ್ ಮಾದರಿಗಳನ್ನು ಬೇರೆ ಕಡೆ ಕಳುಹಿಸುತ್ತಿರುವುದರಿಂದ ರಿಸಲ್ಟ್ ಬರಲು ವಿಳಂಬವಾಗುತ್ತಿತ್ತು. ಇದೀಗ ಇಲ್ಲಿಯೇ ಪ್ರಯೋಗಾಲ ಯವಾದರೆ ಬ್ಲಡ್ ಮತ್ತು ಯೂರಿನ್ ಕಲ್ಚರ್ ಟೆಸ್ಟ್ ರಿಸಲ್ಟ್ ಮರು ದಿನಗಳಲ್ಲಿಯೇ ಸಿಗಲಿದ್ದು, ರೋಗಿಗಳಿಗೆ ಸಕಾಲದಲ್ಲಿ ಚಿಕಿತ್ಸೆ ನೀಡಲು ಅನುಕೂಲವಾಗಲಿದೆ ಎಂದು ಹೇಳಿದರು.

ಎರಡು ವರ್ಷದ ಹಿಂದೆ ಭೂಮಿ ಪೂಜೆ (2ನೇ ಪುಟಕ್ಕೆ)

# ಉಚ್ಚಂಗಿದುರ್ಗದಲ್ಲಿ ಭರತ ಹುಣ್ಣಿಮೆ ಸಂಭ್ರಮ



ಹರಪನಹಳ್ಳಿ, ಫೆ.5 - ಇತಿಹಾಸ ಪ್ರಸಿದ್ಧ ಉಚ್ಚಂಗಿದುರ್ಗದ ಉಚ್ಚಂಗೆಮ್ಮ ದೇವಿ ಸನ್ನಿಧಿಯಲ್ಲಿ ಈ ಬಾರಿ ಭರತ ಹುಣ್ಣಿಮೆ ಯಶಸ್ವಿಯಾಗಿ ಜರುಗಿತು. ದೇವಸ್ಥಾನಕ್ಕೆ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿ, ದೇವಿ ದರ್ಶನ ಪಡೆದರು.

ಪುನರ್ವಸತಿ ಯೋಜನೆ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಿಬ್ಬಂದಿಯವರು ದೇವದಾಸಿ ಪದ್ಧತಿಯನ್ನು ಆಚರಣೆ ಮಾಡದಂತೆ ಆನೆಹೊಂಡ, ಅರಿಶಿಣ ಹೊಂಡ, ಪಾದಗಟ್ಟಿ ಬಳಿ ಕರ ಪತ್ರ ಹಂಚಿ, ಜಾಗೃತಿ ಮೂಡಿಸಿ, ದೇವಿಯ ಹೆಸರಿನಲ್ಲಿ ಜಡೆ ಬಿಟ್ಟಿದ್ದ ಭಕ್ತರ ಜಡೆಯನ್ನು ಜಾಗೃತಿ ಮೂಡಿಸಿ ಕತ್ತರಿಸಿದರು.

ಎಲ್ಲಡೆ ಪೊಲೀಸ್ ಇಲಾಖೆಯಿಂದ ಬಿಗಿ ಬಂದೋಬಸ್ತ್ ಮಾಡಲಾಗಿತ್ತು. ತಹಶೀಲ್ದಾರ್ ಶಿವಕುಮಾರ್ ಬಿರಾದಾರ ನೇತೃತ್ವದ ತಾಲ್ಲೂಕು ಆಡಳಿತ ಪೊಲೀಸ್ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಬಿಗಿ ಬಂದೋಬಸ್ತ್ ಮಾಡಲಾಗಿತ್ತು. ಈ ವೇಳೆ ಸಿಪಿಐ ನಾಗರಾಜ ಕಮ್ಮಾರ್, ಅರಸಿಕೇರಿ ಪಿಎಸ್‌ಐ ಕಿರಣ್‌ಕುಮಾರ್, ದೇವದಾಸಿ ಪುನರ್ವಸತಿ ಯೋಜನಾಧಿಕಾರಿ ಪ್ರಜ್ಞಾ ಪಾಟೀಲ್, ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಪ್ಪ ಇತರರು ಇದ್ದರು.



# ಸಂಭ್ರಮದ ಹರಿಹರೇಶ್ವರ ರಥೋತ್ಸವ

ಹರಿಹರ, ಫೆ. 5- ದಕ್ಷಿಣ ಕಾಶಿ ಎಂದೇ ಪ್ರಸಿದ್ಧವಾದ ಹರಿಹರದಲ್ಲಿ ಶ್ರೀ ಹರಿಹರೇಶ್ವರ ಸ್ವಾಮಿ ಹಾಗೂ ಲಕ್ಷ್ಮಿ ದೇವಿಯ ಬ್ರಹ್ಮ ರಥೋತ್ಸವು ಭಾನುವಾರ ಅಪಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಶ್ರೀ ಹರಿಹರೇಶ್ವರ ಸ್ವಾಮಿ ಹಾಗೂ ಲಕ್ಷ್ಮಿ ದೇವಿಗೆ ಬೆಳಿಗ್ಗೆಯೇ ವಿಶೇಷ ಅಭಿಷೇಕಗಳು ನಡೆದವು. ಅಲಂಕಾರ, ಮಹಾಮಂಗಳಾರತಿ ಸೇರಿದಂತೆ ಪೂಜಾ ಕಾರ್ಯಗಳು ನೆರವೇರಿದ ಬಳಿಕ ಪಲ್ಲಕ್ಕಿಯಲ್ಲಿನ ಉತ್ಸವಮೂರ್ತಿಯನ್ನು ಅಲಂಕೃತ ರಥದಲ್ಲಿ ಪ್ರತಿಷ್ಠಾಪಿಸಲಾಯಿತು.


ತಹಶೀಲ್ದಾರ್ ಬಿ.ಅಶ್ವತ್ಥ್ ರಥಕ್ಕೆ ಪೂಜೆ ಸಲ್ಲಿಸಿ, ಬ್ರಹ್ಮರಥೋತ್ಸವಕ್ಕೆ ಚಾಲನೆ ನೀಡಿದರು. ಪಂಡಿತ ನಾರಾಯಣ್ ಜೋಯಿಸರು ಮತ್ತು ಹರಿಶಂಕರ್ ಜೋಯಿಸರು ವಿಶೇಷ ಪೂಜಾ ಕಾರ್ಯಗಳನ್ನು ನಡೆಸಿಕೊಟ್ಟರು.

'ಗೋವಿಂದ..ಗೋವಿಂದ,' 'ಹರ ಹರ ಮಹಾದೇವ' ಎಂಬ ಭಕ್ತರ ಹರ್ಷೋದ್ಗಾರಗಳ ಮಧ್ಯೆ ರಥ ಮುಂದಕ್ಕೆ ಸಾಗಿತು. ಈ ವೇಳೆ ತೆಂಗಿನಕಾಯಿ, ಬಾಳೆಹಣ್ಣು, ಉತ್ತುತ್ತಿ, ಬಾದಾಮಿಯನ್ನು ಭಕ್ತರು ರಥಕ್ಕೆ ಸಮರ್ಪಿಸಿದರು. ರಥವು ದೇವಸ್ಥಾನ ರಸ್ತೆಯ ತೇರುಗಡ್ಡೆ ವೃತ್ತದಿಂದ ರಾಣಿ ಚೆನ್ನಮ್ಮ ವೃತ್ತದವರೆಗೆ ಸಂಚರಿಸಿ ಪುನಃ ತೇರುಗಡ್ಡೆ ವೃತ್ತಕ್ಕೆ ಬಂದು ತಲುಪಿತು.

ಸಾಂಸ್ಕೃತಿಕ ಕಲಾ ತಂಡಗಳು ರಥೋತ್ಸವಕ್ಕೆ ಇಂಬು ನೀಡಿದವು. ನಗರದ ಗಜಾನನ ಯುವಕ ಮತ್ತು ಸಾಂಸ್ಕೃತಿಕ ಕೇಂದ್ರ ಕೋಟೆ ಇವರಿಂದ ಅನ್ನ ಸಂತರ್ಪಣೆ. ನಂದಿಗಾವಿ ಶ್ರೀನಿವಾಸ್ ಅಭಿಮಾನಿ ಬಳಗ, ಚಂದ್ರಶೇಖರ್ ಪೂಜಾರ್ ಅಭಿಮಾನಿಗಳ ಬಳಗ, ಉದ್ಯಮಿ ಶರತ್ (2ನೇ ಪುಟಕ್ಕೆ)

# ಸಾಮೂಹಿಕ ವಿವಾಹದಿಂದ ಬಡವರ ಕಲ್ಯಾಣ


ಚಿತ್ರದುರ್ಗ, ಫೆ.5- ಸಾಮೂಹಿಕ ಕಲ್ಯಾಣ ಮಹೋತ್ಸವದಿಂದ ಬಡವರ ಕಲ್ಯಾಣವಾಗಿದೆ. ಬಡವರ ಬಂಧು ಶ್ರೀ ಮುರುಘಾ ಮಠ. ಇದೊಂದು ಭಾವೈಕ್ಯ ಕೇಂದ್ರ. ಇಂದು ವರದಕ್ಷಿಣೆ ಎನ್ನುವುದು ಸಾಮಾಜಿಕ ಪಿಡುಗಾಗಿ ಕಾಡುತ್ತಿದೆ. ವರದಕ್ಷಿಣೆ ತೆಗೆದುಕೊಳ್ಳುವವರು ಆದರ್ಶ ವ್ಯಕ್ತಿ ಆಗಲು ಸಾಧ್ಯವಿಲ್ಲ ಎಂದು ಶ್ರೀ ಬಸವಪ್ರಭು ಸ್ವಾಮೀಜಿ ಹೇಳಿದರು.



ಶ್ರೀಮಠದಲ್ಲಿ ನಡೆದ ಮುವತ್ಮೂರನೇ ವರ್ಷದ ಎರಡನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವದ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಅದ್ದೂರಿ ಮದುವೆಗಳಿಗೆ ಕಡಿವಾಣ ಹಾಕಬೇಕು. ಸಮ ಸಮಾಜ ನಿರ್ಮಾಣವಾಗಬೇಕು. ಸಂಸಾರದಲ್ಲಿ ದಂಪತಿ ಮಧ್ಯೆ ಪ್ರತಿಷ್ಠೆ ಇಣುಕಿ ಹಾಕದಂತೆ ಜಾಗ್ರತೆ ವಹಿಸಿ, ಸದಾ ಪ್ರೀತಿಯಿಂದ ನೆಮ್ಮದಿಯಿಂದ ಜೀವನ ಸಾಗಿಸಬೇಕು. ನಂಬಿಕೆ ಎಂಬ ಔಷಧ ನಮ್ಮೆಲ್ಲರಲ್ಲಿರಬೇಕೆಂದು ನುಡಿದರು.

ಜಗಳೂರಿನ ಗವಿಸಿದ್ದೇಶ್ವರ ಮಠದ ಶ್ರೀ ಪ್ರಭುಲಿಂಗ ಸ್ವಾಮೀಜಿ ಮಾತನಾಡಿ, ಯಾವುದೇ ಜಾತಿ, (2ನೇ ಪುಟಕ್ಕೆ)









# ರಾಜ್ಯ ಮಟ್ಟದ ಶ್ವಾನ ಪ್ರದರ್ಶನದಲ್ಲಿ 19ಕ್ಕೂ ಹೆಚ್ಚು ತಳಿಯ 200ಕ್ಕೂ ಹೆಚ್ಚು ಶ್ವಾನಗಳು

ದಾವಣಗೆರೆ, ಫೆ.4- ನಗರದ ಹೈಸ್ಕೂಲ್ ಮೈದಾನದಲ್ಲಿ ಭಾನುವಾರ ನಡೆದ ರಾಜ್ಯಮಟ್ಟದ ಶ್ವಾನ ಪ್ರದರ್ಶನದಲ್ಲಿ ದಾವಣಗೆರೆ ಸೇರಿದಂತೆ, ವಿವಿಧ ಜಿಲ್ಲೆಗಳಿಂದ 19ಕ್ಕೂ ಹೆಚ್ಚು ವಿವಿಧ ತಳಿಗಳ 200ಕ್ಕೂ ಹೆಚ್ಚು ಶ್ವಾನಗಳನ್ನು ಪಾಲ್ಗೊಂಡಿದ್ದವು.

ಮಾಲೀಕರು ತಾವು ಸಾಕಿದ ಶ್ವಾನಗಳನ್ನು ಅತಿ ಜಾಗರೂಕತೆಯಿಂದ ಪ್ರದರ್ಶನಕ್ಕೆ ಕರೆ ತಂದಿದ್ದರು. ಶ್ವಾನ ಪ್ರಿಯರಿಗಂತೂ ಪ್ರದರ್ಶನ ಹಬ್ಬದ ಖುಷಿ ನೀಡಿತ್ತು. ಬೆಳಿಗ್ಗೆ 10 ಗಂಟೆಯಿಂದ 12 ಗಂಟೆವರೆಗೂ ಪ್ರದರ್ಶನಕ್ಕೆ ನೋಂದಣಿ ಪ್ರಕ್ರಿಯೆ ನಡೆದಿತ್ತು. ಸಂಜೆ ವರೆಗೂ ಪ್ರದರ್ಶನ ನಡೆಯಿತು.

ಐರಿಸ್ ಶೆಟರ್, ಗ್ರೇಟ್ ಡೇನ್, ಅಮೆರಿಕನ್ ಬುಲ್, ಚೌಚೌ, ಲ್ಯಾಬರ್‌ಡರ್, ಜರ್ಮನ್ ಶೆಫರ್ಡ್, ಪಗ್, ರಾಟ್ ವೀಲರ್, ಸೈಬೀರಿಯನ್ ಹಸ್ಕಿ, ಮುಧೋಳ ಸೇರಿದಂತೆ ಹಲವು ತಳಿಯ ಶ್ವಾನಗಳಿದ್ದವು. ಕೆಲ ಶ್ವಾನಗಳು ಮುದ್ದು ಮುದ್ದಾಗಿದ್ದರೆ, ಮತ್ತೆ ಕೆಲವು ಭಯ ಹುಟ್ಟಿಸುವಂತಿದ್ದವು.

ತಾವೂ ಸಹ ಯಾರಿಗೂ ಕಡಿಮೆ ಇಲ್ಲ ಎಂಬಂತೆ ಪ್ರದರ್ಶನದಲ್ಲಿ ಶ್ವಾನಗಳು ಹೆಜ್ಜೆ ಹಾಕಿದವು. ಮಾಲೀಕರ ಮಾತುಗಳನ್ನು ಕೇಳುವ ಮೂಲಕ ಪ್ರೇಕ್ಷಕರನ್ನು ರಂಜಿಸಿದವು. ನಡಿಗೆ, ಮಾಲೀಕರ ಮಾತು ಕೇಳುವ ಬಗೆ, ಆರೋಗ್ಯ ಪರೀಕ್ಷಿಸಿ ತೀರ್ಪುಗಾರರು ತೀರ್ಪು ನೀಡುತ್ತಿದ್ದರು.

ಶ್ವಾನಗಳ ಮುದ್ದಾದ ಹಾಗೂ ಗಾಂಭೀರ್ಯ ನಡಿಗೆಯನ್ನು ಪ್ರಾಣಿ ಪ್ರಿಯರು ಮೊಬೈಲ್ ಗಳಲ್ಲಿ ಸೆರೆ ಹಿಡಿಯುತ್ತಿದ್ದರು. ಚಿಕ್ಕ ಮಕ್ಕಳು ಮುದ್ದಿನ ಶ್ವಾನಗಳೊಂದಿಗೆ ಸೆಲ್ಫಿ ತೆಗೆಸಿಕೊಳ್ಳುತ್ತಿದ್ದುದು ಸಾಮಾನ್ಯವಾಗಿತ್ತು. ಕೆಲವರು ತಮಗೆ ಇಷ್ಟವಾದ ಶ್ವಾನಗಳ ದರ ಹಾಗೂ ಸಿಗುವ ವಿಳಾಸವನ್ನು ವಿಚಾರಿಸುತ್ತಿದ್ದರು. ಕೆಲ ಶ್ವಾನಗಳು ಬಿಸಿಲಿನ ಧಗೆಗೆ ಬಳಲುತ್ತಿದ್ದವು. ಆಯೋಜಕರು ಐಸ್ ವ್ಯವಸ್ಥೆ ಕಲ್ಪಿಸಿದ್ದರು. ಮಾಲೀಕರು ಐಸ್ ಪಡೆದು ಶ್ವಾನಗಳಿಗೆ ತಿನಿಸುತ್ತಿದ್ದರು.



ಕುತೂಹಲದಿಂದ ಶ್ವಾನ ಪ್ರದರ್ಶನ ವೀಕ್ಷಿಸುತ್ತಿರುವ ಮಕ್ಕಳು, ಪೋಷಕರು

ಇದೇ ಪ್ರಥಮ ಬಾರಿಗೆ ಶ್ವಾನ ಪ್ರದರ್ಶನಕ್ಕೆಂದು ತಮ್ಮ 5 ವರ್ಷದ ಐರಿಸ್ ಶೆಟರ್ ಶ್ವಾನದೊಂದಿಗೆ ದಾವಣಗೆರೆ ಡಿಸಿಎಂ ಟೌನ್‌ಶಿಪ್ ವಾಸಿ ಬಿಂದು ಹಾಗೂ ಕೃಷ್ಣ ದಂಪತಿ ಆಗಮಿಸಿದ್ದರು. ಪ್ರಥಮ ಬಾರಿಗೆ ಪ್ರದರ್ಶನಕ್ಕೆ ಆಗಮಿಸಿದ್ದು, ಖುಷಿ ನೀಡಿದೆ. ಜೊತೆಗೆ ಬೇರೆ ಬೇರೆ ತಳಿಯ ಶ್ವಾನಗಳ ವೀಕ್ಷಣೆಗೂ ಸಹಕಾರಿಯಾಗಿದೆ ಎಂದರು. ದಾವಣಗೆರೆಯಲ್ಲಿ ಈ ತಳಿಯ ಎರಡು ಶ್ವಾನಗಳು ಮಾತ್ರ ಇರುವುದಾಗಿ ಬಿಂದು ಹೇಳಿದರು.

ಹೊಸಪೇಟೆಯಿಂದ ಬಂದಿದ್ದ ಪ್ರವೀಣ್, ಗ್ರೇಟ್ ಡೇನ್ ತಳಿಯ ಶ್ವಾನ ತಂದಿದ್ದರು. ಬಳ್ಳಾರಿಯ ಉತ್ಸವದಲ್ಲಿ ತಮ್ಮ ಶ್ವಾನವು ಪ್ರಥಮ ಬಹುಮಾನ ಪಡೆದಿತ್ತು. ಕಳೆದ ಹತ್ತು ವರ್ಷಗಳಿಂದ ವಿವಿಧೆಡೆ ಶ್ವಾನ ಪ್ರದರ್ಶನಗಳಿಗೆ ಹೋಗುತ್ತಿದ್ದೇನೆ. ತಮ್ಮ ಮುದ್ದಿನ ಶ್ವಾನಕ್ಕೆ ಬೋಂಡ ಎಂದು ಹೆಸರಿಟ್ಟಿರುವುದಾಗಿ ಹೇಳಿದರು.

ನಿಟುವಳ್ಳಿಯ ಲೆನಿನ್ ನಗರದ ಸಂತೋಷ್ 8 ತಿಂಗಳ ಸೆಂಟ್ ಬರ್ನಾಡ್ ತಳಿಯ ಶ್ವಾನದೊಂದಿಗೆ ಇದೇ ಪ್ರಥಮ ಬಾರಿಗೆ ಪ್ರದರ್ಶನಕ್ಕೆ ಆಗಮಿಸಿದ್ದರು. ಶಿವಕುಮಾರ ಸ್ವಾಮಿ ಬಡಾವಣೆಯ ಕುಶಾಲ್ ಕುಮಾರ್ ಸಹ ಪ್ರಥಮ ಬಾರಿಗೆ ರಾಟ್ ವ್ಹೀಲರ್ ತಳಿಯ 6 ತಿಂಗಳ ಶ್ವಾನ ಕರೆತಂದಿದ್ದರು. (2ನೇ ಪುಟಕ್ಕೆ)

# ರಾಣೇಬೆನ್ನೂರು : ಶೌಚಾಲಯ ಕಾಮಗಾರಿಗೆ ತಡೆ

ರಾಣೇಬೆನ್ನೂರು, ಫೆ.5- ಸ್ವಾತಂತ್ರ್ಯ ಸೇನಾನಿ ಮೆಣಸಿನಹಾಳ ತಿಮ್ಮನಗೌಡ ಪ್ರತಿಮೆ ಪಕ್ಕ ಶೌಚಾಲಯ ಕಟ್ಟುವ ಕಾರ್ಯಕ್ಕೆ ತಡೆ ಉಂಟು ಮಾಡಿ ಕೆಲಸಗಾರರನ್ನು ಅಲ್ಲಿಂದ ಓಡಿಸಿ, ಸಂಬಂಧಿಸಿದ ಅಧಿಕಾರಿಗಳಿಗೆ ಧಿಕ್ಕಾರ ಕೂಗಿದ್ದಾರೆ.



ಸ್ಥಳಕ್ಕೆ ಬಂದ ತಹಶೀಲ್ದಾರ್ ಶಂಕರ್ ಜಿ.ಎಸ್. ಗುತ್ತಿಗೆದಾರರನ್ನು ಕರೆದು ಸದ್ಯಕ್ಕೆ ಕಾಮಗಾರಿಯನ್ನು ತಟಸ್ಥಗೊಳಿಸಿರಿ ಮೇಲಾಧಿಕಾರಿಗಳ ಗಮನಕ್ಕೆ ತಂದು ಅವರ ಆದೇಶ ಆಗುವತನಕ ಯಥಾಸ್ಥಿತಿ ಕಾಯ್ದುಕೊಳ್ಳಬೇಕೆಂದರು.

ಗುತ್ತಿಗೆದಾರ ಎಂ.ಎ. ಧರವಾನ್ ಮತ್ತು ಸ್ಥಳೀಯ ವಾರ್ಡಿನ ಬಿ.ಜೆ.ಪಿ ಮುಖಂಡ ಮಂಜುನಾಥ ಖಾಕಿ ಮತ್ತು ಸ್ಟ್ಯಾಂಪ್ ವೆಂಡರ್ ಬಸವರಾಜ ಲಕ್ಮೇಶ್ವರ, ಬಸವರಾಜ ಗೌಡ ಶಿವಣ್ಣನವರ ಶೌಚಾಲಯ ನಿರ್ಮಿಸುವ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರೆ, ಪ್ರತಿಭಟನಾಕಾರರು ಯಾವುದೇ ಪರಿಸ್ಥಿತಿಯಲ್ಲಿ ಇಲ್ಲಿ ಶೌಚಾಲಯ ನಿರ್ಮಾಣಕ್ಕೆ ಅವಕಾಶ ಕೊಡುವುದಿಲ್ಲವೆಂದು ಏರು ಧ್ವನಿಯಲ್ಲಿ ಕೂಗಾಡಿದರು.

ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರುವುದನ್ನು ಮನಗಂಡ ಪಿ.ಎಸ್.ಐ. ಸುನಿಲ್ ತೇಲಿ ಅವರು ತಹಶೀಲ್ದಾರರಿಗೆ ಈ ಬಗ್ಗೆ ಮನವಿ ಕೊಡಿಸಿ ಉದ್ವಿಗ್ನಗೊಂಡ ಪರಿಸ್ಥಿತಿ ಯನ್ನು ಶಾಂತಗೊಳಿಸುವಲ್ಲಿ ಯಶಸ್ವಿಯಾದರು. ಜಿಲ್ಲಾಧಿಕಾರಿಗಳು ತುರ್ತು ಮಧ್ಯೆ ಪ್ರವೇಶಿಸಿಬೇಕೆಂದು ಹೋರಾಟ ಸಮಿತಿಯ ಅಧ್ಯಕ್ಷ ರವೀಂದ್ರಗೌಡ ಎಫ್. ಪಾಟೀಲ ಆಗ್ರಹಿಸಿದ್ದಾರೆ.

ಪ್ರತಿಭಟನೆಯ ಮುಂಚೂಣಿಯಲ್ಲಿ ವಕೀಲರಾದ ಕೆ.ಎನ್. ಕೋರಧಾನ್ಯ ಮಠ, ನಾಗರಾಜ ಕುಡಪಲಿ, ಚಂದ್ರಣ್ಣ ಬೇಡರ, ಕರಬಸಪ್ಪ ಕೋಲೆರ, ಬಸವರಾಜ ಕೊಂಗಿಯವರ, ಇಕ್ಬಾಲ್‌ಸಾಬ ರಾಣೇಬೆನ್ನೂರು, ರಾಜು ಓಲೇಕಾರ, ಬಿ.ಕೆ. ರಾನಹಹಳ್ಳಿ, ಹರಿಹರಗೌಡ ಎಸ್. ಪಾಟೀಲ ಜಗದೀಶ ಕೆರೂಡಿ, ಮಾರುತಿ ಕೂರಗುಂದ, ರಮೇಶ ಬಳ್ಳಾರಿ, ಮೌನೇಶ ಹಳ್ಳಿ, ನಾಗರಾಜ ಕಂಬಳಿ, ರಾಜೇಶ ದೊಡ್ಡಮನಿ, ರವಿ ಚೌಡಿ, ಸಂತೋಷ ವಡ್ಡರ, ಸುರೇಶ ಎಚ್., ದೇವೇಂದ್ರಪ್ಪ ಎ., ಎಚ್.ಕೆ. ಮೈಲಾರ ಮತ್ತಿತರರು ಹೋರಾಟದಲ್ಲಿ ಭಾಗವಹಿಸಿದ್ದರು.

# ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕು ಸಮಗ್ರ ಅಭಿವೃದ್ಧಿ ನನ್ನ ಕರ್ತವ್ಯ



ನ್ಯಾಮತಿ, ಫೆ.5- ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕುಗಳ ಸಮಗ್ರ ಅಭಿವೃದ್ಧಿ ನನ್ನ ಕರ್ತವ್ಯ ಈ ನಿಟ್ಟಿನಲ್ಲಿ ನಾನು ಕೆಲಸ ಮಾಡುತ್ತಿದ್ದೇನೆಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ಹೇಳಿದರು.

ತಾಲ್ಲೂಕಿನ ಸುರಹೊನ್ನೆ ಗ್ರಾಮದ ಎಸ್.ಟಿ. ರಸ್ತೆಯಲ್ಲಿ ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ಶ್ರೀ ಪಟ್ಟಸಾಲಿ ನೇಕಾರರ ಸಮುದಾಯ ಭವನಕ್ಕೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕುಗಳು ನನ್ನ ಎರಡು ಕಣ್ಣುಗಳು, ಅವುಗಳ ಸರ್ವತೋಮುಖ ಅಭಿವೃದ್ದಿ ನನ್ನ ಕರ್ತವ್ಯ ಎಂದ ಶಾಸಕರು, ಈ ನಿಟ್ಟಿನಲ್ಲಿ ಅವಳಿ ತಾಲ್ಲೂಕಿನ ಪ್ರತಿಯೊಂದು ಹಳ್ಳಿಗಳನ್ನು ಸಮಗ್ರವಾಗಿ ಅಭಿವೃದ್ದಿ ಮಾಡಲಾಗಿದೆ ಎಂದರು.

ಸುರಹೊನ್ನೆ ಗ್ರಾಮವನ್ನು ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ಅಭಿವೃದ್ದಿ ಮಾಡಲಾಗುತ್ತಿದ್ದು, ಈಗಾಗಲೇ ಸುರ ಹೊನ್ನೆ ಗ್ರಾಮವನ್ನು 30 ಕೋಟಿಗೂ ಹೆಚ್ಚು ಅನುದಾನದಲ್ಲಿ ಸಮಗ್ರವಾಗಿ ಅಭಿವೃದ್ಧಿ ಮಾಡಲಾಗಿದೆ ಎಂದರು.

ಸುರಹೊನ್ನೆ ಗ್ರಾಮದ ಪ್ರತಿಯೊಂದು ರಸ್ತೆಗಳನ್ನು ಸಿಸಿ ರಸ್ತೆ ಮಾಡಿಸಿದ್ದು ಇಡೀ ಗ್ರಾಮವನ್ನು ಧೂಳು ಮುಕ್ತ ಗ್ರಾಮವನ್ನಾಗಿ ಮಾಡಲಾಗಿದೆ ಎಂದ ಶಾಸಕರು, ಅವಳಿ ತಾಲ್ಲೂಕಿನ ಪ್ರತಿಯೊಂದು ಹಳ್ಳಿಗಳನ್ನು ಅಭಿವೃದ್ದಿ ಮಾಡುವ ಮೂಲಕ ಅವಳಿ ತಾಲ್ಲೂಕುಗಳನ್ನು ಧೂಳು ಮುಕ್ತ ತಾಲ್ಲೂಕು ಮಾಡಿದ್ದೇನೆಂದರು.

ಈ ಸಂದರ್ಭದಲ್ಲಿ ನೇಕಾರ ಸಮಾಜದ ಅಧ್ಯಕ್ಷ ಹುಚ್ಚರಾಯಪ್ಪ(ದೊಡ್ಡಪ್ಪ) ಗ್ರಾ.ಪಂ ಮಾಜಿ ಅಧ್ಯಕ್ಷ ಹಾಲೇಶ್, ಗ್ರಾ.ಪಂ.ಸದಸ್ಯರುಗಳು, ತಾ.ಪಂ. ಮಾಜಿ ಸದಸ್ಯ ಸಿದ್ದಲಿಂಗಪ್ಪ ಸೇರಿದಂತೆ ಸಮಾಜದ ಮುಖಂಡರು, ಗ್ರಾಮದ ಮುಖಂಡರಿದ್ದರು.

# ಸಾಮೂಹಿಕ ವಿವಾಹದಿಂದ ಬಡವರ ಕಲ್ಯಾಣ



**(1ನೇ ಪುಟದಿಂದ)** ಭೇದ ಇಲ್ಲದೆ ಶ್ರೀ ಮುರುಘಾ ಮಠ ಸಾಮೂಹಿಕ ಕಲ್ಯಾಣ ಮಹೋತ್ಸವ ಮಾಡುತ್ತಾ ಬಂದಿದೆ. ಶರಣರನ್ನು ಒಗ್ಗೂಡಿಸುವ ಶಕ್ತಿ ಶ್ರೀಮಠಕ್ಕೆ ಇದೆ. ವಿವಾಹವಾದ ನಂತರ ಸತಿ-ಪತಿಗಳು ದಾಂಪತ್ಯ ಬದುಕಿನಲ್ಲಿ ಶಾಂತಿ ಸ್ಥಾಪನೆ ಮಾಡಿಕೊಳ್ಳಬೇಕು. ಹೊಂದಾಣಿಕೆ ಮನೋಭಾವ ಮುಖ್ಯ. ಸಂಸಾರದಲ್ಲಿ ಅನ್ಯೋನ್ಯತೆ ಮುಖ್ಯ. ಪರಸ್ಪರ ಅರಿತು ಜೀವನ ಸಾಗಿಸಬೇಕು. ಸಂಸಾರದಲ್ಲಿ ವಿಷಮತೆ ಬರಬಾರದು. ಇದ್ದಷ್ಟು ಕಾಲ ಕರುಣೆಯಿಂದ ಕೆಲಸ ನಿರ್ವಹಿಸಬೇಕು. ಯಾರನ್ನೂ ನಿಂದಿಸಬಾರದು. ಸಮಸ್ಯೆಗಳಿಂದ ಹೊರಬರಬೇಕಾದರೆ ಶ್ರೀಗುರುವಿನ ಮೊರೆ ಹೋಗಬೇಕೆಂದರು.

ಸಮ್ಮುಖ ವಹಿಸಿದ್ದ ಶಿವಶರಣ ಹರಳಯ್ಯ ಗುರುಪೀಠದ ಶ್ರೀ ಬಸವ ಹರಳಯ್ಯ ಸ್ವಾಮೀಜಿ ಮಾತನಾಡಿ, ದೀನ ದಲಿತರು, ಮೇಲ್ವರ್ಗ ಮತ್ತು ಕೆಳವರ್ಗದವರ ಜತೆಗೆ ಕುಳಿತು ವಿವಾಹವಾಗುವ ಮೂಲಕ ಅಸ್ಪೃಶ್ಯತೆ ನಿವಾರಣೆಯಾಗಬೇಕೆಂಬುದು ಸಾಮೂಹಿಕ ಕಲ್ಯಾಣ ಮಹೋತ್ಸವದ ಉದ್ದೇಶ ಹಾಗೂ ಅದ್ದೂರಿ ವಿವಾಹಗಳಿಗೆ ನಾಂದಿ ಹಾಡಬೇಕೆಂದು ಸರಳವಾಗಿ ವಿವಾಹಗಳನ್ನು ಶ್ರೀಗಳು ನಡೆಸುತ್ತಿದ್ದಾರೆ. 33 ವರ್ಷಗಳಿಂದ ವಿವಾಹ ನಿರಂತರವಾಗಿ ಮಾಡುವುದೆಂದರೆ ಸುಲಭದ ಮಾತಲ್ಲ. ಸತ್ಯ ಹೇಳಿದ್ದರಿಂದ ಅನೇಕ ದಾರ್ಶನಿಕರು ನೋವನ್ನು ಅನುಭವಿಸಿದರು. ಸೂರ್ಯನನ್ನು ಮೋಡ ಮುಚ್ಚಿಡಲು ಸಾಧ್ಯವಿಲ್ಲ. ಸತ್ಯ ಯಾವಾಗಲೂ ಉರಿಯುವ ಸೂರ್ಯನಿದ್ದಂತೆ. ಇಡೀ ರಾಜ್ಯ ದೇಶಕ್ಕೆ ನೀತಿ ಬೋಧನೆಯನ್ನು ಹೇಳಿಕೊಟ್ಟ ಮಠ. ಇದೊಂದು ಶಕ್ತಿ ಪೀಠ. ಮನಸ್ಸುಗಳು ಒಂದಾದಾಗ ಅದು ಕಲ್ಯಾಣ ಮಹೋತ್ಸವವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕುರುಬ (ವರ) - ಕ್ರಿಶ್ಚಿಯನ್ (ವಧು) ಅಂತರ್ಜಾತಿ ಸೇರಿದಂತೆ ನಾಯಕ - 2 ಮತ್ತು ವಿಶ್ವಕರ್ಮ - 2 ಜತೆ ಸೇರಿದಂತೆ, ಒಟ್ಟು 5 ಜೋಡಿ ವಿವಾಹ ನೆರವೇರಿತು. ಪೈಲ್ವಾನ್ ತಿಪ್ಪೇಸ್ವಾಮಿ, ಜ್ಞಾನಮೂರ್ತಿ ಮತ್ತಿತರರಿದ್ದರು.

ಜಮುರಾ ಕಲಾವಿದರು ಪ್ರಾರ್ಥಿಸಿದರು. ಬಸವಲಿಂಗ ದೇವರು ಸ್ವಾಗತಿಸಿದರು. ಪ್ರಕಾಶ ದೇವರು ನಿರೂಪಿಸಿದರು.

# ಕೊಟ್ಟೂರು ಭಕ್ತರಿಗೆ ಮೊದಲ ರ್‍ಯಾಂಕ್

**(1ನೇ ಪುಟದಿಂದ)** ಹುತಾತ್ಮ ಯೋಧರ ಕುಟುಂಬದವರಿಗೆ ತಲಾ ಒಂದು ಲಕ್ಷ ರೂ.ಗಳನ್ನು ನೀಡಿ ಗೌರವ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಸ್ವಾಮೀಜಿ ಸಂಪ್ರದಾಯ ಮುರಿದು ಸಿಂಹಾಸನದಿಂದ ಕೆಳಗಿಳಿದು ಬಂದು ಹುತಾತ್ಮರಿಗೆ ಗೌರವ ಅರ್ಪಿಸಿದರು.

10 ಹುತಾತ್ಮ ಯೋಧರ ಕುಟುಂಬದವರು ಬಯಸಿದಲ್ಲಿ, ಪದವಿಯವರೆಗೆ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಭವ ಮಂಟಪದ ಶಿಕ್ಷಣ ಸಂಸ್ಥೆಯಲ್ಲಿ ಉಚಿತವಾಗಿ ವ್ಯವಸ್ಥೆ ಮಾಡಲಾಗುವುದು ಎಂದೂ ಶ್ರೀಗಳು ಹೇಳಿದರು. ಮುಂದಿನ ತರಳಬಾಳು ಹುಣ್ಣಿಮೆ ಮಹೋತ್ಸವವನ್ನು ಭರಮಸಾಗರದಲ್ಲಿ ನಡೆಸಲಾಗುವುದೆಂದು ತರಳಬಾಳು ಜಗದ್ಗುರುಗಳು ತಿಳಿಸಿದರು.

# ಜನಸಾಗರದಲ್ಲಿ ಅಡ್ಡಪಲ್ಲಕ್ಕಿ ಉತ್ಸವ

**(1ನೇ ಪುಟದಿಂದ)** ರಸ್ತೆಗಳು ಜನರಿಂದ ತುಂಬಿ ತುಳುಕುತ್ತಿದ್ದವು.

ಸಂಜೆ ನಡೆದ ಸಮಾರಂಭದಲ್ಲಿ, ಸಂಪ್ರದಾಯದಂತೆ ಶ್ರೀಗಳು ಸದ್ಧರ್ಮ ಸಿಂಹಾಸನವನ್ನು ಅಲಂಕರಿಸಿದರು.

ಇದೇ ವೇಳೆ, ಹಳೇಬೀಡಿನಲ್ಲಿ ನಡೆದ ತರಳಬಾಳು ಹುಣ್ಣಿಮೆಯ ಜಮಾ ಖರ್ಚಿನ ಬಗ್ಗೆ ವಿವರ ನೀಡಲಾಯಿತು. ಜಮಾ ಆಗಿರುವುದು 1.87 ಕೋಟಿ ರೂ. ಹಾಗೂ ಖರ್ಚಾಗಿರುವುದು 97 ಲಕ್ಷ ರೂ. ಉಳಿದ ಹಣದಲ್ಲಿ ಹಳೇಬೀಡಿನಲ್ಲಿ ನಾಟ್ಯರಾಣಿ ಶಾಂತಲಾ ಶಾಲಾ ಕಟ್ಟಡವನ್ನು ನಿರ್ಮಿಸಲಾಗುವುದು ಎಂದು ಸಭೆಗೆ ತಿಳಿಸಲಾಯಿತು. ಹುತಾತ್ಮ ಯೋಧರಿಗೆ ಇದೇ ವೇಳೆ ನಮನ ಸಲ್ಲಿಸಲಾಯಿತು. ಹುತಾತ್ಮರ ಕುಟುಂಬಗಳಿಗೆ ತಲಾ 1 ಲಕ್ಷ ರೂ.ಗಳ ಆರ್ಥಿಕ ನೆರವಿನ ಸಾಂತ್ವನ ನೀಡಲಾಯಿತು.

# ಆಕಸ್ಮಿಕ ಲಾಭ ತೆರಿಗೆ ಹೆಚ್ಚಿಸಿದ ಕೇಂದ್ರ

**(1ನೇ ಪುಟದಿಂದ)** ಜಾರಿಗೆ ಬಂದಿದೆ. ಜಾಗತಿಕ ಮಾರುಕಟ್ಟೆಯಲ್ಲಿರುವ ಬೆಲೆ ಯನ್ನು ಪರಿಗಣಿಸಿ ತಿಂಗಳಿಗೆ ಎರಡು ಬಾರಿ ತೆರಿಗೆಗಳನ್ನು ಪರಿಷ್ಕರಿಸಲಾಗುತ್ತಿದೆ. ಕಳೆದ ವರ್ಷ ಜುಲೈ 1ರಂದು ಕೇಂದ್ರ ಸರ್ಕಾರ ಆಕಸ್ಮಿಕ ಲಾಭದ ಮೇಲೆ ತೆರಿಗೆ ಹೇರಿತ್ತು.

# ಸಂಭ್ರಮದ ಹರಿಹರೇಶ್ವರ ರಥೋತ್ಸವ

**(1ನೇ ಪುಟದಿಂದ)** ಕೊಣ್ಣೂರು ಕುಟುಂಬದವರು ಮತ್ತು ವಿವಿಧ ಸಂಘ ಸಂಸ್ಥೆಗಳಿಂದ ಭಕ್ತರಿಗೆ ಮಜ್ಜಿಗೆ, ಪಾನಕ, ಕೋಸುಂಬರಿ, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿತ್ತು.

ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕ ಹೆಚ್. ಎಸ್. ಶಿವಶಂಕರ್, ಹನಗವಾಡಿ ವೀರೇಶ್, ಕಸಬಾ ಗೌಡ್ರು ಲಿಂಗರಾಜ್ ಪಾಟೀಲ್, ಮಾಜೇನಹಳ್ಳಿ ಗೌಡ್ರು ಚನ್ನಬಸಪ್ಪ, ನಗರಸಭೆ ಸದಸ್ಯರಾದ ಕೆ.ಜಿ. ಸಿದ್ದೇಶ್, ಶಂಕರ್ ಖಟಾವ್‌ಕರ್, ಗುತ್ತೂರು ಜಂಬಣ್ಣ, ಲಕ್ಷ್ಮಿ ದುರುಗೋಜಿ ಮೋಹನ್, ನಿಂಬಕ್ಕ ಚಂದಪೂರ್, ಪಕ್ಕೀರಮ್ಮ, ಪಿ.ಎನ್. ವಿರುಪಾಕ್ಷಪ್ಪ, ಕವಿತಾ ಮಾರುತಿ, ಮುಖಂಡರಾದ ಚಂದ್ರಶೇಖರ್ ಪೂಜಾರ್, ನಂದಿಗಾವಿ ಶ್ರೀನಿವಾಸ್, ಎಂ. ನಾಗೇಂದ್ರಪ್ಪ, ಟಿ.ಜೆ. ಮುರುಗೇಶಪ್ಪ, ಗಣೇಶ ದುರ್ಗದ, ಶಿವಪ್ರಕಾಶ್ ಶಾಸ್ತ್ರಿ, ರಾಘವೇಂದ್ರ, ಅಜಿತ್ ಸಾವಂತ್, ಶಿವಯೋಗಿ ಸ್ವಾಮಿ ಕತ್ತಲಗೇರಿ, ಕರಿಬಸಪ್ಪ ಕಂಚಿಕೇರಿ, ಹೆಚ್.ಎಸ್. ರಾಘವೇಂದ್ರ, ಆನಂದ ವಕೀಲರು, ಕೆ.ಬಿ. ರಾಜಶೇಖರ್, ಅದ್ವೈತ ಶಾಸ್ತ್ರಿ, ಹೆಚ್. ನಿಜಗುಣ, ಬಸವರಾಜ್ ಪಾಟೀಲ್, ಭೋಜರಾಜ್, ಕೃಷ್ಣ ರಾಜೊಳ್ಳಿ, ದಿನೇಶ್ ಕಣ್ಣೂರು, ಎನ್. ಮಂಜುನಾಥ್, ಸುರೇಶ್ ಚಂದಪೂರ್, ಚಿದಾನಂದ ಕಂಚಿಕೇರಿ, ವಾಸು ಚಂದಪೂರ್, ರಮೇಶ್ ಮಾನೆ, ಗೋವಿಂದ, ಶಿವು, ಚಂದನ್ ಮೂರ್ಕಲ್, ಗಿರೀಶ್ ಗೌಡ, ಅಣ್ಣಪ್ಪ, ಪ್ರಧಾನ ಅರ್ಚಕರು ಶ್ರೀನಿವಾಸಮೂರ್ತಿ, ಗುರುಪ್ರಸಾದ್, ತಾಲ್ಲೂಕು ಆಡಳಿತದ ಆನಂದ್, ಹೇಮಂತ್ ಕುಮಾರ್, ಆರ್. ಐ ಮಂಜುನಾಥ್, ಸಂಗಿತಾ ಜೋಷಿ ಶಾನಭೋಗರು ವಾರಿಜಾ ವೆಂಕಟೇಶ್, ಹರಿಶಂಕರ್, ಚಿದಂಬರ ಜೋಯಿಸರು, ನೀಲಪ್ಪ, ರಾಘವೇಂದ್ರ ಕಂಚಿಕೇರಿ ಇತರರು ಹಾಜರಿದ್ದರು. ಪೊಲೀಸ್ ಇಲಾಖೆಯ ವೃತ್ತ ನಿರೀಕ್ಷಕ ಎಸ್ ದಯಾನಂದ್, ಪಿಎಸ್‌ಐ ಶಂಕರ್ ಗೌಡ ಪಾಟೀಲ್, ಮಲೇಬೆನ್ನೂರು ಪಿಎಸ್‌ಐ ಪ್ರಭು ಕೆಳಗಿನಮನೆ, ಗುತ್ತೂರು ಗ್ರಾಮಾಂತರ ಠಾಣೆಯ ಪಿಎಸ್‌ಐ ಎಂ.ರಾಜು ಮತ್ತು ಸಿಬ್ಬಂದಿಗಳು ಸೂಕ್ತ ಬಂದೋಬಸ್ತ್ ಕಲ್ಪಿಸಿದ್ದರು.

# ಪ್ರಯೋಗಾಲಯಕ್ಕೆ ಭೂಮಿ ಪೂಜೆ

**ಜಿಲ್ಲೆಗೆ ಮೆಡಿಕಲ್ ಕಾಲೇಜು ಕೊಡಬೇಕೆಂದು ನಾನೂ ಸಹ ಹಿಂದಿನ ಸಿಎಂ ಬಿ.ಎಸ್. ಯಡಿಯೂರಪ್ಪ ಹಾಗೂ ಈಗಿನ ಸಿಎಂ ಬಸವರಾಜ ಬೊಮ್ಮಾಯಿ ಅವರಿಗೆ ಒತ್ತಾಯ ಮಾಡಿದ್ದೆ. ಆದರೆ, ಯಾರ ಪ್ರಚೋದನೆಯಿಂದ ಕೈಬಿಡಲಾಗಿದೆ ಎಂಬುದು ಗೊತ್ತಿಲ್ಲ. ಅದು ಸದ್ಯವೇ ಗೊತ್ತಾಗಲಿದೆ.**

**- ಜಿ.ಎಂ. ಸಿದ್ದೇಶ್ವರ, ಸಂಸದ**

**(1ನೇ ಪುಟದಿಂದ)** ಮಾಡಿದ್ದ ಟ್ರಾಮಾ ಸೆಂಟರನ್ನು ವರ್ಷದೊಳಗೆ ಮುಗಿಸುವುದಾಗಿ ಅಧಿಕಾರಿ ಹೇಳಿದ್ದರು. ಈಗ ಇದೇ 28ಕ್ಕೆ ಕಾಮಗಾರಿ ಪೂರ್ಣಗೊಳಿಸುವುದಾಗಿ ಹೇಳುತ್ತಿದ್ದಾರೆ. ಅಂದೇ ಟ್ರಾಮಾ ಸೆಂಟರ್ ಉದ್ಘಾಟಿಸಲಾಗುವುದು ಎಂದು ಹೇಳಿದರು.

ಪ್ರಯೋಗಾಲಯ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿದ ಬಳಿಕ ನಗರದ ತೊಗಟವೀರ ಕಲ್ಯಾಣ ಮಂಟಪದ ಬಳಿ ವೈದ್ಯಕೀಯ ಸಿಬ್ಬಂದಿಗಳಿಗಾಗಿ ನಿರ್ಮಿಸಿರುವ 14 ಮನೆಗಳುಳ್ಳ ವಸತಿ ಸಮುಚ್ಚಯವನ್ನು ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಶಾಸಕ ಎಸ್.ಎ. ರವೀಂದ್ರನಾಥ್, ಪಾಲಿಕೆ ಮೇಯರ್ ಜಯಮ್ಮ ಗೋಪಿನಾಯ್ಕ, ಡಿಎಚ್‌ಓ ಡಾ.ನಾಗರಾಜ್, ಜಿಲ್ಲಾಸ್ಪತ್ರೆ ಅಧೀಕ್ಷಕ ಡಾ.ಷಣ್ಮುಖಪ್ಪ, ಪಾಲಿಕೆ ಸದಸ್ಯ ಪ್ರಸನ್ನ ಕುಮಾರ್, ಆರೋಗ್ಯ ರಕ್ಷ ಸಮಿತಿಯ ಟಿಂಕರ್ ಮಂಜಣ್ಣ, ಕಿಶೋರ್ ಮತ್ತಿತರರಿದ್ದರು.

# ನಿಟ್ಟೂರಿನಲ್ಲಿ ಸ್ವಚ್ಛ ಸಂಕೀರ್ಣ ಘಟಕ ಉದ್ಘಾಟನೆ



ಮಲೇಬೆನ್ನೂರು, ಫೆ. 5 - ಕುಂಬಳೂರು ಗ್ರಾ.ಪಂ. ವತಿಯಿಂದ ನಿಟ್ಟೂರು ಸಮೀಪ ಉದ್ಯೋಗ ಖಾತರಿ ಯೋಜನೆ ಮತ್ತು 15ನೇ ಹಣಕಾಸು ಯೋಜನೆ ಅಡಿ ನಿರ್ಮಿಸಿರುವ ಸ್ವಚ್ಛ ಸಂಕೀರ್ಣ ಘಟಕವನ್ನು ಶಾಸಕ, ಎಸ್. ರಾಮಪ್ಪ ಅವರು ಉದ್ಘಾಟಿಸಿದರು.

ಈ ವೇಳೆ ಕಸ ಸಂಗ್ರಹ ಬಕೇಟ್‌ಗಳನ್ನು ವಿತರಿಸಿ ಮಾತನಾಡಿದ ಶಾಸಕ ರಾಮಪ್ಪ ಅವರು, ಗ್ರಾಮದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಿ ಯಾವುದೇ ಕಾಯಿಲೆಗಳು ಬರದಂತೆ ಎಚ್ಚರವಹಿಸಿ ಎಂದು ಗ್ರಾಮಸ್ಥರಿಗೆ ಮನವಿ ಮಾಡಿದರು.

ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಲೀಲಾ ಶಿವಕುಮಾರ್, ಉಪಾಧ್ಯಕ್ಷ ಎ.ಕೆ.ಹನುಮಂತಪ್ಪ, ಗ್ರಾ.ಪಂ ಸದಸ್ಯರಾದ ಎನ್. ಕಲ್ಲೇಶ್, ಕೆ. ನಾಗೇಂದ್ರಪ್ಪ, ಕೆ ಆನಂದಪ್ಪ, ಶ್ರೀಮತಿ ಉಮಾದೇವಿ, ಶಿವರಾಮಚಂದ್ರಪ್ಪ, ಶ್ರೀಮತಿ ಮಧು ತಿಮ್ಮಣ್ಣ, ಶ್ರೀಮತಿ ದುರುಗಮ್ಮ ಮಹೇಶಪ್ಪ, ಎಸ್.ಜಿ. ಆನಂದಪ್ಪ, ವಿನಾಯಕ ನಗರ ಕ್ಯಾಂಪಿನ ಶ್ರೀನಿವಾಸ. ನಿಟ್ಟೂರಿನ ಬಿ.ಜಿ. ಉಮಾಪತಿ, ಶ್ರೀಮತಿ ವನಿತಾ ವಿಲಾಸ್ ಗೌಡ, ಶ್ರೀಮತಿ ಲಕ್ಷ್ಮೀದೇವಿ ರಂಗನಾಥ್, ಎಸ್.ಆರ್. ಅನಂತ್‌ಕುಮಾರ್, ಚಂದ್ರಮ್ಮ, ಮಂಜಮ್ಮ, ಅಕ್ಕಮ್ಮ ತಿಪ್ಪೇಶ್, ಶ್ರೀಮತಿ ಗಾಯಿತ್ರಿ ಆಂಜನೇಯ, ಕೆ ಅಣ್ಣಪ್ಪ, ಎಸ್.ಜಿ. ಆನಂದಪ್ಪ, ಗ್ರಾಮದ ಮುಖಂಡರಾದ ಕೆ ಏಕಾಂತಪ್ಪ, ಈರುಳ್ಳಿ ಹನುಮಂತಪ್ಪ, ಎಸ್.ಜಿ. ಪ್ರಭುದೇವ್, ವಿ.ಧನಂ ಜಯ್, ಕುಂಬಳೂರಿನ ಮುಖಂಡರಾದ ಹುಲ್ಮನಿ ನಿಂಗಪ್ಪ, ಆರ್.ಹೆಚ್. ಬಸವರಾಜ್, ಎಂ. ವಾಸುದೇವ್ ಮೂರ್ತಿ, ತಾ.ಪಂ. ಮಾಜಿ ಅಧ್ಯಕ್ಷ ಆದಾಪುರ ವೀರ ಭದ್ರಪ್ಪ ,ಸೇರಿದಂತೆ ಇನ್ನೂ ಅನೇಕರು ಭಾಗವಹಿ ಸಿದ್ದರು. ತಾ.ಪಂ.ಇಓ. ಗಂಗಾಧರನ್ ಅವರು ಸ್ವಚ್ಛ ಸಂಕೀರ್ಣ ಘಟಕದ ಮಹತ್ವವನ್ನು ವಿವರಿಸಿದರು.

ಪಿ.ಡಿ.ಓ ಮೂರ್ತಿ ಸ್ವಾಗತಿಸಿದರು, ಕಾರ್ಯದರ್ಶಿ ರಾಜ್ ಕುಮಾರ್ ವಂದಿಸಿದರು.

# ಇಂದಿನಿಂದ ಜಿಲ್ಲೆಯಲ್ಲಿ 'ಕರುನಾಡ ಕಟ್ಟೋಣ ಅಭಿಯಾನ'

ದಾವಣಗೆರೆ, ಫೆ. 5- ಜಿಲ್ಲೆಯಲ್ಲಿ ನಾಳೆ ದಿನಾಂಕ 6 ಮತ್ತು 7 ರಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷವು 'ಕರುನಾಡ ಕಟ್ಟೋಣ' ಅಭಿಯಾನ ಹಮ್ಮಿಕೊಂಡಿದ್ದು, ದಿನಾಂಕ 8 ರಂದು ಪಕ್ಷದ ರಾಜ್ಯಾಧ್ಯಕ್ಷ ರವಿಕೃಷ್ಣ ರೆಡ್ಡಿ ದಾವಣಗೆರೆಗೆ ಆಗಮಿಸಲಿದ್ದಾರೆ ಎಂದು ಪಕ್ಷದ ಯುವ ಘಟಕದ ಜಿಲ್ಲಾಧ್ಯಕ್ಷ ಎನ್.ಎಸ್. ಅಭಿಷೇಕ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕನ್ನಡ ನಾಡಿನ ಪ್ರಣಾಳಿಕೆ ಕುರಿತು ಸ್ವಾಭಿಮಾನಿ ಕನ್ನಡಿಗರ ಜೊತೆ ಸಂವಾದ ಅಭಿಯಾನವನ್ನು ಎರಡು ದಿನಗಳ ಕಾಲ ಜಿಲ್ಲೆಯಾದ್ಯಂತ ಹಮ್ಮಿಕೊಂಡಿದೆ ಎಂದು ಹೇಳಿದರು.

ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಮುಂದಿನ ದಿನಗಳಲ್ಲಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ಸುಸ್ಥಿರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ಸಂವಾದ ನಡೆಸಲಿದೆ ಎಂದು ತಿಳಿಸಿದರು. ಜನರ ಸಮಸ್ಯೆಗಳನ್ನು ಆಲಿಸಿ, ಅವರಿಗೆ ಅವಶ್ಯಕ ಯೋಜನೆಗಳನ್ನು ಜಾರಿಗೆ ತಂದರೆ ಒಳಿತಾಗುತ್ತದೆ ಎಂಬುದರ ಬಗ್ಗೆ ಚರ್ಚಿಸಲಾಗುವುದು. ಎಲ್ಲಾ ಹೋಬಳಿಗಳಲ್ಲೂ ಸಂಚರಿಸಲಿದ್ದು, ಜನಸ್ಪಂದನ ಕಾರ್ಯಕ್ರಮ, ಮನೆ ಮನೆಗಳ ಭೇಟಿ ಹಾಗೂ ಬೀದಿ ಸಭೆಗಳನ್ನು ಆಯೋಜಿಸಲಾಗುವುದು ಎಂದು ಮಾಹಿತಿ ನೀಡಿದರು.

ಅಭಿಯಾನದಲ್ಲಿ ರಾಜ್ಯ ಸಮಿತಿ ಸಂಘಟನಾ ಕಾರ್ಯದರ್ಶಿ ಜ್ಞಾನಸಿಂಧು ಸ್ವಾಮಿ ಪಾಲ್ಗೊಳ್ಳಲಿದ್ದಾರೆ. ದಿನಾಂಕ 8 ರಂದು ಆಗಮಿಸಲಿರುವ ರಾಜ್ಯಾಧ್ಯಕ್ಷ ರವಿಕೃಷ್ಣ ರೆಡ್ಡಿ ಅವರು ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮುಂಬರುವ ಚುನಾವಣೆಯನ್ನು ನ್ಯಾಯ, ಭ್ರಷ್ಟಾಚಾರ ಮುಕ್ತ ಮಾಡು ವಂತೆ ಮನವಿ ಸಲ್ಲಿಸಲಿದ್ದಾರೆ ಎಂದು ಹೇಳಿದರು. ಪತ್ರಿಕಾಗೋಷ್ಠಿ ಯಲ್ಲಿ ಟಿ. ಅಜ್ಜೇಶ್, ವೀರಭದ್ರಪ್ಪ, ಹೆಚ್.ಕೆ. ದಾವುಲ್ ಸಾಬ್ ಮತ್ತಿತರರಿದ್ದರು.

# ಆನಗೋಡು : ಅಪರಿಚಿತ ಪುರುಷನ ಶವ ಪತ್ತೆ

ದಾವಣಗೆರೆ, ಫೆ.5- ತಾಲ್ಲೂಕಿನ ಆನಗೋಡು ಪಾರ್ಕ್ ಹತ್ತಿರ ಇಂದು 40 ರಿಂದ 50 ವರ್ಷದ ಪುರುಷನ ಶವ ಪತ್ತೆಯಾಗಿದ್ದು, ದುಂಡು ಮುಖ, ಎಣ್ಣೆಗೆಂಪು ಮೈಬಣ್ಣ, ದೃಢವಾದ ಮೈಕಟ್ಟು ಹೊಂದಿರುತ್ತಾನೆ. ಈತನು ತಿಳಿ ಗುಲಾಬಿ ಬಣ್ಣದ ತುಂಬು ತೋಳಿನ ಶರ್ಟ್ ಹಾಗೂ ಕಪ್ಪು ಜೀನ್ಸ್ ಪ್ಯಾಂಟ್ ಧರಿಸಿರುತ್ತಾನೆ. ಹಣೆಮೇಲೆ ನಾರುಳ್ಳಿ ಇರುತ್ತದೆ. ಈತನು ಕುತ್ತಿಗೆಯಲ್ಲಿ ಪಾಂಡುರಂಗ ಮಾಲೆ ಇದೆ ಎಂದು ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯ ಪೊಲೀಸ್ ಉಪನಿರೀಕ್ಷಕರು ತಿಳಿಸಿದ್ದಾರೆ. ಸಂಬಂಧಿಸಿದವರು ದಾವಣಗೆರೆ ಗ್ರಾ. ಪೊಲೀಸ್ ಠಾಣೆ, ದೂರವಾಣಿ : 08192-262555, ಮೊ: 94808 03256, ದಾವಣಗೆರೆ ಪೊಲೀಸ್ ಕಂಟ್ರೋಲ್ ರೂಂ. ದೂರವಾಣಿ : 08192-253100 ಇವರನ್ನು ಸಂಪರ್ಕಿಸಬಹುದು.

# 200ಕ್ಕೂ ಹೆಚ್ಚು ಶ್ವಾನಗಳು

**(1ನೇ ಪುಟದಿಂದ)** ದಾವಣಗೆರೆಯ ಮಮತಾ ದೇವರಾಜ್, 5 ತಿಂಗಳ ಚೌಚೌ ತಳಿಯ ಶ್ವಾನವನ್ನು ಕರೆ ತಂದಿದ್ದರು. ಪ್ರಿನ್ಸ್ ಹೆಸರಿನ ಈ ಶ್ವಾನ, ಜ್ಯೂನಿಯರ್ ಹ್ಯಾಂಡ್ಲರ್ ಪ್ರಶಸ್ತಿ ಪಡೆದಿದ್ದಾಗಿ ಹೇಳಿದರು.

ದಾವಣಗೆರೆ ಪೆಟ್ ಲವರ್ಸ್ ಅಸೋಸಿಯೇಷನ್ ವತಿಯಿಂದ ಪ್ರದರ್ಶನ ಏರ್ಪಡಿಸಲಾಗಿತ್ತು. ಬೆಸ್ಟ್ ಇನ್ ಶೋ ವಿಭಾಗದಲ್ಲಿ ಪ್ರಥಮ ಬಹುಮಾನ 25 ಸಾವಿರ, 15 ಸಾವಿರ ದ್ವಿತೀಯ ಹಾಗೂ 10 ಸಾವಿರ ರೂ. ತೃತೀಯ ಬಹುಮಾನವಿತ್ತು. ಬೆಸ್ಟ್ ಇನ್ ಪಪ್ಪಿ ವಿಭಾಗದಲ್ಲಿ ಪ್ರಥಮ 5 ಸಾವಿರ, ದ್ವಿತೀಯ 3ಸಾವಿರ ಹಾಗೂ 2 ಸಾವಿರ ತೃತೀಯ ಬಹುಮಾನ ನಿಗದಿಯಾಗಿತ್ತು. ಭಾರತೀಯ ತಳಿಗಳಿಗೆ ಬೆಸ್ಟ್ ಅಡಲ್ಟ್ ವಿಭಾಗಲ್ಲಿ 3 ಸಾವಿರ ರೂ. ಹಾಗೂ ಬೆಸ್ಟ್ ಪಪ್ಪಿ ವಿಭಾಗದಲ್ಲಿ 2 ಸಾವಿರ ರೂ. ಬಹುಮಾನ ನೀಡಲಾಯಿತು.

# 232 ಆಪ್‌ಗಳಿಗೆ ಸರ್ಕಾರದ ತಡೆ

**(1ನೇ ಪುಟದಿಂದ)** ಕೇಂದ್ರ ಸರ್ಕಾರ ತಿಳಿಸಿದೆ. ಚೀನಾ ಸೇರಿದಂತೆ ಹೊರ ದೇಶಗಳಿಂದ ಈ ಆಪ್‌ಗಳನ್ನು ನಿರ್ವಹಿಸಲಾಗುತ್ತಿತ್ತು. ಇವು ದೇಶದ ಆರ್ಥಿಕ ಸ್ಥಿರತೆಗೆ ಧಕ್ಕೆ ತರುತ್ತಿದ್ದವು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

# ಕಂಚಿಕೇರಿಯಲ್ಲಿ ಸಾಮೂಹಿಕ ವಿವಾಹ

ಹರಪನಹಳ್ಳಿ, ಫೆ.5- ತಾಲ್ಲೂಕಿನ ಕಂಚಿಕೇರಿ ಗ್ರಾಮದ ಕೋಡಿ ಸಿದ್ದೇಶ್ವರ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಇದೇ ದಿನಾಂಕ 12ರಂದು ಸಾಮೂಹಿಕ ವಿವಾಹ ಕಾರ್ಯಕ್ರಮ ಜರುಗಲಿದೆ ಎಂದು ಸಂಘಟಕ ಡಾ. ಬಿದ್ರಿ ಕೊಟ್ರೇಶ್ ತಿಳಿಸಿದ್ದಾರೆ.

ಲಿಂ. ಬಿದ್ರಿ ರೇವಣಸಿದ್ದಪ್ಪನವರ ನೆನಪಿಗಾಗಿ ಮೀನಾಕ್ಷಮ್ಮ ಪುತ್ರ ಸುನಿಲ್‌ಕುಮಾರ್ ಬಿದ್ರಿ ಹಾಗೂ ಅನುರಾಧ ಕೊಟ್ರೇಶ್ ಅವರು 23ನೇ ವರ್ಷದ ಉಚಿತ ಸಾಮೂಹಿಕ ವಿವಾಹ ನಡೆಸಿಕೊಡಲಿದ್ದಾರೆ ಎಂದು ತಿಳಿಸಿದರು.

ಆಸಕ್ತರು ಡಾ.ಬಿದ್ರಿ ಕೊಟ್ರೇಶ್, ಅಶ್ವಿನಿ ಕ್ಲಿನಿಕ್, ಕಂಚಿಕೇರಿ, (94486 54884, 97412 88330, 97412 11440)ಇವರನ್ನು ಸಂಪರ್ಕಿಸಬಹುದು.

# ಖೇಲೋ ಇಂಡಿಯಾ ಕೇಂದ್ರಕ್ಕೆ ಆಯ್ಕೆ

ದಾವಣಗೆರೆ, ಫೆ.5- ಖೇಲೋ ಇಂಡಿಯಾ ಯೋಜನೆಯಡಿ ಜಿಲ್ಲೆಯ ಕುಸ್ತಿ ಖೇಲೋ ಇಂಡಿಯಾ ಕೇಂದ್ರದಲ್ಲಿ ಉಚಿತ ತರಬೇತಿ ನೀಡಲು ಒಬ್ಬ ತರಬೇತುದಾರರನ್ನು ಆಯ್ಕೆ ಮಾಡಿಕೊಳ್ಳಲಾಗುತ್ತಿದೆ.

ರಾಷ್ಟ್ರೀಯ, ಅಂತರ ರಾಷ್ಟ್ರೀಯ ಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸಿ ಸಾಧನೆ ಮಾಡಿದ ಜಿಲ್ಲೆಯ ಕುಸ್ತಿ ಪಟುಗಳು ನಾಡಿದ್ದು ದಿನಾಂಕ 7 ರೊಳಗಾಗಿ ಜಿಲ್ಲಾ ಕ್ರೀಡಾಂಗಣದಲ್ಲಿರುವ ಸಹಾಯಕ ನಿರ್ದೇಶಕರ ಕಚೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಬಹುದೆಂದು ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.


# ಶ್ರೀಮತಿ ರುದ್ರಮ್ಮ ವಡ್ನಾಳ್ ನಿಧನ



ದಾವಣಗೆರೆ ಆಂಜನೇಯ ಬಡಾವಣೆ ವಾಸಿ

**ಶ್ರೀಮತಿ ರುದ್ರಮ್ಮ ವಡ್ನಾಳ್**

ಇವರು ದಿನಾಂಕ 5.02.2023ರ ಭಾನುವಾರ ಬೆಳಿಗ್ಗೆ 10ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 83 ವರ್ಷ ವಯಸ್ಸಾಗಿತ್ತು.
ಪುತ್ರ ಶಾಂತಮೂರ್ತಿ ಜಿ.ಬಿ., ನಾಲ್ವರು ಪುತ್ರಿಯರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುತ್ತಾರೆ.
**ಮೃತರ ಪಾರ್ಥಿವ ಶರೀರವನ್ನು ದಿನಾಂಕ 6.02.2023ರ ಬೆಳಿಗ್ಗೆ 10 ಗಂಟೆಯವರೆಗೆ ಡೋರ್ ನಂ. 1801/29, 17ನೇ ಕ್ರಾಸ್, ಆಂಜನೇಯ ಬಡಾವಣೆ ದಾವಣಗೆರೆಯಲ್ಲಿ ಅಂತಿಮ ದರ್ಶನಕ್ಕೆ ಇಡಲಾಗುವುದು.**
ನಂತರ ದಿನಾಂಕ 6.02.2023ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮವಾದ ಚನ್ನಗಿರಿ ತಾಲ್ಲೂಕು ವಡ್ನಾಳ್ ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
**ಮೊ : 99167 71866**



# ಪ್ರಥಮ ವರ್ಷದ ಪುಣ್ಯಸ್ಮರಣೆ



ಜನನ : 12-05-1967

ನಿಧನ : 03-03-2022

**ದಿ|| ಶ್ರೀಮತಿ ವರದಮ್ಮ ಮೈಲೇಶ್ವರ**

*ನೀವು ನಮ್ಮನ್ನಗಲಿ ಒಂದು ವರ್ಷ ಕಳೆದರೂ ನಿಮ್ಮ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ. ನಿಮ್ಮ ಮಾರ್ಗದರ್ಶನ ನಮಗೆ ದಾರಿದೀಪವಾಗಿದೆ. ನಿಮ್ಮ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುವ...*

**ಪತಿ : ಕೆ.ಬಿ. ನಾಗರಾಜ್ ಮತ್ತು ಸಹೋದರರು, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮತ್ತು ಕೋರಹಳ್ಳಿ ಮೈಲೇಸೂರು ವಂಶಸ್ಥರು**

ಅಹ್ಮದ್ ನಗರ, 1ನೇ ಮೇನ್ , 2ನೇ ಕ್ರಾಸ್, (ಶಾಸ್ತ್ರಿ ಕಣ) ದಾವಣಗೆರೆ.

## 7, 8 ಕ್ಕೆ ಶ್ರೀ ಗಣಪತಿ, ಶ್ರೀ ಶಾರದಾಂಬ ದೇವಸ್ಥಾನಗಳ 14ನೇ ವಾರ್ಷಿಕೋತ್ಸವ

ದಾವಣಗೆರೆ, ಫೆ.5- ನಗರದ ನಿಜಲಿಂಗಪ್ಪ ಬಡಾವಣೆಯಲ್ಲಿರುವ ಶ್ರೀ ಗಣಪತಿ, ಶ್ರೀ ಶಾರದಾಂಬ, ಶ್ರೀ ಚಂದ್ರಮೌಳೇಶ್ವರ ಮತ್ತು ಶ್ರೀ ಶಂಕರಾಚಾರ್ಯರ ದೇವಸ್ಥಾನಗಳ 14ನೇ ವಾರ್ಷಿಕೋತ್ಸವದ ಅಂಗವಾಗಿ ದಿನಾಂಕ 7 ಮತ್ತು 8ರಂದು ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

7ರಂದು ಬೆಳಿಗ್ಗೆ 7.30 ರಿಂದ ಮಂಗಳವಾದ್ಯ ಆಚಾರ್ಯರಿಂದ ಕಳಸ ಸ್ಥಾಪನೆ, ಶ್ರೀ ಗಣಪತಿ ಮತ್ತು ಶ್ರೀ ಚಂದ್ರಮೌಳೇಶ್ವರರಿಗೆ ಅಭಿಷೇಕ, ಶ್ರೀ ಶಾರದಾಂಬ ಮೂರ್ತಿಗೆ ಸಹಸ್ರ ನಾಮಾರ್ಚನೆ ಸೇರಿದಂತೆ ಮೃತ್ಯುಂಜಯ ಹೋಮ, ಹವನಗಳು ನಡೆಯಲಿದ್ದು, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಮಂಗಳಾರತಿ ಇದೆ. ಸಂಜೆ 6 ಗಂಟೆಗೆ ಖ್ಯಾತ ಹಿಂದೂಸ್ತಾನಿ ಗಾಯಕಿ ವಿದುಷಿ ವಸುಧಾ ಶರ್ಮಾರಿಂದ ಸುಗಮ ಸಂಗೀತ ಕಾರ್ಯಕ್ರಮ ಶಂಕರ್ ಭವನದಲ್ಲಿ ನಡೆಯಲಿದೆ. ಸಂಜೆ 7:30ಕ್ಕೆ ಶ್ರೀ ಶಾರದಾಂಬ ದೇವಿಗೆ ಪಾಲಕಿ ಉತ್ಸವ, ರಥ ಸೇವಾ, ಅಷ್ಟಾವಧಾನ, ಮಂತ್ರ ಪುಷ್ಪ, ಮಂಗಳಾರತಿ ಕಾರ್ಯಕ್ರಮ ಜರುಗುವುದು.

ದಿನಾಂಕ 8ರಂದು ಬೆಳಿಗ್ಗೆ 8 ರಿಂದ ಕಲಾ ಹೋಮ ನಡೆಯಲಿದೆ. ಬೆಳಿಗ್ಗೆ 9ಕ್ಕೆ ಪೂರ್ಣಾಹುತಿ, ಶ್ರೀ ಗಣಪತಿ ಮೂಲ ವಿಗ್ರಹಕ್ಕೆ ಅಥರ್ವಶೀರ್ಷದಿಂದ ಅಭಿಷೇಕ ಶ್ರೀ ಚಂದ್ರಮೌಳೇಶ್ವರರಿಗೆ ಲಘುನ್ಯಾಸ ಪೂರ್ವಕ ರುದ್ರಾಭಿಷೇಕ ಮತ್ತು ಶ್ರೀ ಶಾರದಾಂಬ ಮೂಲ ಮೂರ್ತಿಗೆ ಮಹಾಭಿಷೇಕ, ಶ್ರೀ ಚಕ್ರಪೂಜೆ, ವಿಶೇಷ ಅಲಂಕಾರ, ಮಂಗಳಾರತಿ ನಂತರ ಅನ್ನ ಸಂತರ್ಪಣೆ ನಡೆಯಲಿದೆ. ಸಂಜೆ 7:30ಕ್ಕೆ ಶ್ರೀ ಶಾರದಾಂಬ ದೇವಿಗೆ ಪಾಲಕಿ ಉತ್ಸವ, ರಥ ಸೇವೆ, ಅಷ್ಟಾವಧಾನ, ಮಂತ್ರಪುಷ್ಪ ನಂತರ ಪ್ರಸಾದ ವಿನಿಯೋಗವಿರಲಿದೆ.

## ಸಾಲಕಟ್ಟೆ ಗ್ರಾ.ಪಂ. ಅಧ್ಯಕ್ಷರಾಗಿ ದೀಪಾ ನಿರಂಜನ ಅವಿರೋಧ ಆಯ್ಕೆ



ಹರಿಹರ, ಫೆ. 5- ತಾಲ್ಲೂಕಿನ ಸಾಲಕಟ್ಟೆ ಗ್ರಾಮ ಪಂಚಾಯಿತಿಗೆ ಈಚೆಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ದೀಪಾ ನಿರಂಜನ ಎಸ್.ಜಿ.ಸಾಲಕಟ್ಟೆ, ಉಪಾಧ್ಯಕ್ಷರಾಗಿ ರತ್ನಮ್ಮ ರಾಮಪ್ಪ ಮಿಟ್ಲಕಟ್ಟೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಗಳಾದ ತೋಟಗಾರಿಕೆ ಇಲಾಖೆಯ ಅಧಿಕಾರಿಗಳಾದ ರೇಖಾ ಮತ್ತು ಅಶೋಕ್ ಘೋಷಿಸಿದ್ದಾರೆ.

## ಶಾಮನೂರು ಮಲ್ಲಿಕಾರ್ಜುನ ಬಡಾವಣೆ ಸ.ಹಿ.ಪ್ರಾ. ಶಾಲೆಗೆ ಜಿಲ್ಲಾಧಿಕಾರಿ ಭೇಟಿ



ದಾವಣಗೆರೆ, ಫೆ. 5- ನಗರದ ಶಾಮನೂರು ಮಲ್ಲಿಕಾರ್ಜುನ ಬಡಾವಣೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಇಂದು ಶುಕ್ರವಾರ ಮಧ್ಯಾಹ್ನ ಕಾರ್ಯ ನಿಮಿತ್ತ ಭೇಟಿ ನೀಡಿ ಬಿಸಿಯೂಟ ಹಾಗೂ ಮೊಟ್ಟೆಯನ್ನು ಮಕ್ಕಳಿಗೆ ನೀಡಿದರು. ನಂತರ ಮಕ್ಕಳ ಕಲಿಕೆ ಬಗ್ಗೆ ವಿಚಾರಿಸಿದರು. ಈ ಸಂದರ್ಭದಲ್ಲಿ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಮ್ಮ, ಮುಖ್ಯ ಶಿಕ್ಷಕರಾದ ಟಿ.ಹೆಚ್. ಶಂಕರಮೂರ್ತಿ, ಶಿಕ್ಷಕರು ಇದ್ದರು.



## 'ಭಾಗ್ಯದ ನಿಧಿ ತುಂಬಿ ತುಳುಕಿತಲೇ ಪರಾಕ್'

### ಹರಪನಹಳ್ಳಿ ಪಟ್ಟಣದ ಮೈಲಾರ ಲಿಂಗೇಶ್ವರ ಸ್ವಾಮಿ ಕಾರಣಿಕ

ಹರಪನಹಳ್ಳಿ, ಫೆ.5- ಪಟ್ಟಣದ ಗೌರಿಹಳ್ಳಿ ರಸ್ತೆಯಲ್ಲಿರುವ ಶ್ರೀ ಮೈಲಾರ ಲಿಂಗೇಶ್ವರ ವರ್ಷದ ಭವಿಷ್ಯ ಕಾರಣಿಕ 'ಭಾಗ್ಯದ ನಿಧಿ ತುಂಬಿ ತುಳುಕಿತಲೇ ಪರಾಕ್' ಎಂದು ಗೊರವಪ್ಪ ನುಡಿದರು.

ಸಹಸ್ರಾರು ಭಕ್ತಾದಿಗಳ ನಡುವೆ ಬಿಲ್ಲನ್ನೇರಿದ ಮೈಲಾರಲಿಂಗನ ಗೊರವ ಕೋಟೆಪ್ಪ 'ಸದ್ದಲೇ...' ಎನ್ನುತ್ತಿದ್ದಂತೆಯೇ ಎಲ್ಲವೂ ಕ್ಷಣಕಾಲ ನಿಶ್ಯಬ್ಧವಾಯಿತು. ನಂತರ ಕಾರಣಿಕದ ಉಕ್ತಿಯನ್ನು ನುಡಿದ ಗೊರವಪ್ಪ ಕೆಳಗೆ ಬೀಳುವ ದೃಶ್ಯ ಸ್ವಾಮಿಯ ಪವಾಡದಂತೆ ಗೋಚರಿಸಿತು ಎಂಬುದು ಭಕ್ತರ ಉವಾಚ.

ಒಕ್ಕಲುತನ ಸಂಸ್ಕೃತಿಯ ವಿಶಿಷ್ಟ ಆಚರಣೆಯ ತಾಲ್ಲೂಕಿನ ದೊಡ್ಡಮೈಲಾರ ಎಂದೇ ಪ್ರಚಲಿತದಲ್ಲಿರುವ ಮೈಲಾರಲಿಂಗೇಶ್ವರ ಸ್ವಾಮಿ ಕುರಿತು ಹಲವು ದಂತ ಕಥೆಗಳು ಈ ನೆಲದಲ್ಲಿ ಜಾನಪದ ಸೊಗಡಿನಲ್ಲಿ ಹಾಸುಹೊಕ್ಕಾಗಿವೆ.

ಪ್ರತಿ ವರ್ಷ ಭರತ ಹುಣ್ಣಿಮೆಯಂದು ಸಂಜೆ ಕಾರಣಿಕೋತ್ಸವ ಜರುಗುತ್ತದೆ. ವರ್ಷದಲ್ಲಿ ಎರಡು ಬಾರಿ ಕಾರಣಿಕೋತ್ಸವ ಜರಗುತ್ತದೆ.

ದಸರಾ ಹಬ್ಬದಲ್ಲಿ ನುಡಿಯುವ ಕಾರಣಿಕ ರಾಜಕೀಯಕ್ಕೆ ಹಾಗೂ ಭರತ ಹುಣ್ಣಿಮೆಯ ಕಾರಣಿಕ ಬೆಳೆಗಳ ಮೇಲೆರುತ್ತದೆ ಎಂಬ ಪ್ರತೀತಿ ಇದೆ. ಈ ವರ್ಷದ ಕಾರಣಿಕ ಉತ್ತಮವಾಗಿದ್ದು ಮಳೆ, ಬೆಳೆ ಚೆನ್ನಾಗಿ ಆಗುತ್ತದೆ ಎಂದು ಹಿರಿಯರು ಮಾತಾಡಿಕೊಳ್ಳುತ್ತಿದ್ದರು. ಸರಪಳಿ ಪವಾಡ ಹಾಗೂ ಕಡುಬಿನ ಕಾಳಗವೂ ಸಹ ಗೊರವರಿಂದ ನಡೆಯುತ್ತಿದೆ ಎಂದು ದೇವಳ ಸಮಿತಿಯ ಧರ್ಮದರ್ಶಿ ಪಿ.ದತ್ತಾತ್ರೇಯರಾವ್ ತಿಳಿಸಿದರು. ಈ ವೇಳೆ ವಂಶಪಾರಂಪರಿಕ ಧರ್ಮಕರ್ತರಾದ ನಾಗೇಶ್ವರರಾವ್, ಮಾರ್ತಾಂಡ ರಾವ್, ಕೋಟೇಶ್ವರ ರಾವ್, ಪುರಸಭೆ ಸದಸ್ಯ ಕಿರಣ್ ಶಾನುಭೋಗ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಯಾರೂ ಎಚ್ಚರಿಕೆ ನೀಡಲಾಗದು

### ಕೊಲೀಜಿಯಂ ನೇಮಕದ ಕುರಿತು ಸುಪ್ರೀಂ ಕೋರ್ಟ್ ಟಿಪ್ಪಣಿಗೆ ಸಚಿವ ಕಿರಣ್ ರಿಜಿಜು ಪ್ರತ್ಯುತ್ತರ

ಪ್ರಯಾಗ್‌ರಾಜ್, ಫೆ. 5 – ಸಂವಿಧಾನಕ್ಕೆ ಅನುಗುಣವಾಗಿ ಹಾಗೂ ಜನರ ಬಯಕೆಯಂತೆ ದೇಶ ನಡೆಯುತ್ತದೆ. ಇಲ್ಲಿ ಯಾರೊಬ್ಬರೂ ಎಚ್ಚರಿಕೆ ನೀಡಲು ಸಾಧ್ಯವಿಲ್ಲ ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ತಿಳಿಸಿದರು.

ನ್ಯಾಯಮೂರ್ತಿಗಳ ನೇಮಕ ಹಾಗೂ ವರ್ಗಾವಣೆ ವಿಳಂಬವಾದರೆ ಕ್ರಮ ತೆಗೆದುಕೊಳ್ಳುವುದಾಗಿ ಸುಪ್ರೀಂ ಕೋರ್ಟ್ ಎಚ್ಚರಿಕೆ ನೀಡಿದ ಬೆನ್ನಲ್ಲೇ ರಿಜಿಜು ಈ ಹೇಳಿಕೆ ನೀಡಿದ್ದಾರೆ.

ಜನರೇ ಈ ದೇಶದ ಮಾಲೀಕರು ಹಾಗೂ ನಾವು ಸೇವಕರು. ನಾವು ಜನರ ಸೇವೆಗಾಗಿ ಬಂದಿದ್ದೇವೆ ಹಾಗೂ ಸಂವಿಧಾನ ನಮ್ಮ ಮಾರ್ಗದರ್ಶಿಯಾಗಿದೆ. ಈ ದೇಶವನ್ನು ಸಂವಿಧಾನದ ಮಾರ್ಗದರ್ಶನ ಹಾಗೂ ಸಾರ್ವಜನಿಕರ ಬಯಕೆಯಂತೆ ನಡೆಸಲಾಗುವುದು. ಯಾರೊಬ್ಬರೂ ಎಚ್ಚರಿಕೆ ನೀಡಲಾಗದು ಎಂದು ರಿಜಿಜು ತಿಳಿಸಿದರು.

ಕೆಲವೊಮ್ಮೆ ದೇಶದಲ್ಲಿ ಕೆಲ ವಿಷಯಗಳ ಬಗ್ಗೆ ಚರ್ಚೆಗಳು ನಡೆಯುತ್ತವೆ. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ತಮ್ಮ ನಿಲುವು ತಿಳಿಸುವ ಹಕ್ಕಿದೆ. ಆದರೆ, ಜವಾಬ್ದಾರಿಯುತ ಹುದ್ದೆಯಲ್ಲಿರುವವರು ಏನಾದರೂ ಹೇಳುವ ಮುಂಚೆ, ಇದರಿಂದ ದೇಶಕ್ಕೆ ಲಾಭವಾಗುತ್ತದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಯೋಚಿಸಬೇಕು ಎಂದು ಸಚಿವರು ತಿಳಿಸಿದ್ದಾರೆ.

ನ್ಯಾಯಮೂರ್ತಿಗಳ ನೇಮಕ ಹಾಗೂ ವರ್ಗಾವಣೆಗಾಗಿ ಸುಪ್ರೀಂ ಕೋರ್ಟ್‌ನ ಕೊಲೀಜಿಯಂ ಶಿಫಾರಸ್ಸು ಮಾಡಿದರೂ ಕ್ರಮ ವಿಳಂಬವಾಗುತ್ತಿದೆ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಎಸ್.ಕೆ. ಕೌಲ್ ಹಾಗೂ ಎ.ಎಸ್. ಓಕ ಅವರನ್ನು ಒಳಗೊಂಡ ಪೀಠ ನಿನ್ನೆ ಅಸಮಾಧಾನ ವ್ಯಕ್ತಪಡಿಸಿತ್ತು.

ಇದು ಗಂಭೀರ ವಿಷಯ ಎಂದು ಹೇಳಿದ್ದ ಪೀಠ, ಈ ವಿಷಯದಲ್ಲಿ ವಿಳಂಬವಾದರೆ ಆಡಳಿತ ಹಾಗೂ ನ್ಯಾಯಿಕ ಕ್ರಮ ಎದುರಿಸಬೇಕಾಗುತ್ತದೆ, ಇದರ ಫಲ ಸಿಹಿಯಾಗಿರುವುದಿಲ್ಲ ಎಂದು ತಿಳಿಸಿತ್ತು.

ಸುಪ್ರೀಂ ಕೋರ್ಟ್‌ಗೆ ಐವರು ನ್ಯಾಯ ಮೂರ್ತಿಗಳ ನೇಮಕಕ್ಕೆ ಶಿಫಾರಸ್ಸು ಮಾಡಲಾಗಿತ್ತು. ಈ ಬಗ್ಗೆಯೂ ಕ್ರಮ ವಿಳಂಬವಾಗಿದೆ ಎಂದು ಶುಕ್ರವಾರ ನ್ಯಾಯಾಲಯ ಹೇಳಿತ್ತು.

### ಇಂದು ಸುಪ್ರೀಂಗೆ ಐವರು ನ್ಯಾಯಮೂರ್ತಿಗಳ ಸೇರ್ಪಡೆ

ನವದೆಹಲಿ, ಫೆ. 5- ಸೋಮವಾರ ಸುಪ್ರೀಂ ಕೋರ್ಟ್‌ಗೆ ಐವರು ನ್ಯಾಯಮೂರ್ತಿಗಳು ಸೇರ್ಪಡೆಯಾಗಲಿದ್ದು, ಇದರಿಂದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆ 32ಕ್ಕೆ ಏರಿಕೆಯಾಗಲಿದೆ. ಮೂವರು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾದ ಪಂಕಜ್ ಮಿತ್ತಲ್, ನ್ಯಾಯಮೂರ್ತಿ ಸಂಜಯ್ ಕರೋಲ್ ಹಾಗೂ ನ್ಯಾಯಮೂರ್ತಿ ಪಿ.ವಿ. ಸಂಜಯ್, ಹೈಕೋರ್ಟ್ ನ್ಯಾಯಮೂರ್ತಿಗಳಾದ ಹಸನುದ್ದೀನ್ ಅಮಾನುಲ್ಲಾ ಹಾಗೂ ನ್ಯಾಯಮೂರ್ತಿ ಮನೋಜ್ ಮಿಶ್ರ ಅವರು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

## ಅದಾನಿ ಷೇರುಗಳ ಮೇಲೆ ನಿಗಾ ಕ್ರಮ ತೆಗೆದುಕೊಳ್ಳಲು ಸೆಬಿ ಇಂಗಿತ

ನವದೆಹಲಿ, ಫೆ. 5 – ಅದಾನಿ ಸಮೂಹದ ಷೇರುಗಳ ಕುಸಿತದ ನಡುವೆ ಹೇಳಿಕೆ ನೀಡಿರುವ ಮಾರುಕಟ್ಟೆ ನಿಯಂತ್ರಕ ಸೆಬಿ, ಷೇರು ಮಾರುಕಟ್ಟೆಯ ಬಗ್ಗೆ ಪ್ರಾಮಾಣಿಕ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಹಾಗೂ ಎಲ್ಲಾ ನಿಗಾ ಕ್ರಮಗಳನ್ನು ವಹಿಸಲಾಗುತ್ತಿದೆ ಎಂದು ತಿಳಿಸಿದೆ.

ನೇರವಾಗಿ ಅದಾನಿ ಸಮೂಹದ ಹೆಸರು ಹೇಳದ ಸೆಬಿ, ವೈಯಕ್ತಿಕ ಷೇರುಗಳ ಅತಿಯಾದ ಏರಿಳಿತದ ಮೇಲೆ ನಿಗಾ ವಹಿಸಿರುವುದಾಗಿ ತಿಳಿಸಿದೆ. ಅದಾನಿ ಸಮೂಹದ ವಿಷಯಕ್ಕೆ ಸಂಬಂಧಿಸಿದಂತೆಯೇ ಈ ಹೇಳಿಕೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಅಮೆರಿಕದ ಹಿಂಡನ್‌ಬರ್ಗ್ ರೀಸರ್ಚ್ ವರದಿಯ ನಂತರ ಅದಾನಿ ಸಮೂಹದ ಷೇರುಗಳು ತೀವ್ರ ಕುಸಿತ ಕಂಡಿವೆ. ಅದಾನಿ ಸಮೂಹದಲ್ಲಿ ಹಲವಾರು ವಂಚನೆಗಳು ನಡೆದಿವೆ ಎಂದು ಆರೋಪಿಸಲಾಗಿತ್ತು. ಅದಾನಿ ಸಮೂಹ ಆರೋಪಗಳನ್ನು ತಳ್ಳಿ ಹಾಕಿದೆ.

ವರದಿಯ ನಂತರ ಅದಾನಿ ಸಮೂಹದ ಹತ್ತು ಉದ್ಯಮಗಳ ಷೇರು ಮೌಲ್ಯ 8.5 ಲಕ್ಷ ಕೋಟಿ ರೂ.ಗಳಷ್ಟು ಕುಸಿದಿದೆ. ಅದಾನಿ ಎಂಟರ್‌ಪ್ರೈಸಸ್ ತನ್ನ 20 ಸಾವಿರ ಕೋಟಿ ರೂ.ಗಳ ಷೇರು ಮಾರಾಟವನ್ನು ವಾಪಸ್ ಪಡೆದಿದೆ.

## ಪ್ಲಾಸ್ಟಿಕ್ ಬಾಟಲ್ ನೀರಿನಿಂದ ಕ್ಯಾನ್ಸರ್ ಸಾಧ್ಯತೆ

ಮಲೇಬೆನ್ನೂರು, ಫೆ.5- ನೀರನ್ನು ಶುದ್ಧೀಕರಿಸಿ, ಬಾಟಲ್ ಮೂಲಕ ಸಂಗ್ರಹ ಮಾಡಿರುವ ನೀರನ್ನು ಬಿಸಿಲಿನಲ್ಲಿ ಇಟ್ಟಾಗ ಆ ಪ್ಲಾಸ್ಟಿಕ್ ಬಾಟಲಿಯಿಂದ ರಾಸಾಯನಿಕಗಳು ಬಿಡುಗಡೆ ಹೊಂದುತ್ತವೆ. ಇಂತಹ ಬಾಟಲ್ ನೀರನ್ನು ಸೇವನೆ ಮಾಡುವುದರಿಂದಲೂ ಕ್ಯಾನ್ಸರ್ ಬರುವ ಸಾಧ್ಯತೆ ಇರುತ್ತದೆ ಎಂದು ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ. ನಟರಾಜ್ ಹೇಳಿದರು.

ಅವರು ಶನಿವಾರ ಜಿಗಳಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ತಾಲ್ಲೂಕು ಮಟ್ಟದ ಕ್ಯಾನ್ಸರ್ ಜಾಗೃತಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಆಧುನಿಕ ಆಹಾರ ಪದ್ಧತಿಯ ಸೇವನೆಯಿಂದಲೂ ಕ್ಯಾನ್ಸರ್ ಬರುತ್ತದೆ. ಕರಿದ ಎಣ್ಣೆಯಲ್ಲಿ ಪದೇ ಪದೇ ಆಹಾರವನ್ನು ತಯಾರಿಸುವುದು. ಅದೇ ರೀತಿ ಇತರೆ ಆಹಾರ ಪದಾರ್ಥಗಳಿಗೆ ಇಂತಹ ಎಣ್ಣೆಯನ್ನು ಬಳಸುವುದರಿಂದ ಫಾಸ್ಟ್ ಫುಡ್ ಹೆಚ್ಚು ಸೇವನೆ ಮಾಡುವುದರಿಂದ ಕ್ಯಾನ್ಸರ್ ಬರುತ್ತದೆ. ತಂಬಾಕು ಸೇವನೆಯಿಂದಲೂ ಶೇ.40 ರಷ್ಟು ಕಾಯಿಲೆ ಬರುತ್ತದೆ. ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಗರ್ಭಕೋಶ ಕ್ಯಾನ್ಸರ್, ಗಂಡಸರಲ್ಲಿ ಹೆಚ್ಚು ಗಂಟಲು ಕ್ಯಾನ್ಸರ್, ಬಾಯಿ ಕ್ಯಾನ್ಸರ್, ಶ್ವಾಸಕೋಶ ಕ್ಯಾನ್ಸರ್, ಕರುಳಿನ ಕ್ಯಾನ್ಸರ್ ಬರುತ್ತದೆ, ಆದುದರಿಂದ ಫಾಸ್ಟ್ ಫುಡ್, ತಂಬಾಕು ಸೇವನೆಯನ್ನು ನಿಲ್ಲಿಸಿದರೆ ಕ್ಯಾನ್ಸರ್ ತಡೆಯಬಹುದು ಎಂದು ಡಾ. ನಟರಾಜ್ ಹೇಳಿದರು.

ಈ ಸಂದರ್ಭದಲ್ಲಿ ಡಾ. ಚೇತನ್, ತಾಲ್ಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಉಮ್ಮಣ್ಣ, ತಾಲ್ಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ನಾಗರಾಜ್, ಗ್ರಾ.ಪಂ. ಸದಸ್ಯ ಡಿ.ಎಂ.ಹರೀಶ್, ಆರೋಗ್ಯ ನಿರೀಕ್ಷಣಾಧಿಕಾರಿ ತಿಪ್ಪೇಸ್ವಾಮಿ, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಶ್ರೀಮತಿ ಭಾಗ್ಯಮ್ಮ, ಸಮುದಾಯ ಆರೋಗ್ಯ ಅಧಿಕಾರಿ ಪೂಜಾ, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



# ದೇಶ ಬೆಳೆದರೂ ಪ್ರತಿನಿಧಿಗಳ ಸಂಖ್ಯೆ ಸ್ಥಗಿತ

### ದೇಶಕ್ಕಿಂತ ಹೆಚ್ಚಿನ ಸಂಸದರು

ಭಾರತದಲ್ಲಿ ಈಗ ಪ್ರತಿ 25.87 ಲಕ್ಷ ಜನರಿಗೆ ಒಬ್ಬ ಸಂಸದ ಇದ್ದಾನೆ ಎಂದು ಅಂದಾಜಿಸಲಾಗಿದೆ. ದೇಶದ ಪ್ರತಿಯೊಬ್ಬ ಸಂಸದ ಸರಾಸರಿ ಪ್ರತಿನಿಧಿಸುವ ಜನರ ಸಂಖ್ಯೆ ನಮೀಬಿಯಾದ ಒಟ್ಟು ಜನಸಂಖ್ಯೆಗಿಂತ ಹೆಚ್ಚಾಗಿದೆ! ನಮೀಬಿಯಾ ವಿಶ್ವದ 235 ದೇಶಗಳ ಪೈಕಿ ಜನಸಂಖ್ಯೆಯಲ್ಲಿ 143ನೇ ಸ್ಥಾನದಲ್ಲಿದೆ. ಜನಸಂಖ್ಯೆ ಹೆಚ್ಚಾಗುತ್ತಾ ಸಾಗಿದಂತೆ ಈ ವೈಪರೀತ್ಯ ಇನ್ನಷ್ಟು ಹೆಚ್ಚಾಗಲಿದೆ.

ನೂತನ ಸಂಸತ್ ಭವನದ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. ನೂತನ ಭವನದಲ್ಲಿ 888 ಲೋಕಸಭಾ ಸದಸ್ಯರು ಹಾಗೂ 552 ರಾಜ್ಯಸಭಾ ಸದಸ್ಯರು ಆರಾಮವಾಗಿ ಕೂರುವಷ್ಟು ಜಾಗ ಕಲ್ಪಿಸಲಾಗಿದೆ.

ಮುಂಬರುವ ದಿನಗಳ ಅಗತ್ಯಕ್ಕೆ ಅನುಗುಣವಾಗಿ ಭವನ ನಿರ್ಮಿಸಲಾಗಿದೆ. ಆ ದಿನಗಳು ಯಾವಾಗ ಬರಲಿವೆ ಎಂಬುದಂತೂ ಸದ್ಯಕ್ಕೆ ಸ್ಪಷ್ಟವಿಲ್ಲ.

### ದಕ್ಷಿಣದ ರಾಜ್ಯಗಳಿಗೆ 'ಅನ್ಯಾಯ'

2021ರ ಜನಸಂಖ್ಯೆ ಆಧಾರ ಮಾಡಿಕೊಳ್ಳುವುದರಿಂದ ದಕ್ಷಿಣದ ರಾಜ್ಯಗಳಿಗೆ ಮತ್ತೆ 'ಅನ್ಯಾಯ'ವಾಗಲಿದೆ. ಕೇರಳದಂತಹ ರಾಜ್ಯದ ಪ್ರಾತಿನಿಧ್ಯ ಶೇ.40ರವರೆಗೆ ಕಡಿಮೆಯಾಗಲಿದೆ ಎಂದು ಅಂದಾಜಿಸಲಾಗುತ್ತಿದೆ.

ಜನಸಂಖ್ಯೆ ಆಧಾರದ ಮೇಲೆ ಈಗಿರುವ ಸಂಸದರ ಸಂಖ್ಯೆಯಲ್ಲೇ ಪುನರ್‌ವಿಂಗಡಣೆ ಮಾಡಿದರೆ ತಮಿಳುನಾಡು ಕನಿಷ್ಠ 8 ಕ್ಷೇತ್ರ ಕಳೆದುಕೊಳ್ಳಲಿದೆ. ಆಂಧ್ರ ಪ್ರದೇಶ - ತೆಲಂಗಾಣಗಳು 8, ಕೇರಳ 8, ಒಡಿಶಾ 3, ಪಶ್ಚಿಮ ಬಂಗಾಳ 4 ಹಾಗೂ ಕರ್ನಾಟಕ 2 ಕ್ಷೇತ್ರಗಳನ್ನು ಕಳೆದುಕೊಳ್ಳಲಿವೆ ಎಂದು ಅಂದಾಜಿಸ ಲಾಗುತ್ತಿದೆ. ಮತ್ತೊಂದೆಡೆ ಉತ್ತರ ಪ್ರದೇಶದ 11, ಬಿಹಾರ 10 ಹಾಗೂ ರಾಜಸ್ಥಾನ 6 ಕ್ಷೇತ್ರಗಳನ್ನು ಪಡೆದುಕೊಳ್ಳಲಿವೆ.

### ವಿಧಾನಸಭೆಯಲ್ಲೂ ಅದೇ ಕಥೆ

1961ರಲ್ಲಿ ಕರ್ನಾಟಕದಲ್ಲಿ 2.35 ಕೋಟಿ ಜನಸಂಖ್ಯೆ ಇತ್ತು. ಆಗ ಜನಪ್ರತಿನಿಧಿಗಳ ಸಂಖ್ಯೆ 208 ಆಗಿತ್ತು. 2011ರಲ್ಲಿ ರಾಜ್ಯದ ಜನಸಂಖ್ಯೆ 6.10 ಕೋಟಿಗೆ ತಲುಪಿದೆ. ರಾಜ್ಯದ ಶಾಸಕರ ಸಂಖ್ಯೆ ಕೇವಲ 224ಕ್ಕೆ ಏರಿದೆ.

1961ರಲ್ಲಿ ಪ್ರತಿ 1.13 ಲಕ್ಷ ಜನರಿಗೆ ಒಬ್ಬ ಶಾಸಕರಿದ್ದರು. ಈಗ 2.72 ಲಕ್ಷ ಜನರಿಗೊಬ್ಬ ಶಾಸಕ ಇದ್ದಾರೆ. 2022ರಲ್ಲಿ ರಾಜ್ಯದ ಜನಸಂಖ್ಯೆ 6.76 ಕೋಟಿಗೇರಿದೆ ಎಂದು ಅಂದಾಜಿಸಲಾಗಿದೆ. ಅದರ ಪ್ರಕಾರ ಈಗ ಪ್ರತಿ ಮೂರು ಲಕ್ಷ ಜನಸಂಖ್ಯೆಗೆ ಒಬ್ಬ ಶಾಸಕರಿದ್ದಾರೆ.

1961ಕ್ಕೆ ಹೋಲಿಸಿದರೆ ಈಗಿನ ಶಾಸಕರ ಹೊಣೆ ಮೂರು ಪಟ್ಟು ಹೆಚ್ಚಾಗಿದೆ. ಆದರೆ, ಶಾಸಕರ ಸಂಖ್ಯೆ ಹೆಚ್ಚಿಸುವುದು ವೃಥಾ ಹೊರೆ ಎಂದು ಕೆಲವರು ವಾದಿಸಬಹುದು. ಇಷ್ಟೆಲ್ಲಾ ವರ್ಷಗಳಲ್ಲಿ ಜನಸಂಖ್ಯೆ ಹೆಚ್ಚಾದಂತೆ ಜಿಲ್ಲೆ ಹಾಗೂ ತಾಲ್ಲೂಕುಗಳ ಸಂಖ್ಯೆ ಹೆಚ್ಚಿಸಲಾಗಿದೆ. ಹೀಗಿರುವಾಗ ಶಾಸಕರ ಸಂಖ್ಯೆ ಮಾತ್ರ ಯಥಾಸ್ಥಿತಿಯಲ್ಲಿರಬೇಕು ಎಂಬುದಕ್ಕೆ ಹೆಚ್ಚೇನೂ ಸಮರ್ಥನೆ ಇಲ್ಲ.

### ಜನಸಂಖ್ಯಾ ಸ್ಫೋಟವಾದರೂ ಲೋಕಸಭಾ ಸದಸ್ಯರ ಸಂಖ್ಯೆ ಯಥಾಸ್ಥಿತಿ



ಭಾರತ ಪ್ರಜಾಪ್ರಭುತ್ವದ ದೇಶ. ದೇಶವನ್ನು ಆಳುವ ಶಾಸನ ಸಭೆಗಳು ಜನರನ್ನು ಪ್ರತಿನಿಧಿಸುವ ಸ್ವರೂಪದಲ್ಲಿರಬೇಕು ಎಂಬುದು ಪ್ರಜಾಪ್ರಭುತ್ವದ ಮೂಲ ಆಶಯ. ಆದರೆ, ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳು ಜನರನ್ನು ಪ್ರತಿನಿಧಿಸುವ ಹಾಗೂ ಜನರ ಆಶಯಗಳಿಗೆ ಸ್ಪಂದಿಸುವ ರೀತಿಯಲ್ಲಿವೆಯೇ?

ಕನಿಷ್ಠ ಪಕ್ಷ ಕ್ಷೇತ್ರ ಪುನರ್‌ವಿಂಗಡಣೆಯ ವಿಚಾರದಲ್ಲಂತೂ ಈ ಬಗ್ಗೆ ಸಮಸ್ಯೆಗಳಿವೆ. ದೇಶದ ಅತಿ ದೊಡ್ಡ ಲೋಕಸಭಾ ಕ್ಷೇತ್ರವಾದ ಆಂಧ್ರ ಪ್ರದೇಶದ ಮಲ್ಕಾಜ್‌ಗಿರಿ 31.50 ಲಕ್ಷ ಮತದಾರರನ್ನು ಹೊಂದಿದೆ. ಲಕ್ಷದ್ವೀಪ ಲೋಕಸಭಾ ಕ್ಷೇತ್ರ ಅತಿ ಸಣ್ಣ ಕ್ಷೇತ್ರವಾಗಿದ್ದು, ಇಲ್ಲಿ ಕೇವಲ 49,922 ಮತದಾರರಿದ್ದಾರೆ. 2019ರ ಚುನಾವಣೆಯಲ್ಲಿ ಲಕ್ಷದ್ವೀಪದಲ್ಲಿ ಗೆದ್ದ ಅಭ್ಯರ್ಥಿ ಪಡೆದ ಮತಗಳು ಕೇವಲ 22,851. ಮತ್ತೊಂದೆಡೆ ಮಲ್ಕಾಜ್‌ಗಿರಿಯಲ್ಲಿ ಗೆದ್ದ ಅಭ್ಯರ್ಥಿ ಪಡೆದ ಮತಗಳು ಬರೋಬ್ಬರಿ 6,03,748!

2014ರಲ್ಲಿ ಚುನಾವಣಾ ಆಯೋಗ ಪ್ರಕಟಿಸಿರುವ ಮಾಹಿತಿಯ ಪ್ರಕಾರ, ದೇಶದ ಮೊದಲ ಐದು ಅತಿ ದೊಡ್ಡ ಲೋಕಸಭಾ ಕ್ಷೇತ್ರಗಳಲ್ಲಿರುವ ಮತದಾರರ ಸಂಖ್ಯೆ 1.16 ಕೋಟಿ. ಮತ್ತೊಂದೆಡೆ ದೇಶದ ಐದು ಅತಿ ಸಣ್ಣ ಕ್ಷೇತ್ರಗಳಲ್ಲಿರುವ ಮತದಾರರ ಸಂಖ್ಯೆ ಕೇವಲ 7.56 ಲಕ್ಷ. ದೇಶದ ಅತಿ ದೊಡ್ಡ ಹಾಗೂ ಅತಿ ಸಣ್ಣ ಐದು ಕ್ಷೇತ್ರಗಳ ನಡುವಿನ ಅಂತರ 15.4 ಪಟ್ಟು ಹೆಚ್ಚಾಗಿದೆ.

1951ರಲ್ಲಿ ದೇಶದ 36 ಕೋಟಿ ಜನರಿಗೆ 499 ಸಂಸದರಿದ್ದರು. ಅಂದರೆ ಪ್ರತಿ 7.23 ಲಕ್ಷ ಜನರಿಗೆ ಒಬ್ಬರು ಸಂಸದರಿದ್ದರು. 2011ಕ್ಕೆ ಬರುವ ವೇಳೆಗೆ 121 ಕೋಟಿ ಜನರಿಗೆ 545 ಸಂಸದರಿದ್ದಾರೆ. ಅದರೆ, ಈಗ 22.20 ಲಕ್ಷ ಜನರಿಗೆ ಒಬ್ಬರು ಸಂಸದರಿದ್ದಾರೆ. 2022ರಲ್ಲಿ ಭಾರತದಲ್ಲಿ 140 ಕೋಟಿ ಜನರಿದ್ದಾರೆ ಎಂದು ಅಂದಾಜಿಸಲಾಗಿದೆ. ಅಂದರೆ, 25.87 ಲಕ್ಷ ಜನರಿಗೆ ಒಬ್ಬ ಸಂಸದ ಎಂದಾಗುತ್ತದೆ.

ಆರಂಭದ ವರ್ಷಗಳಲ್ಲಿ ಈ ಸಮಸ್ಯೆ ಇರಲಿಲ್ಲ. ಜನಸಂಖ್ಯೆ ಏರಿದಂತೆ ಕ್ಷೇತ್ರಗಳ ಸಂಖ್ಯೆ ಏರುತ್ತಿತ್ತು. 1951ರಲ್ಲಿ ಭಾರತದ ಸಂಸದರ ಸಂಖ್ಯೆ 499 ಆಗಿತ್ತು. 1961ರಲ್ಲಿ 522 ಹಾಗೂ 1971ರಲ್ಲಿ 543ಕ್ಕೆ ಏರಿಕೆಯಾಯಿತು. ಇವರ ಜೊತೆಗೆ ಇಬ್ಬರು ಆಂಗ್ಲೋ ಇಂಡಿಯನ್ನರನ್ನು ನೇಮಕ ಮಾಡಲಾಗುತ್ತದೆ.

ಆದರೆ, ಈ ಅವಧಿಯಲ್ಲಿ ಉತ್ತರದ ರಾಜ್ಯಗಳಲ್ಲಿ ಜನಸಂಖ್ಯೆ ಸ್ಫೋಟವಾಯಿತು. ಈ ಕಾರಣಕ್ಕಾಗಿ ಆ ರಾಜ್ಯಗಳಲ್ಲಿ ಸಂಸದರ ಸಂಖ್ಯೆ ವೇಗವಾಗಿ ಏರುತ್ತಾ ಸಾಗಿತು. ದಕ್ಷಿಣದ ರಾಜ್ಯಗಳಲ್ಲಿ ಜನಸಂಖ್ಯೆ ನಿಯಂತ್ರಿಸಿದ ಕಾರಣ ಪ್ರಾತಿನಿಧ್ಯ ಕುಂಠಿತವಾಯಿತು. ಈ ಕಾರಣಕ್ಕಾಗಿ 1976ರಲ್ಲಿ ಕ್ಷೇತ್ರಗಳ ಹೆಚ್ಚಳಕ್ಕೆ ತಡೆ ಹಾಕಲಾಯಿತು.

2002ರಲ್ಲಿ ಕ್ಷೇತ್ರಗಳ ಪುನರ್‌ವಿಂಗಡಣೆ ಇತ್ತೀಚಿನದ್ದು. ಆಗ ಕೇಂದ್ರ ಸರ್ಕಾರ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ, ಮುಂದಿನ ಕ್ಷೇತ್ರಗಳ ಪುನರ್‌ವಿಂಗಡಣೆ 2026ರಲ್ಲಿ ನಡೆಯಲಿದೆ. ಇದಕ್ಕೆ 2021ರ ಜನಸಂಖ್ಯೆ ಆಧಾರ ಮಾಡಿಕೊಳ್ಳಬಹುದು ಎಂದು ತಿಳಿಸಿತು.

ಮುಂದೆ ಕ್ಷೇತ್ರ ಪುನರ್‌ವಿಂಗಡಣೆಯಾದಾಗ ಜನಸಂಖ್ಯಾ ಸ್ಫೋಟಕ್ಕೆ ಕಾರಣವಾದ ರಾಜ್ಯಗಳಿಗೆ 'ಬಹುಮಾನ' ನೀಡುವ ಹಾಗೂ ಜನಸಂಖ್ಯೆ ನಿಯಂತ್ರಿಸಿದ ರಾಜ್ಯಗಳಿಗೆ ಬರೆ ಹಾಕಲಾಗುವುದೇ? ಅಥವಾ ಜನಸಂಖ್ಯೆ ಆಧಾರದ ಮೇಲೆ ಪ್ರಾತಿನಿಧ್ಯದಲ್ಲಿ ಆಗುತ್ತಿರುವ ವ್ಯತ್ಯಾಸ ನಿಲ್ಲಲಿದೆಯೇ? ಎಂಬ ಪ್ರಶ್ನೆಗೆ ಕಾಲ ಉತ್ತರಿಸಬೇಕಿದೆ.

**- ಜಿ.ಎನ್. ಕಾಮತ್**

## ಅಧ್ಯಾಪಕರಿಗೆ ಪ್ರೋಗ್ರಾಮಿಂಗ್ ಭಾಷೆ ಅಗತ್ಯ



ದಾವಣಗೆರೆ, ಫೆ.5- ಇಂದಿನ ದಿನಗಳಲ್ಲಿ ಕಂಪ್ಯೂಟರ್ ತಂತ್ರಜ್ಞಾನ ಬಹಳ ಮುಂದುರೆದಿದ್ದು, ಕಂಪ್ಯೂಟರ್ ಯಂತ್ರಗಳನ್ನು ಎಲ್ಲಾ ಕಡೆ ಬಳಸಲಾಗುತ್ತಿದೆ. ಮೆಡಿಕಲ್, ಇಂಡಸ್ಟ್ರೀಸ್, ಅಮೆಜಾನ್, ಫ್ಲಿಪ್‌ಕಾರ್ಟ್‌ನಲ್ಲಿ, ಗೂಗಲ್‌ನಲ್ಲಿ ಡೇಟಾ ಬಳಕೆ ಅತ್ಯವಶ್ಯಕ, ಎಲ್ಲಾ ಕಡೆ ಡೇಟಾ ಬಳಕೆಗೆ ಡೇಟಾ ಅನಾಲಿಟಿಕ್ಸ್ ಮತ್ತು ಡೇಟಾ ಸೈನ್ ಅಲ್ಗಾರಿದಮ್ ಬಳಕೆ ಮಾಡಿಕೊಂಡು ಡೇಟಾ ಉಳಿಸಿಕೊಳ್ಳಲು ವಿವಿಧ ಪ್ರೋಗ್ರಾಮಿಂಗ್ ಭಾಷೆಯನ್ನು ಬಳಸಬೇಕಾಗುತ್ತದೆ ಎಂದು ಟಿ.ಸಿ.ಎಸ್ ಮತ್ತು ಎ.ಡಬ್ಲ್ಯು.ಎಸ್ ಕ್ಲೌಡ್ ಲಿಮಿಟೆಡ್‌ನ ವ್ಯವಸ್ಥಾಪಕ ಶ್ರೀನಿವಾಸ್ ರಾಮಾನುಜಂ ಅಧ್ಯಾಪಕರಿಗೆ ತಿಳಿಸಿದರು.

ನಗರದ ಬಾಪೂಜಿ ಇಂಜಿನಿಯರಿಂಗ್ ಕಾಲೇಜಿನ ಮಾಹಿತಿ ತಂತ್ರಜ್ಞಾನ ವಿಭಾಗದ ವತಿಯಿಂದ ಆಯೋಜಿಸಲಾಗಿದ್ದ ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ನಡೆಯುತ್ತಿರುವ ಡೇಟಾ ಅನಾಲಿಟಿಕ್ಸ್ ಮತ್ತು ಡೇಟಾ ಸೈನ್‌ನ ಐದು ದಿನದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪನವರು ಕಂಪ್ಯೂಟರ್ ಪ್ರೋಗ್ರಾಮಿಂಗ್‌ನ ವಿವಿಧ ಭಾಷೆಗಳ ಉದ್ದೇಶಗಳನ್ನು ತಿಳಿಸುತ್ತಾ, ಅಧ್ಯಾಪಕರು ಕಲಿತು ವಿದ್ಯಾರ್ಥಿಗಳಿಗೆ ಕಲಿಸಬೇಕೆಂದು ಕರೆ ನೀಡಿದರು.

ಅಧ್ಯಕ್ಷತೆಯನ್ನು ಮಾಹಿತಿ ತಂತ್ರಜ್ಞಾನದ ಮುಖ್ಯಸ್ಥರಾದ ಡಾ. ಪೂರ್ಣಿಮ ವಹಿಸಿದ್ದರು. ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿ ಶಿವಕುಮಾರ ಕೇಶವಮೂರ್ತಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಚೈತ್ರ ಪ್ರಾರ್ಥಿಸಿದರು. ಡಾ.ವಿನೂತ ಸ್ವಾಗತಿಸಿದರೆ, ಡಾ. ಶ್ರೀನಿವಾಸ ವಂದಿಸಿದರು. ಡಾ. ಎಂ. ವರ್ಷಾ ಮತ್ತು ದಿವ್ಯಾ ನಿರೂಪಿಸಿದರು.

## ಪತ್ನಿ ಮೇಲೆ ಹಲ್ಲೆ, ವಿನೋದ್ ಕಾಂಬ್ಳಿ ವಿರುದ್ಧ ದೂರು

ಮುಂಬೈ, ಫೆ. 5 – ಭಾರತೀಯ ಕ್ರಿಕೆಟ್ ತಂಡದ ಮಾಜಿ ಆಟಗಾರ ವಿನೋದ್ ಕಾಂಬ್ಳಿ ವಿರುದ್ಧ ಪತ್ನಿ ಮೇಲೆ ಹಲ್ಲೆ ನಡೆಸಿದ ಹಾಗೂ ಅವಹೇಳನ ಮಾಡಿದ ದೂರು ದಾಖಲಾಗಿದೆ. ಪಾನಮತ್ತ ಸ್ಥಿತಿಯಲ್ಲಿ ಈ ಕೃತ್ಯ ಎಸಗಿರುವುದಾಗಿ ದೂರಿನಲ್ಲಿ ತಿಳಿಸಲಾಗಿದೆ. ಪೊಲೀಸರು ಈ ಬಗ್ಗೆ ಹೇಳಿಕೆ ದಾಖಲಿಸಿಕೊಂಡು ನೋಟಿಸ್ ಕಳಿಸಿದ್ದಾರೆ. ದೂರಿಗೆ ಸಂಬಂಧಿಸಿದಂತೆ ಇದುವರೆಗೂ ಬಂಧನದ ಕ್ರಮ ತೆಗೆದುಕೊಂಡಿಲ್ಲ ಎಂದು ಬಾಂದ್ರಾ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಕಾಂಬ್ಳೆ ಪತ್ನಿ ಆಂಡ್ರಿಯ ಅವರು ಪೊಲೀಸರಲ್ಲಿ ದೂರು ದಾಖಲಿಸಿದ್ದಾರೆ. ಕಾಂಬ್ಳಿ ಕುಕರ್ ಹ್ಯಾಂಡಲ್‌ನಿಂದ ಹಲ್ಲೆ ನಡೆಸಿದ ಕಾರಣ ತಲೆಗೆ ಗಾಯವಾಗಿದೆ ಎಂದು ಪತ್ನಿ ತಿಳಿಸಿದ್ದಾರೆ. ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಈ ಘಟನೆ ನಡೆದಿದೆ. ಆಗ 12 ವರ್ಷದ ಮಗ ಮಧ್ಯ ಪ್ರವೇಶಿಸಿ ಜಗಳ ತಪ್ಪಿಸುವ ಯತ್ನ ನಡೆಸಿದ. ಆದರೂ, ಕಾಂಬ್ಳಿ ಹಲ್ಲೆ ನಡೆಸಿರುವುದಾಗಿ ತಿಳಿಸಲಾಗಿದೆ. ಕಳೆದ ವರ್ಷ ಫೆಬ್ರವರಿಯಲ್ಲಿ, ಬಾಂದ್ರಾದ ತಮ್ಮ ಮನೆ ಇರುವ ಹೌಸಿಂಗ್ ಸೊಸೈಟಿ ಗೇಟ್‌ಗೆ ಕಾಂಬ್ಳಿ ಕಾರಿನಿಂದ ಅಪ್ಪಳಿಸಿದ ಕಾರಣಕ್ಕಾಗಿ ಬಂಧಿಸಿ ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತು.

## ಜಗಳೂರು: ನ್ಯಾಯಾಲಯ ಆವರಣದಲ್ಲಿ ಸ್ವಚ್ಛತಾ ಕಾರ್ಯ



ಜಗಳೂರು, ಫೆ. 5 - ಹುತಾತ್ಮರ ದಿನಾಚರಣೆ, ಸ್ವಚ್ಛತಾ ದಿನಾಚರಣೆ ಅಂಗವಾಗಿ ಜಗಳೂರು ನ್ಯಾಯಾಧೀಶರಾದ ಮಹಮ್ಮದ್ ಯುನೂಸ್ ಅಥಣಿ, ವಕೀಲರು ಹಾಗೂ ಸಿಬ್ಬಂದಿ ವರ್ಗದಿಂದ ನ್ಯಾಯಾಲಯದ ಆವರಣದಲ್ಲಿ ಸ್ವಚ್ಛತಾ ಕಾರ್ಯ ನಡೆಯಿತು.

# ಸುಂಕದಕಟ್ಟೆ ಶ್ರೀ ಮಂಜುನಾಥ ಸ್ವಾಮಿ-ಶ್ರೀ ನರಸಿಂಹ ಸ್ವಾಮಿ ದೇವಸ್ಥಾನದ ರಾಜಗೋಪುರ ಲೋಕಾರ್ಪಣೆ



**ದೇವಸ್ಥಾನಗಳು, ಮಠ-ಮಾನ್ಯಗಳು ಶಾಂತಿ-ನೆಮ್ಮದಿಯ ತಾಣಗಳು: ಎಂ.ಪಿ. ರೇಣುಕಾಚಾರ್ಯ**

ಹೊನ್ನಾಳಿ, ಫೆ.5- ದೇವಸ್ಥಾನಗಳು, ಮಠ-ಮಾನ್ಯಗಳು ಶಾಂತಿ-ನೆಮ್ಮದಿಯ ತಾಣಗಳು ಎಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ತಾಲ್ಲೂಕಿನ ಸುಂಕದಕಟ್ಟೆ ಗ್ರಾಮದ ಶ್ರೀ ಮಂಜುನಾಥ ಸ್ವಾಮಿ - ಶ್ರೀ ನರಸಿಂಹ ಸ್ವಾಮಿ ದೇವಸ್ಥಾನದ ರಾಜಗೋಪುರ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಾವು ಹಣ ಗಳಿಸಿ, ಐಷಾರಾಮಿ ಜೀವನ ನಡೆಸಬಹುದು. ಆದರೆ, ಶಾಂತಿ-ನೆಮ್ಮದಿಗಳನ್ನು ಖರೀದಿಸಲು ಸಾಧ್ಯವಿಲ್ಲ. ನಮ್ಮ ಮನಸ್ಸಿಗೆ ಶಾಂತಿ-ನೆಮ್ಮದಿ ಇದ್ದರೆ ಮಾತ್ರ ಯಶಸ್ವಿ ಬದುಕು ಸಾಗಿಸಲು ಸಾಧ್ಯ. ಆದ್ದರಿಂದ, ದೇವಸ್ಥಾನಗಳಿಗೆ ತೆರಳಿ ಧ್ಯಾನ, ಪ್ರಾರ್ಥನೆಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳುವ ಮೂಲಕ ಶಾಂತಿ-ನೆಮ್ಮದಿ ಪಡೆಯಬಹುದು ಎಂದು ತಿಳಿಸಿದರು.

ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ ಎಚ್.ಎ. ಉಮಾಪತಿ ಮಾತನಾಡಿ, ಸುಂಕದಕಟ್ಟೆ ಗ್ರಾಮದ ಶ್ರೀ ಮಂಜುನಾಥ ಸ್ವಾಮಿ-ಶ್ರೀ ನರಸಿಂಹ ಸ್ವಾಮಿ ಪವಾಡ ಅನನ್ಯ. ಅಪಾರ ಸಂಖ್ಯೆಯಲ್ಲಿ ಇಲ್ಲಿಗೆ ಆಗಮಿಸುವ ಭಕ್ತರು ತಮ್ಮ ಯಾವುದೇ ಕೆಲಸಗಳಿಗೂ ಮುನ್ನ ಸ್ವಾಮಿಯ ಹೂವಿನ ಪ್ರಸಾದ ಪಡೆದು ಕಾರ್ಯತತ್ಪರರಾಗುತ್ತಾರೆ. ಸ್ವಾಮಿಯನ್ನು ನಂಬಿದ ಎಲ್ಲರಿಗೂ ಒಳಿತಾಗಿದೆ ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ಬಿ. ಸಿದ್ಧಪ್ಪ ಮಾತನಾಡಿ, ಈವರೆಗೆ ಸುಂಕದಕಟ್ಟೆ ಗ್ರಾಮದ ಹಿರಿಯರು ಶ್ರೀ ದೇವಸ್ಥಾನದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಇನ್ನು ಮುಂದೆ ಯುವಕರು ಹಿರಿಯರ ಮಾರ್ಗದರ್ಶನದಲ್ಲಿ ದೇವಸ್ಥಾನ ಮತ್ತು ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ತಿಳಿಸಿದರು.

ರೈತ ಮುಖಂಡ ಸುಂಕದಕಟ್ಟೆ ಕರಿಬಸಪ್ಪ ಮಾತನಾಡಿ, ಶ್ರೀ ಮಂಜುನಾಥ ಸ್ವಾಮಿ-ಶ್ರೀ ನರಸಿಂಹ ಸ್ವಾಮಿ ದೇವಸ್ಥಾನ ದಾವಣಗೆರೆ ಜಿಲ್ಲೆಯ 'ಎ' ಶ್ರೇಣಿಯ ದೇವಸ್ಥಾನವಾಗಿದೆ. ಭಕ್ತರ ಕಾಣಿಕೆ ಅಧಿಕ ಪ್ರಮಾಣದಲ್ಲಿ ಹರಿದುಬರುತ್ತಿದೆ. ಆದರೆ, ದೇವಸ್ಥಾನದ ಅಭಿವೃದ್ಧಿಯ ವಿಷಯ ಬಂದಾಗ ಅವರ ಅನುಮತಿ, ಇವರ ಅನುಮತಿ ಪಡೆಯಬೇಕಾಗುತ್ತದೆ. ಇದು ತಪ್ಪಬೇಕು. ಹುಂಡಿಯ ಹಣ ಬಳಕೆಯ ಕಾನೂನು ಬದಲಾಗಬೇಕು. ದೇವಸ್ಥಾನದ ಅಭಿವೃದ್ಧಿ ವಿಷಯಕ್ಕೆ ಸಂಬಂಧಿಸಿದಂತೆ, ನಿಯಮಗಳನ್ನು ಸರಳೀಕರಣಗೊಳಿಸಬೇಕು ಎಂದು ಆಗ್ರಹಿಸಿದರು.

ವಿಧಾನ ಪರಿಷತ್ ಸದಸ್ಯ ಡಿ.ಎಸ್. ಅರುಣ್, ಮಾಜಿ ಶಾಸಕ ಡಾ.ಡಿ.ಬಿ. ಗಂಗಪ್ಪ, ಅರಬಗಟ್ಟೆ ಗ್ರಾಪಂ ಸದಸ್ಯ ಡಿ.ಬಿ. ಶ್ರೀನಾಥ್, ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಎಸ್.ಕೆ. ನರಸಿಂಹಮೂರ್ತಿ, ಪ್ರಧಾನ ಅರ್ಚಕ ಎಸ್. ರಾಜುಸ್ವಾಮಿ, ಮುಖಂಡರಾದ ಎಸ್. ಆರ್. ಮಂಜುನಾಥ್, ಎಚ್.ಎನ್. ನಾಗರಾಜ್, ವರುಣಾಚಾರಿ, ನಿವೃತ್ತ ಪ್ರಾಂಶುಪಾಲ ಎಸ್.ಆರ್. ಹನುಮಂತಪ್ಪ, ಎಚ್.ಆರ್. ರಾಕೇಶ್, ಆಕಾಶ್ ಇತರರು ಮಾತನಾಡಿದರು.

ಹೊನ್ನಾಳಿ ಪುರಸಭೆಯ ಅಧ್ಯಕ್ಷೆ ಸುಮಾ ಇಂಚರ ಮಂಜುನಾಥ್, ಅರಬಗಟ್ಟೆ ಗ್ರಾಪಂ ಅಧ್ಯಕ್ಷೆ ಅನಿತಾ ಕರಿಬಸಪ್ಪ ಮತ್ತಿತರರು ಇದ್ದರು.

**ಗೋಮಾಳ ಉಳಿಸಲು ವಿದ್ಯಾರ್ಥಿನಿ ಮನವಿ :** ಸುಂಕದಕಟ್ಟೆ ಗ್ರಾಮಕ್ಕೆ ಸಮೀಪದ ಮಲ್ಲೇದೇವರಕಟ್ಟೆ ಬೇಚಾರು ಗ್ರಾಮದ ಸರ್ವೆ ನಂ. 4 ಮತ್ತು 7ರಲ್ಲಿನ ಸುಮಾರ 60 ಎಕರೆಯಷ್ಟು ಗೋಮಾಳವನ್ನು ಅನ್ಯ ಉದ್ದೇಶಕ್ಕೆ ಬಳಸಲು ಸಿದ್ಧತೆಗಳು ನಡೆದಿವೆ. ಗೋಮಾಳದ ಬಳಿ ದೊಡ್ಡ ಕೆರೆ ಇದೆ. ವಿಶಾಲ ಜಾಗದಲ್ಲಿ ಅರಣ್ಯ ಪ್ರದೇಶವಿದೆ. ಈ ಅರಣ್ಯ ಪ್ರದೇಶ ನವಿಲು ಸೇರಿದಂತೆ ವಿವಿಧ ವನ್ಯಜೀವಿಗಳ ತಾಣವಾಗಿದೆ. ಆದ್ದರಿಂದ, ಗೋಮಾಳವನ್ನು ನಮಗೆ ಉಳಿಸಬೇಕು. ತನ್ಮೂಲಕ ಅಮೂಲ್ಯ ಜೀವವೈವಿಧ್ಯ ಸಂರಕ್ಷಿಸಲು ಸಹಕರಿಸಬೇಕು ಎಂದು ಸುಂಕದಕಟ್ಟೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಏಳನೇ ತರಗತಿ ವಿದ್ಯಾರ್ಥಿನಿ ಯು.ಎಂ. ಅನು ಮನವಿ ಸಲ್ಲಿಸಿದರು.

# ಸೇವಾ ಮನೋಭಾವನೆ ಬೆಳೆಸಿಕೊಳ್ಳಲು ಎನ್ನೆಸ್ಸೆಸ್ ಶಿಬಿರಗಳು ಸಹಕಾರಿ



ಹಿರೇಕೆರೂರು, ಫೆ.5- ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಸೇವಾ ಮನೋಭಾವನೆ ಬೆಳೆಸಿಕೊಂಡು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಳ್ಳಲು ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರಗಳು ಸಹಕಾರಿಯಾಗಲಿವೆ ಎಂದು ಪ.ಪಂ. ಅಧ್ಯಕ್ಷ ಕಂಠಾಧರ ಅಂಗಡಿ ಹೇಳಿದರು.

ಹಿರೇಕೆರೂರು ತಾಲ್ಲೂಕು ಬಾಳಂಬೀಡ ಗ್ರಾಮದ ಬಿ.ಆರ್.ತಂಬಾಕದ ಪ್ರಥಮ ದರ್ಜೆ ಮಹಾವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಬುರಡಿಕಟ್ಟಿ ಗ್ರಾಮ ಪಂಚಾಯಿತಿ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಶಿಬಿರದಲ್ಲಿ ಪಡೆದ ಅನುಭವ ಮತ್ತು ಸೇವೆ ಮುಂದಿನ ಜೀವನಕ್ಕೆ ದಾರಿ ದೀಪವಾಗಬೇಕು. ಗ್ರಾಮದಲ್ಲಿ ನೀವು ಮಾಡಿದ ಶ್ರಮದಾನ ಕಾರ್ಯ ಸದಾ ನೆನಪಿನಲ್ಲಿರುವಂತೆ ಮಾಡಬೇಕು ಎಂದು ಅವರು ಹೇಳಿದರು.

ಸಿಇಎಸ್ ಸಂಸ್ಥೆಯ ಆಡಳಿತಾಧಿಕಾರಿ ಎಸ್. ವೀರಭದ್ರಯ್ಯ, ಪ್ರಾಚಾರ್ಯ ಡಾ.ಎಸ್.ಬಿ.ಚನ್ನನಗೌಡ್ರ ಮಾತನಾಡಿದರು. ಈ ಸಂದರ್ಭದಲ್ಲಿ ಪಪಂ ಮಾಜಿ ಅಧ್ಯಕ್ಷ ಗುರುಶಾಂತ ಯತ್ತಿನಹಳ್ಳಿ, ಸಿ.ಆರ್.ದೂದಿಹಳ್ಳಿ, ನಾಗರಾಜ ಹೆಚ್.ಪಿ, ಸೋಮಶೇಖರ ಹುಲ್ಲಿನಕೊಪ್ಪ, ಪ್ರವೀಣ ಕೂರಗೇರ, ಪ್ರಶಾಂತ ಮರಿಗೂಳಪ್ಪನವರ, ಪವಮಾನ ಎಂ, ಸೌಮ್ಯ ಪುಟ್ಟಕ್ಕಳವರ, ಶಾಂಭವಿ ಮಟ್ಟಿಮನಿ, ಸವಿತಾ ಎಂ.ಜಿ, ನಾಗರತ್ನ ಎಂ.ಡಿ, ಕಿರಣ್ ಬಾಗಲಾರ ಶಿಬಿರದ ಯೋಜನಾಧಿಕಾರಿಗಳಾದ ಕೆ.ಪಿ. ಮೋಹನ್‌ಕುಮಾರ್, ಲತಾ ಬಿ.ವೈ, ಲಿಂಗರಾಜ ಹಲವಾಗಲ್, ಕವಿತಾ ಎ. ಸೇರಿದಂತೆ ಗ್ರಾಮಸ್ಥರು, ಶಿಬಿರಾರ್ಥಿಗಳು ಹಾಜರಿದ್ದರು.

## ಇಂದು, ನಾಳೆ ಎಐಸಿಸಿ ವಿಧಾನಸಭಾ ಕ್ಷೇತ್ರವಾರು ಸಭೆ



ದಾವಣಗೆರೆ, ಫೆ.5- ಇದೇ ದಿನಾಂಕ 06 ರ ಸೋಮವಾರ ಹಾಗೂ 07 ರ ಮಂಗಳವಾರ ಎಐಸಿಸಿ ವೀಕ್ಷಕರಾದ ಪ್ರಣತಿ ಶಿಂಧೆ, ಜಿಲ್ಲಾಧ್ಯಕ್ಷ ಎಚ್.ಬಿ ಮಂಜಪ್ಪನವರ ಉಪಸ್ಥಿತಿ ಯಲ್ಲಿ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರದ ಪಕ್ಷದ ಚುನಾಯಿತ ಪ್ರತಿನಿಧಿಗಳು, ವಿಧಾನಸಭಾ ಚುನಾವಣಾ ಆಕಾಂಕ್ಷಿಗಳು, ಪಕ್ಷದ ಎಲ್ಲಾ ಘಟಕಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಮತ್ತು ಮುಖಂಡರ ಸಭೆಯನ್ನು ಬ್ಲಾಕ್ ಅಧ್ಯಕ್ಷರುಗಳ ಅಧ್ಯಕ್ಷತೆಯಲ್ಲಿ ನಡೆಯಲಿವೆ. ಸಭೆಗೆ ಕಡ್ಡಾಯವಾಗಿ ಆಗಮಿಸಲು ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ತಿಳಿಸಿದ್ದಾರೆ.

ನಾಳೆ ದಿನಾಂಕ 6ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಸಭೆ ಪಕ್ಷದ ಕಚೇರಿಯಲ್ಲಿ ನಡೆಯಲಿದೆ. ಮಧ್ಯಾಹ್ನ 12:30 ಗಂಟೆಗೆ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಸಭೆ ಪಕ್ಷದ ಕಚೇರಿಯಲ್ಲಿ ನಡೆಯಲಿದೆ. ಮಧ್ಯಾಹ್ನ 1:30ಕ್ಕೆ ಹರಿಹರ ವಿಧಾನ ಸಭಾ ಕ್ಷೇತ್ರದ ಸಭೆ ಹರಿಹರ ಕಾಂಗ್ರೆಸ್ ಕಚೇರಿಯಲ್ಲಿ ನಡೆಯಲಿದೆ. ಮಧ್ಯಾಹ್ನ 3 ಗಂಟೆಗೆ ಹೊನ್ನಾಳಿ ವಿಧಾನಸಭಾ ಕ್ಷೇತ್ರದ ಸಭೆ ಹೊನ್ನಾಳಿಯ ಪಕ್ಷದ ಕಚೇರಿಯಲ್ಲಿ ನಡೆಯಲಿದೆ.

ನಾಡಿದ್ದು ದಿನಾಂಕ 7ರ ಬೆಳಗ್ಗೆ 11 ಗಂಟೆಗೆ ಚನ್ನಗಿರಿ ವಿಧಾನಸಭಾ ಕ್ಷೇತ್ರದ ಸಭೆ ಚನ್ನಗಿರಿಯ ಪಕ್ಷದ ಕಚೇರಿಯಲ್ಲಿ ನಡೆಯಲಿದೆ. ಮಧ್ಯಾಹ್ನ 12 ಕ್ಕೆ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಸಭೆ ಮಾಯಕೊಂಡದ ಪಕ್ಷದ ಕಚೇರಿಯಲ್ಲಿ ನಡೆಯಲಿದೆ. ಅಂದು ಮಧ್ಯಾಹ್ನ 1 ಗಂಟೆಗೆ ಜಗಳೂರು ವಿಧಾನಸಭಾ ಕ್ಷೇತ್ರದ ಸಭೆ ಜಗಳೂರಿನ ಪಕ್ಷದ ಕಚೇರಿಯಲ್ಲಿ ನಡೆಯಲಿದೆ.

# ಧೂಳೆಹೊಳೆ : ಶಾಲಾ ಮಕ್ಕಳಿಗೆ ಕಲಿಕಾ ಪರಿಕರ ನೀಡಿದ ಪವರ್ ಸ್ಕೂಲ್ ಸಂಸ್ಥೆ



**ಮಲೇಬೆನ್ನೂರು**

ಮಲೇಬೆನ್ನೂರು, ಫೆ.05- ಕಾರ್ಪೊರೇಟ್ ಕಂಪನಿಗಳು ಸರ್ಕಾರಿ ಶಾಲೆಗಳಿಗೆ ಅಗತ್ಯ ನೆರವು ನೀಡುವುದು ಒಂದು ನಿಯಮವಾಗಿದೆ ಎಂದು ಬೆಂಗಳೂರಿನ ಪವರ್ ಸ್ಕೂಲ್ ಸಂಸ್ಥೆಯ ನಿರ್ದೇಶಕ ಪ್ರಕಾಶನ್ ತಿಳಿಸಿದರು.

ಅವರು ಧೂಳೆಹೊಳೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಬೆಂಗಳೂರಿನ ಪವರ್ ಸ್ಕೂಲ್ ಸಂಸ್ಥೆ ವತಿಯಿಂದ ಮತ್ತು ಇಂಡಿಯಾ ಸುಧಾರ್ ಸಂಸ್ಥೆ ನೀಡಿದ ಪೀಠೋಪಕರಣಗಳು, ನಲಿ-ಕಲಿ ಮಕ್ಕಳಿಗೆ ಕುರ್ಚಿ ಟೇಬಲ್‌ಗಳನ್ನು ವಿತರಿಸಿ ಮಾತನಾಡಿದರು. ಈಗಾಗಲೇ ನಾವು ಚೆನ್ನೈ, ಆಗ್ರಾ, ಬೆಂಗಳೂರಿನ ಗ್ರಾಮೀಣ ಶಾಲೆಗಳಿಗೆ ನೆರವು ನೀಡಿದ್ದು, ಮಕ್ಕಳು ಸಂತಸದಿಂದ ಕಲಿಕೆಯಲ್ಲಿ ತೊಡಗಿದ್ದಾರೆ. ಅನಿವಾರ್ಯವಾದಲ್ಲಿ ಶಾಲಾ ಶೌಚಾಲಯಕ್ಕೆ ಸಹಾಯ ಧನವನ್ನು ನೀಡುತ್ತೇವೆ, ಅವರ ಜತೆ ಸಮಯ ಕಳೆಯುವುದು ಬಹಳ ಇಷ್ಟವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಪವರ್ ಸ್ಕೂಲ್ ಸಂಸ್ಥೆಯ ಸ್ವಾತಿ ತಿವಾರಿ ಮಾತನಾಡಿ, ಸಹಾಯ ಪಡೆದ ವಿದ್ಯಾರ್ಥಿಗಳು ಭವಿಷ್ಯದಲ್ಲಿ ಮತ್ತೊಬ್ಬರಿಗೆ ಸಹಾಯ ಮಾಡುವಂತಾಗಲಿ, ಉತ್ತಮ ವಿದ್ಯಾಭ್ಯಾಸ ಮಾಡಿ ಗ್ರಾಮಕ್ಕೆ, ಶಾಲೆಗೆ ಕೀರ್ತಿ ತನ್ನಿ ಎಂದು ಸಲಹೆ ನೀಡಿದರು.

ಮುಖ್ಯ ಶಿಕ್ಷಕ ಬಸವರಾಜಪ್ಪ ಮಾತನಾಡಿ ಸರ್ಕಾರಿ ಶಾಲೆಯಲ್ಲಿನ ಮಕ್ಕಳು ಬಡತನ ರೇಖೆಗಿಂತ ಕೆಳಗಿನ ಮಕ್ಕಳಾಗಿದ್ದು, ಸಂಘ- ಸಂಸ್ಥೆಗಳು ಕುರ್ಚಿಗಳು ಹಾಗೂ ಶೌಚಾಲಯಕ್ಕೆ ಧನ ಸಹಾಯ ಮಾಡಿದ್ದು, ಅದ್ಭುತ ಪ್ರತಿಭೆ ಹೊರಹಾಕಲು. ಡಿಜಿಟಲ್ ತಂತ್ರಜ್ಞಾನಕ್ಕೆ ಹೊಂದಿಕೊಳ್ಳಲು ಪೂರಕವಾಗಲಿದೆ ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ಕೆ.ನಿಜಲಿಂಗಪ್ಪ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಹಿರಿಯ ವ್ಯವಸ್ಥಾಪಕಿ ಸಂಗೀತ, ನಿರ್ದೇಶಕರಾದ ಸೌಂದರ್ಯ ರಾಜನ್, ಶರವಣ್, ದಿನೇಶ್ ಪುರುಷೋತ್ತಮ್, ಗ್ರಾಮದ ಮುಖಂಡರಾದ ಕುಬೇರಪ್ಪ, ಕೆ.ಜಿ.ಶಿವನಗೌಡ, ರಾಮನಗೌಡ, ಹಾಲನಗೌಡ, ಎಂ.ಆರ್ ಪಾಟೀಲ್, ಸದಾಶಿವಪ್ಪ, ವಿರೂಪಾಕ್ಷಪ್ಪ, ಶಿಕ್ಷಕ ಶರಣ್‌ಕುಮಾರ್ ಹೆಗಡೆ ಹಾಗೂ ಶಿಕ್ಷಕ ವರ್ಗ ಮತ್ತು ಗ್ರಾಮಸ್ಥರು ಈ ವೇಳೆ ಹಾಜರಿದ್ದರು.

## ಇಂದು ನೂತನ ವಿದ್ಯಾಲಯದಲ್ಲಿ ದೀಪದಾನ ಸಮಾರಂಭ

ದಾವಣಗೆರೆಯ ನೂತನ ಶಿಕ್ಷಣ ಮಹಾವಿದ್ಯಾಲಯದ 2021-23ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿ ಸಂಘದ ಸಮಾರೋಪ ಹಾಗೂ ದೀಪದಾನ ಸಮಾರಂಭ ಇಂದು ಮಧ್ಯಾಹ್ನ 3.30 ಗಂಟೆಗೆ ಕಾಲೇಜಿನ ಉಪನ್ಯಾಸ ಕೊಠಡಿಯಲ್ಲಿ ನಡೆಯಲಿದೆ. ಅಧ್ಯಕ್ಷತೆಯನ್ನು ಎನ್. ಪರಶುರಾಮನಗೌಡ ವಹಿಸುವರು. ಡಾ. ರಂಗಪ್ಪ ಕೆ.ಬಿ. ಸಮಾರೋಪ ಭಾಷಣ ಮಾಡುವರು. ಕಾರ್ಯಕ್ರಮದಲ್ಲಿ ಡಾ. ದಿವಾಕರ ನಾಯ್ಕ್ ಕೆ.ಎಸ್. ಉಪಸ್ಥಿತರಿರುವರು.

## ಆವರಗೊಳ್ಳದಲ್ಲಿ ಇಂದು ಬಸವೇಶ್ವರ ಆರೋಹಣ ಉತ್ಸವ



ದಾವಣಗೆರೆ ತಾಲ್ಲೂಕಿನ ಆವರಗೊಳ್ಳ ಗ್ರಾಮದ ಶ್ರೀ ವೀರಭದ್ರೇಶ್ವರ ಮಹಾಸ್ವಾಮಿ ರಥೋತ್ಸವವು ಇದೇ ದಿನಾಂಕ 10ರ ಶುಕ್ರವಾರ ಸಂಜೆ 6 ಗಂಟೆಗೆ ಜರುಗಲಿದೆ. ಇಂದು ದಿನಾಂಕ 6 ರ ಸೋಮವಾರ ರಾತ್ರಿ 9 ಗಂಟೆಗೆ ಬಸವೇಶ್ವರ ಆರೋಹಣ ಉತ್ಸವ ನಡೆಯಲಿದೆ.

## ಇಂದು ಡಯಾಲಿಸಿಸ್ ಘಟಕ ಉದ್ಘಾಟನೆ

ದಾವಣಗೆರೆ : ಎಸ್. ಎಸ್. ಕೇರ್ ಟ್ರಸ್ಟ್ ಆಶ್ರಯದಲ್ಲಿ ಅಡಿಷನಲ್ ಡಯಾಲಿಸಿಸ್ ಘಟಕವನ್ನು ಇಂದು ಸಂಜೆ 5 ಗಂಟೆಗೆ ನಗರದ ಕೆ.ಆರ್. ರಸ್ತೆಯ ಎಸ್.ಎಸ್. ಜನರಲ್ ಹಾಸ್ಪಿಟಲ್‌ನಲ್ಲಿ ಉದ್ಘಾಟಿಸಲಾಗುವುದು.

ಡಯಾಲಿಸಿಸ್ ಘಟಕವನ್ನು ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಉದ್ಘಾಟಿಸುವರು. ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸುವರು.

## ರಾಜ್ಯ ಮಟ್ಟದ 'ಅಂಚೆ-ಕುಂಚ' ಸ್ಪರ್ಧೆ

ದಾವಣಗೆರೆ, ಫೆ.5- ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಮಹಾಶಿವರಾತ್ರಿ ಪ್ರಯುಕ್ತ 50 ಪೈಸೆ ಅಂಚೆ ಕಾರ್ಡಿನಲ್ಲಿ ರಾಜ್ಯ ಮಟ್ಟದ ಚಿತ್ರ ಬರೆಯುವ 'ಅಂಚೆ-ಕುಂಚ' ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ.

ಯಾವುದೇ ಕಲಾ ಪ್ರಕಾರಗಳಲ್ಲಿ ಶಿವನ ಚಿತ್ರ ಬರೆದು ಇದೇ ದಿನಾಂಕ 15 ರೊಳಗೆ ತಲುಪುವಂತೆ ಕನ್ನಡದಲ್ಲಿ ತಮ್ಮ ಹೆಸರು, ವಿಳಾಸ ವಯಸ್ಸು, ವ್ಯಾಟ್ಸಾಪ್ ಸಂಖ್ಯೆ ಕಳಿಸಬೇಕು. ಚಿತ್ರ ಬರೆದು ಅಂಚೆ ಕಾರ್ಡ್ ಕಳುಹಿಸುವ ವಿಳಾಸ # 431, 'ಕನ್ನಡ ಕೃಪಾ' ಕುವೆಂಪು ರಸ್ತೆ, ಕಸ್ತೂರಬಾ ಬಡಾವಣೆ, ದಾವಣಗೆರೆ- 2. ಮೊ. 9538732777.

# ಸರಸ್ವತಿ ನಗರ ಸಿ ಬ್ಲಾಕ್ ಪಾರ್ಕ್ ಅಭಿವೃದ್ಧಿ

## 30 ಲಕ್ಷ ರೂ. ಕಾಮಗಾರಿಗೆ ಶಾಸಕ ರವೀಂದ್ರನಾಥ್‌ರಿಂದ ಶಂಕುಸ್ಥಾಪನೆ



ದಾವಣಗೆರೆ, ಫೆ. 5 - ಸರಸ್ವತಿ ನಗರದ ಸಿ ಬ್ಲಾಕ್ ನಲ್ಲಿ ಪಾರ್ಕ್ ಅಭಿವೃದ್ಧಿಗೆ 30 ಲಕ್ಷ ರೂ. ಮಂಜೂರಾಗಿದೆ.

ನಗರೋತ್ಥಾನ ಯೋಜನೆ ಹಾಗೂ ಮುಖ್ಯಮಂತ್ರಿ ನಿಧಿಯಡಿ 125 ಕೋಟಿ ರೂ. ಬಿಡುಗಡೆ ಆಗಿದೆ. ಈ ಅನುದಾನದಲ್ಲಿ ಈ ಪಾರ್ಕ್ ಅಭಿವೃದ್ಧಿಗೆ 30 ಲಕ್ಷ ರೂ. ಬಂದಿದ್ದು, ಈ ಕಾಮಗಾರಿಗೆ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಎಸ್. ಎ. ರವೀಂದ್ರನಾಥ್ ಅವರು ಶಂಕುಸ್ಥಾಪನೆ ನೆರವೇರಿಸಿದರು.

ಈ ವಾರ್ಡ್ ನಲ್ಲಿ ಉತ್ತಮ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಇದೊಂದು ಅತ್ಯುತ್ತಮ ಉದ್ಯಾನವನವಾಗಲಿ. ಜನರು ಇದರ ಸದುಪಯೋಗಪಡೆದುಕೊಳ್ಳಲು ಆದಷ್ಟು ಬೇಗ ಕೆಲಸ ಮುಗಿಸಿ ಎಂದು ಸಲಹೆ ನೀಡಿದರು.

ಈ ಪಾರ್ಕ್ ನಲ್ಲಿ ವಾಕಿಂಗ್ ಪಾಥ್, ಲೈಟ್ಸ್ ಹಾಗೂ ಯೋಗ ಕುಟೀರ ನಿರ್ಮಾಣ ಸೇರಿದಂತೆ ಇನ್ನಿತರೆ ಅಭಿವೃದ್ಧಿ ಕಾರ್ಯಗಳನ್ನು ಈ ಅನುದಾನದಲ್ಲಿ ಮಾಡಲಾಗುತ್ತಿದೆ. ಯೋಗ ಕುಟೀರ ನಿರ್ಮಾಣ ಮಾಡುವ ಮೂಲಕ ವಾಯು ವಿಹಾರಿಗಳು, ಪಾರ್ಕ್‌ಗೆ ಬರುವ ಜನರಿಗೆ ಖುಷಿ ಕೊಡಲಿದೆ ಎಂದು 33ನೇ ವಾರ್ಡಿನ ಸದಸ್ಯ ಕೆ. ಎಂ. ವೀರೇಶ್ ಪೈಲ್ವಾನ್ ಮಾಹಿತಿ ನೀಡಿದರು.

ಸರಸ್ವತಿ ನಗರದಲ್ಲಿನ ಈ ಪಾರ್ಕ್ ಅಭಿವೃದ್ಧಿಯಾಗಬೇಕೆಂಬ ಅಪೇಕ್ಷೆ ವಾರ್ಡ್ ನ ಜನರದ್ದಾಗಿತ್ತು. ಅದೇ ರೀತಿಯಲ್ಲಿ ಜನರ ಬೇಡಿಕೆ ಈಡೇರಿಸಲು ಶ್ರಮವಹಿಸಿದ್ದೆ. ಈಗ ಅನುದಾನ ಬಂದಿದ್ದು, ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಲು ವಿಶೇಷ ಕಾಳಜಿ ವಹಿಸುವುದಾಗಿ ತಿಳಿಸಿದರು.

ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷ ಕೆ.ಎಂ. ಸುರೇಶ್, ಹುಲ್ಮನಿ ಮಲ್ಲಿಕಾರ್ಜುನಪ್ಪ, ನಿಂಗಣ್ಣ, ಸುಭದ್ರ, ಸಿದ್ದೇಶ್, ಮುತ್ತು, ಪರಸಪ್ಪ ಮತ್ತಿತರರು ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.


**ಬೇಕಾಗಿದ್ದಾರೆ**
ಊಟ ಬಡಿಸುವವರು, ರೊಟ್ಟಿ, ಚಪಾತಿ, ಹೋಳಿಗೆ ಮಾಡುವ ಮಹಿಳೆಯರು ಬೇಕಾಗಿದ್ದಾರೆ.
ಸಂಪರ್ಕಿಸಿ
63635 43487

**ಮೊಬೈಲ್ ಕಳೆದಿದೆ**
ದಿನಾಂಕ : 5-02-23 ರ ಮಧ್ಯಾಹ್ನ 2.30 ರ ಸುಮಾರಿಗೆ ವಿನೋಬನಗರದ ಶ್ರೀ ಕೃಷ್ಣ ಕಲಾಮಂದಿರದ ಹತ್ತಿರ 9916242588 ನಂಬರಿನ ಮೊಬೈಲ್ ಕಳೆದಿದೆ, ಸಿಕ್ಕವರು ತಂದು ಕೊಟ್ಟಲ್ಲಿ ಸೂಕ್ತ ಬಹುಮಾನವನ್ನು ಕೊಡಲಾಗುವುದು. ಎಂ.ಕೆ. ಬಕ್ಕಪ್ಪ # 2803, 3ನೇ ಮೇನ್, 3ನೇ ಕ್ರಾಸ್, ಎಂ.ಸಿ.ಸಿ.ಬಿ ಬ್ಲಾಕ್ ದಾವಣಗೆರೆ.

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ ಸೈಟುಗಳು ಮಾರಾಟಕ್ಕಿವೆ.
30x55 South 40 ಅಡಿ ರೋಡ್‌ಗಿದೆ. 30x45, 30x45 West ಅಕ್ಕ-ಪಕ್ಕ, 30x45 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 35x60 ಉತ್ತರ-ಪೂರ್ವ ಕಾರ್ನರ್, ಯುರೋ ಸ್ಕೂಲ್ ಹತ್ತಿರ, ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ 1 ಹಂತದಲ್ಲಿ 30x52 ಪಶ್ಚಿಮ, 20x60 ಪೂರ್ವ ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 40x60 ಪಶ್ಚಿಮ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
30x40, 30x40 South ಅಕ್ಕ-ಪಕ್ಕ, 50x80 West, 40x60 West, 40x60 East, 40x60 South, Rate : 2000 ರಿಂದ 2500
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕಾರುಗಳು ಮಾರಾಟಕ್ಕಿವೆ**
SKODA RAPID 2015
FORD ECOSPORT 2018
HONDA JAZZ PETROL
TOYOTA INNOVA 2015 V
Daivik Iynahalli
99456 43223

**KHB ಸೈಟುಗಳು ಮಾರಾಟಕ್ಕೆ**
ಕರ್ನಾಟಕ ಹೌಸಿಂಗ್ ಬೋರ್ಡ್ (ತುಂಗಭದ್ರಾ ಬಡಾವಣೆ) ದಾವಣಗೆರೆಯಲ್ಲಿ 30X40 ಅಳತೆಯ ದಕ್ಷಿಣ ದಿಕ್ಕಿನ ಸೈಟುಗಳು ಫಲಾನುಭವಿಗಳಿಂದ ನೇರ ಮಾರಾಟ ಮಧ್ಯವರ್ತಿಗಳಿಗೆ ಅವಕಾಶವಿಲ್ಲ
63605 67975

**ಮನೆ ಬಾಡಿಗೆಗಿದೆ**
ಎರಡು ಬೆಡ್ ರೂಂ, ಮೊದಲನೇ ಮಹಡಿ ಶ್ರೀ ಗೀತಾಂಜಲಿ ನಿವಾಸ ಎಂ.ಸಿ.ಸಿ. 'ಬಿ' ಬ್ಲಾಕ್ 11ನೇ ಮೇನ್, 8ನೇ ಕ್ರಾಸ್, ಆಂಜನೇಯ ದೇವಸ್ಥಾನ ಹಿಂಭಾಗದ 3ನೇ ತಿರುವು
98806 47830, 63628 47140
ಸಮಯ : ಬೆ. 8 ರಿಂದ 12 ಸಂದರ್ಶನ

**PART TIME WORK**
ಮನೆಯಲ್ಲಿಯೇ ಕುಳಿತು ಬಿಡುವಿನ ವೇಳೆಯಲ್ಲಿ ಕೆಲಸ /Job.
ತಿಂಗಳಿಗೆ ಸಂಬಳ 12000 ರಿಂದ 18000 ರವರೆಗೂ ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ.)
87490 98879

**DULL IN MATHS**
Junior Abacus
1st std to 3rd std
Vedic Maths
4th std to 10th std
Bruit abacus and Vedic maths
Nijalingappa badavane
M : 97390 66956

**HOUSES FOR RENT AND LEASE**
3BHK, 2BHK, 1BHK, Single Rooms, Saraswathi Nagara, SS Layout, MCC 'B' Block, Anjaneya Badavane.
77955 06795

**IIT Foundation**
Maths
From 5th, 6th, 7th class
Bruit Academy
Nijalingappa Badavane
M: 97390 66956

**ಸೈಟುಗಳು ಮಾರಾಟಕ್ಕಿವೆ**
ಶನೇಶ್ವರ ದೇವಸ್ಥಾನ ಹಿಂಭಾಗ ಕಾಡಪ್ಪನವರ ಲೇಔಟ್‌ನಲ್ಲಿ 30x40, 30x40 East ಅಕ್ಕ-ಪಕ್ಕ, 60x40 East, 30x40 East, Rate : 1900/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಕ್ಲೀನರ್ ಮತ್ತು ಕೌಂಟರ್ ಕೆಲಸಕ್ಕೆ ಮಹಿಳೆಯರು ಮತ್ತು ಪುರುಷರು ಬೇಕಾಗಿದ್ದಾರೆ. ಸಂಪರ್ಕಿಸಿ.
81234 12341

**ಸೈಟ್‌ಗಳು ಮತ್ತು ಮನೆ ಮಾರಾಟಕ್ಕೆ ಇವೆ**
ಮಹಾಲಕ್ಷ್ಮಿ 40x30 ಪೂರ್ವ, SS "B" ಬ್ಲಾಕ್ 35x70 ಪೂರ್ವ, ವಿನಾಯಕ ಬಡಾವಣೆ 30x50 ದಕ್ಷಿಣ, ಗಡಿಚೌಡಮ್ಮ ದೇವಸ್ಥಾನ ಹತ್ತಿರ 30x50 ಪಶ್ಚಿಮ
ಏಜೆಂಟರು : ಎಸ್. ಯಲ್ಲೋಜಿರಾವ್
97418 11694

**ಅಕೌಂಟೆಂಟ್ ಬೇಕಾಗಿದ್ದಾರೆ**
ಟ್ಯಾಲಿ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ.
ಸಂಪರ್ಕಿಸಿ :
90366 11313, 96327 57065

**ಸೈಟು ಮಾರಾಟಕ್ಕೆ ಇದೆ**
ಹಳೆ ಬನಶಂಕರಿ ಬಡಾವಣೆಯಲ್ಲಿ NH ರಸ್ತೆ ಅಂಡರ್ ಪಾಸ್ ಗೆ ಹತ್ತಿರದಲ್ಲಿರುವ 30x50 ಅಡಿ ಅಳತೆಯ ಪಶ್ಚಿಮ ದಿಕ್ಕಿನ ಸೈಟು ಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
ಫೋ : 97390 04921

**ಮಾರಾಟಕ್ಕೆ**
* ಶಕ್ತಿನಗರ(ರಾಜೇಂದ್ರ ಬಡಾವಣೆ) ದಕ್ಷಿಣ ದಿಕ್ಕಿನ ಪೂರ್ವ ಬಾಗಿಲು,3 ಫ್ಲೋರ್ ಇರುವ ಮನೆ 20×30,
* LBK ಲೇಔಟ್ (ಯರಗುಂಟೆ ರೋಡ್) ಸೈಟುಗಳು 30×40,
* ಲಕ್ಷ್ಮಿ ಲೇಔಟ್( ಜಯನಗರ) ಸೈಟ್ (ಪೂರ್ವ)25×35
78996 36597, 99165 25828

**ನೇರ ಪರೀಕ್ಷೆಗಳು**
SSLC, PUC, BA B.Com, BBA, MBA (ALL) B.Tech, Diploma, ITI, NTC
ಶ್ರೀ ಗಂಗೋತ್ರಿ ಕರೆಸ್ಪಾಂಡೆನ್ಸ್
ಕಾಲೇಜ್ ಲಾಯರ್ ರೋಡ್, ದಾವಣಗೆರೆ.
86602 35013

**ಬೇಕಾಗಿದ್ದಾರೆ**
ಮನೆಯಲ್ಲಿ ಅಡುಗೆ, ತಿಂಡಿ, ಚಪಾತಿ, ಹೋಳಿಗೆ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಸಮಯ ಬೆಳಿಗ್ಗೆ 7 ರಿಂದ ಮಧ್ಯಾಹ್ನ 3 ಗಂಟೆವರೆಗೆ. ಶಕ್ತಿ ನಗರ, 2ನೇ ಮುಖ್ಯ ರಸ್ತೆ, ದಾವಣಗೆರೆ.
80885 91426

**ಬೇಕಾಗಿದ್ದಾರೆ**
Marketing Executives -2
ಮಾರಾಟದಲ್ಲಿ ಅನುಭವ ಇರುವವರಿಗೆ ಆದ್ಯತೆ. ವೇತನ : 8000/- + DA 10000/- ಗಳಿಸಬಹುದು.
ಸಂಪರ್ಕಿಸಿ: ಗಂಗೋತ್ರಿ ವೆಲ್ ನೆಸ್ ಸೆಂಟರ್. ಲಾಯರ್ ರೋಡ್ ದಾವಣಗೆರೆ
86602 35013

**ಬೇಕಾಗಿದ್ದಾರೆ**
Computer Shop ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. (SSLC/PUC ಪಾಸ್/ಫೇಲ್)
Niraj Infotech
8Th Main, 7th Cross, P.J. Extension, Davangere.
80503 68851

**ಸೈಟು ಮಾರಾಟಕ್ಕಿದೆ**
ಜೆ.ಹೆಚ್ ಪಟೇಲ್ ನಗರ, 40x60 ಉತ್ತರ ಮುಖವುಳ್ಳ ಸೈಟು ಮಾರಾಟಕ್ಕಿದೆ. KHB ಪಶ್ಚಿಮ 30x40-2. ಸಂಪರ್ಕಿಸಿ.
99727 31531

**ಪ್ರವೇಶ ಪ್ರಾರಂಭ**
2022-23
ಸಂಪರ್ಕಿಸಿ : ಸಿಂಚನ ಕಾಲೇಜ್
ರಾಮ್ & ಕೋ ಸರ್ಕಲ್ ದಾವಣಗೆರೆ.
ಫೋ. : 88614 45913

**ಬೇಕಾಗಿದ್ದಾರೆ**
ಮ್ಯಾಂಗೋ ಹೋಟೆಲ್ಸ್ ನವೀನ್ ನಲ್ಲಿ ಕೆಲಸ ಮಾಡಲು ಎಲೆಕ್ಟ್ರೀಷಿಯನ್ ಬೇಕಾಗಿದ್ದಾರೆ.
ಮೊ : 7618794615 / 19

**ಅಣಿಗೆರೆ ಕಟ್ಟೆ ಜ್ಯೋತಿಷ್ಯ ಫಲಂ**
ಶ್ರೀ ಚೌಡೇಶ್ವರಿ ದೇವಿ ಮತ್ತು ಭೂತರಾಯನ ಪ್ರಯೋಗದಿಂದ ಪೂಜೆ ಸಲ್ಲಿಸಲಾಗುತ್ತದೆ.
ಪ॥ ಎ.ಕೆ.ರಾವ್
ವಿ.ಸೂ. ಸ್ತ್ರೀ-ಪುರುಷ ವಶೀಕರಣ ಕೇವಲ 3 ದಿನಗಳಲ್ಲಿ ಪರಿಹಾರ ಶತಸಿದ್ಧ. ನಿಮ್ಮ ಯಾವುದೇ ಸಮಸ್ಯೆಯಿದ್ದರೂ ಫೋನಿನ ಮೂಲಕ ಸಂಪರ್ಕಿಸಿ .
99644 84508

**ಮನೆ ಲೀಸ್‌ಗೆ ಇದೆ**
ಸಿಂಗಲ್ BHK ಮನೆ 1st Floor ಲೀಸ್‌ಗೆ ಇದೆ. 1ನೇ ಮೇನ್ ಶಿಲ್ಪ ಮಾರ್ಬಲ್ ಎದುರು ತರಳಬಾಳು ಬಡಾವಣೆ, ದಾವಣಗೆರೆ.
98860 20266

**ಸೈಟು ಮಾರಾಟಕ್ಕೆ**
ಪೋದಾರ್ ಸ್ಕೂಲ್ ಹತ್ತಿರ (ಶಾಮನೂರು) 20x30 ಸೈಟು ಮಾರಾಟಕ್ಕಿದೆ.
ಸಂಪರ್ಕಿಸಿ.
95918 29780, 80731 78139

**1 BHK FOR RENT**
4th Cross, SS Layout, B Block, 890 Sqft., Commercial space for Rent. Shamanur Road
90082 20077

**ಬೇಕಾಗಿದ್ದಾರೆ**
SSLC/PUC ಆದ ಮಹಿಳೆಯರು ರ್‍ಯಾಕ್ ನಿಂದ ಸ್ಟಾಕ್ ತೆಗೆಯಲು ಮಹಿಳೆಯರು ಸಗಟು ಔಷಧಿ ಅಂಗಡಿಗೆ ಬೇಕಾಗಿದ್ದಾರೆ.
ಭೇಟಿ ಮಾಡುವ ಸಮಯ ಸಂಜೆ: 6.30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
# 579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ,ದಾವಣಗೆರೆ.

**ವಾಣಿಜ್ಯ ಕಟ್ಟಡ ಬಾಡಿಗೆಗೆ**
ಹದಡಿ ಮುಖ್ಯ ರಸ್ತೆಯಲ್ಲಿರುವ ಟಿವಿಎಸ್ ಷೋರೂಂ ಪಕ್ಕ ಹಾಗೂ ಉದಯ ಬಜಾರ್ ಎದುರಗಡೆ ಇರುವ ಸುಸಜ್ಜಿತ ವಾಣಿಜ್ಯ ಕಟ್ಟಡ ಬಾಡಿಗೆಗಿದೆ.
ನೆಲ ಮಹಡಿ 3800 ಅಡಿಗಳು, ಮೊದಲನೇ ಮಹಡಿ 1600 ಅಡಿಗಳು. ಸೆಲ್ಲರ್ 2400 ಅಡಿಗಳು
ಸಂಪರ್ಕಿಸಿ.
96205 95579

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡಿಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಸೈಟು ಮಾರಾಟಕ್ಕಿದೆ**
60x40 ಉತ್ತರ ದಿಕ್ಕಿಗೆ
ಸಂಪರ್ಕಿಸಿ.
96328 22322

**HOUSE FOR RENT**
2 BHK with Solar, Borewell Facility at Shanta Nivasa, 3364/20, 2nd Main, 3rd Cross, Vinayaka Badavane, 1st Floor, Davangere.
94498 68704

**ಸೈಟು ಮಾರಾಟಕ್ಕಿದೆ**
ಸಿದ್ದರಾಮೇಶ್ವರ ಬಡಾವಣೆ ನಿಟ್ಟುವಳ್ಳಿ ನ್ಯೂ ಎಕ್ಸ್‌ಟೆನ್ಷನ್ 39x61 ಉತ್ತರ ಅಭಿಮುಖ
ಸಂಪರ್ಕಿಸಿ :
94805 98917, 84948 20288

ಆದಿಕೇಶವ ಅಕಾಡೆಮಿ ಚಂದ್ರಗುಪ್ತ ಮೌರ್ಯ ಸಂಯುಕ್ತ ಪದವಿ ಪೂರ್ವ ಕಾಲೇಜು (ಪಿಯು) ಶ್ರೀ ಕಾಗಿನೆಲೆ ಮಹಾಸಂಸ್ಥಾನ, ಕನಕ ಗುರುಪೀಠ, ಶಾಖಾ ಮಠ, ಬೆಳ್ಳೂಡಿ-577601, ಹರಿಹರ (ತಾ.), ದಾವಣಗೆರೆ ಜಿಲ್ಲೆ.
**ಬೇಕಾಗಿದ್ದಾರೆ**
(ಕನಿಷ್ಠ 2 ವರ್ಷಗಳ ಅನುಭವ ಹೊಂದಿರಬೇಕು)
* Accountant/ front office assistant (female) qualification : B.COM/ BBA/ BBM & computer, Tally & Excel
* Data Entry operator (female) qualification : any degree with computer (photoshop, coral draw & page maker 7.2)
9008526469, 9008790989
Mail id : aadikeshavaacademydvg@gmail.com

**ಬೇಕಾಗಿದ್ದಾರೆ**
ಮಾಂಸಹಾರ ಹೋಟೆಲ್‌ನಲ್ಲಿ ಸ್ಟೀವರ್ಡ್ ಮತ್ತು ಕಂಪ್ಯೂಟರ್ ಬಿಲ್ಲಿಂಗ್ ಮಾಡಲು ಹುಡುಗರು ಬೇಕಾಗಿದ್ದಾರೆ.
80889 56656

**ಮಾರಾಟಕ್ಕಿದೆ**
ನಿಟ್ಟುವಳ್ಳಿ ದುರ್ಗಾಂಬಿಕ ದೇವಸ್ಥಾನದ ಹತ್ತಿರ ಡೋರ್ ನಂ ಸೈಟು 20x30 ಉತ್ತರ ಮುಖವಾಗಿರುವ ಸೈಟು ಮಾರಾಟಕ್ಕಿದೆ.
ಸಂಪರ್ಕಿಸಿ.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
81054-23876

# ಚರ್ಮ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಡರ್ಮಾ ಅಡ್ವಾನ್ಸ್ 2023



## ಎಸ್ಸೆಸ್ ವೈದ್ಯಕೀಯ ಮಹಾವಿದ್ಯಾಲಯ

ದಾವಣಗೆರೆ, ಫೆ. 5- ಎಸ್.ಎಸ್.ವೈದ್ಯಕೀಯ ಮಹಾ ವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದಲ್ಲಿ ಈಚೆಗೆ ಭಾರತೀಯ ಚರ್ಮ, ಕುಷ್ಟ ಹಾಗೂ ಲೈಂಗಿಕ ರೋಗಗಳ ತಜ್ಞರ ಸಂಘ, ಕರ್ನಾಟಕ ಶಾಖೆ ಇವರ ಸಹಯೋಗದೊಂದಿಗೆ ರಾಜ್ಯದ ಎಲ್ಲಾ ಅಂತಿಮ ವರ್ಷದ ಚರ್ಮ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಡರ್ಮಾ ಅಡ್ವಾನ್ಸ್ 2023 ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಎಸ್ಸೆಸ್ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲ ಡಾ. ಬಿ.ಎಸ್. ಪ್ರಸಾದ್, ವೈದ್ಯಕೀಯ ನಿರ್ದೇಶಕ ಡಾ. ಎ. ಅರುಣ್‌ಕುಮಾರ್, ಭಾರತೀಯ ಚರ್ಮರೋಗ ತಜ್ಞರ ಸಂಘ, ಕರ್ನಾಟಕ ಶಾಖೆಯ ಅಧ್ಯಕ್ಷ ಡಾ. ಪ್ರಕಾಶ್ ಕೋಲೊಳಗಿ ಮತ್ತು ವಿಭಾಗದ ಮುಖ್ಯಸ್ಥ ಡಾ. ಮಂಜುನಾಥ್ ಹುಲ್ಮನಿ ಹಾಗೂ ಡಾ. ಎ.ಎಸ್. ಸವಿತಾ, ಡಾ. ರವಿ ರಾಥೋಡ್, ಡಾ. ಸೂಗಾರೆಡ್ಡಿ, ಡಾ. ಬಿ.ಎಸ್. ಮಂಜುನಾಥಸ್ವಾಮಿ ಕಾರ್ಯಕ್ರಮ ಉದ್ಘಾಟಿಸಿದರು.

ಈ ಕಾರ್ಯಕ್ರಮದಲ್ಲಿ ರಾಜ್ಯದ ಎಲ್ಲಾ ವೈದ್ಯಕೀಯ ಕಾಲೇಜಿನ ಸುಮಾರು 175 ಚರ್ಮರೋಗ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗಳು ಭಾಗಹಿಸಿದ್ದರು. ವಿದ್ಯಾರ್ಥಿಗಳನ್ನು ಕುರಿತು ರಾಜ್ಯದ ಪ್ರಸಿದ್ದ ತಜ್ಞ ಡಾ. ಎಸ್. ರಘುನಾಥ, ಡಾ. ವಿಜಯ್ ಐತಲ್, ಡಾ.ಭಾವನಾ ದೋಶಿ, ಡಾ. ಎಸ್.ಬಿ. ಅಂಬರೀಶ್, ಡಾ.ಸತೀಶ್ ಪೈ, ಡಾ. ಚಿದಂಬರ ಮೂರ್ತಿ ಮತ್ತು ಡಾ. ಡಿ. ವೀರೇಶ್ ಹಾಗೂ ಡಾ.ರೂಪ ಎಂ.ಸಿ ಚರ್ಮರೋಗಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಮಾಹಿತಿ ಹಾಗೂ ಅನುಭವಗಳನ್ನು ಪ್ರಸ್ತಾಪಿಸಿದರು.

# ನಂದಿಗಾವಿ ಶ್ರೀನಿವಾಸ ಯುವ ಬ್ರಿಗೇಡ್‌ನಿಂದ ಮಲೇಬೆನ್ನೂರು ಶಾಲೆಗಳಿಗೆ ಸುಣ್ಣ-ಬಣ್ಣಕ್ಕೆ ಚಾಲನೆ



ಮಲೇಬೆನ್ನೂರು, ಫೆ. 5 - ಸಮಾಜ ಸೇವಕ ಹಾಗೂ ಕಾಂಗ್ರೆಸ್ ಯುವ ಮುಖಂಡ ನಂದಿಗಾವಿ ಶ್ರೀನಿವಾಸ ಅವರು ನಮ್ಮ 44ನೇ ಹುಟ್ಟುಹಬ್ಬದ ಸವಿನೆನಪಿಗಾಗಿ 'ಜ್ಞಾನ ಜ್ಯೋತಿ' ಕಾರ್ಯಕ್ರಮದಡಿ ಹರಿಹರ ತಾಲ್ಲೂಕಿನ ವಿವಿಧ ಶಾಲೆಗಳ ಕೊಠಡಿಗಳಿಗೆ ಸುಣ್ಣ-ಬಣ್ಣ ಮಾಡಿಸಲು ಮುಂದಾಗಿದ್ದಾರೆ. ಈಗಾಗಲೇ 44 ಶಾಲೆಗಳ ವಿದ್ಯಾರ್ಥಿಗಳಿಗೆ ಉಚಿತವಾಗಿ ನೋಟ್ ಬುಕ್ ಮತ್ತು ಸಿಹಿ ವಿತರಿಸಿರುವ ನಂದಿಗಾವಿ ಶ್ರೀನಿವಾಸ ಯುವ ಬ್ರಿಗೇಡ್ ಪದಾಧಿಕಾರಿಗಳು, ನಂತರ ಮಲೇಬೆನ್ನೂರಿನ 3 ಶಾಲೆಗಳಿಗೆ ಡೆಸ್ಕ್‌ಗಳನ್ನು ನೀಡಿದ್ದಾರೆ.

ಬೇರೆ ಶಾಲೆಗಳಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿದ್ದಾರೆ. ಯಲವಟ್ಟಿ ಗ್ರಾಮದ ಸ.ಹಿ.ಪ್ರಾ. ಶಾಲೆಯ ಕೊಠಡಿಗೆ ಈಗಾಗಲೇ ಸುಣ-ಬಣ್ಣ ಮಾಡಿಸಿದ್ದು, ಗುರುವಾರ ಕೊಕ್ಕನೂರು ಗ್ರಾಮದ ಶ್ರೀ ಬೀರಲಿಂಗೇಶ್ವರ ಹಿರಿಯ ಪ್ರಾಥಮಿಕ ಶಾಲೆಯ 2 ಕೊಠಡಿಗಳಿಗೆ ಸುಣ್ಣ-ಬಣ್ಣ ಮಾಡಿಸುವ ಕೆಲಸಕ್ಕೆ ಚಾಲನೆ ನೀಡಿದರು. ವಿದ್ಯಾಸಂಸ್ಥೆ ಗೌರವಾಧ್ಯಕ್ಷ ರಾಮಚಂದ್ರಪ್ಪ, ಅಧ್ಯಕ್ಷ ಬಸವರಾಜಪ್ಪ , ಸದಸ್ಯ ರೇವಣಸಿದ್ದಪ್ಪ, ಮುಖ್ಯ ಶಿಕ್ಷಕ ನಾಗೇಂದ್ರಪ್ಪ, ಯುವ ಬ್ರಿಗೇಡ್ ಹರಪನಹಳ್ಳಿ ಮಂಜು, ಸಂತೋಷ್, ರೇವಣಸಿದ್ದಪ್ಪ, ಪ್ರಭಾಕ್ರರ್, ಹನುಮಂತನಾಯ್ಕ್ ಈ ವೇಳೆ ಹಾಜರಿದ್ದರು.

# ಶ್ರೀ ಸಿದ್ದಲಿಂಗ ಶಿವಾಚಾರ್ಯ ಭಗವತ್ಪಾದರ ಸ್ಮರಣೋತ್ಸವ ಸಂಪನ್ನ



## ಪುರಾಣ ಪ್ರವಚನ ಕಾರ್ಯಕ್ರಮದ ಅಂತಿಮ ದಿನ ಶ್ರೀ ಸದ್ಧರ್ಮ ಸಭೆ ಪ್ರವಚನ

ದಾವಣಗೆರೆ, ಫೆ. 5 - ನಗರದ ಹೊಳೆಹೊನ್ನೂರು ತೋಟದ ಶ್ರೀ ಉಮಾಮಹೇಶ್ವರ ದೇವಸ್ಥಾನದಲ್ಲಿ ಶ್ರೀ ಸಿದ್ದಲಿಂಗ ಶಿವಾಚಾರ್ಯ ಭಗವತ್ಪಾದರ 87ನೇ ವರ್ಷದ ಪುಣ್ಯ ಸ್ಮರಣೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಪುರಾಣ ಪ್ರವಚನ ಕಾರ್ಯಕ್ರಮದ ಅಂತಿಮ ದಿನವಾದ ಇಂದು ಶ್ರೀ ಸದ್ಧರ್ಮ ಸಭೆ ಪ್ರವಚನದ ಮುಖೇನ ಶ್ರೀ ಸಿದ್ದಲಿಂಗ ಶಿವಾಚಾರ್ಯ ಭಗವತ್ಪಾದರ ಪುಣ್ಯ ಸ್ಮರಣೋತ್ಸವ ಸಂಪನ್ನಗೊಂಡಿತು.

ಶ್ರೀ ಸಿದ್ದಲಿಂಗ ರಾಜದೇಶೀ ಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಶುಭ ಆಶೀರ್ವಾದದಿಂದ ಹರಗುರುಚರ ಮೂರ್ತಿಗಳ ಸಾನ್ನಿಧ್ಯದಲ್ಲಿ ಇದೇ ಜನವರಿ 11 ರಿಂದ ಐದನೇ ತಾರೀಖಿನವರೆಗೂ 25 ದಿನಗಳ ಪರ್ಯಂತ ಪುರಾಣ ನೆರವೇರಿತು. ಕೊನೆಯ ದಿನವಾದ ಇಂದು ಶ್ರೀ ಉಮಾ ಮಹೇಶ್ವರ ಸ್ವಾಮಿಗೆ ರುದ್ರಾಭಿಷೇಕ, ವಿಶೇಷ ಹೋಮ ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ಯಶಸ್ವಿಯಾಗಿ ನೆರವೇರಿದವು.

ಇಂದಿನ ಸದ್ಧರ್ಮ ಸಭೆ ಪ್ರವಚನದಲ್ಲಿ ರೇವಣಸಿದ್ಧ ಶ್ರೀಗಳು, ರಾಮಘಟ್ಟದ ಶ್ರೀಗಳು, ಆವರಗೊಳ್ಳ ಪುರವರ್ಗ ಹಿರೇಮಠದ ಓಂಕಾರ ಶಿವಾಚಾರ್ಯ ಶ್ರೀಗಳು ಆಗಮಿಸಿ ಪ್ರವಚನದ ಮುಖೇನ ಆಶೀರ್ವಚನ ನೀಡಿದರಲ್ಲದೆ, ಭಕ್ತರಿಗೆ ಆಶೀರ್ವದಿಸಿದರು.

ಸುಲೋಚನಾ ಶಿವಾನಂದಯ್ಯ ರಾಮಗಿರಿ ಮಠ ಅವರು ಉಪನ್ಯಾಸ ನೀಡಿದರು. ಈ ಪೂಜಾ ಕಾರ್ಯಕ್ರಮ ಹಾಗೂ ಪ್ರವಚನದಲ್ಲಿ ಭಾಗವಹಿಸಿದ ಭಕ್ತರು ಶ್ರೀ ಸಿದ್ದಲಿಂಗ ಶಿವಾಚಾರ್ಯ ಭಗವತ್ಪಾದರ ಮಹಿಮೆ, ಜೀವನ ಸಾಧನೆ ಅರಿತು ಉಮಾಮಹೇಶ್ವರ ಸ್ವಾಮಿಯ ಕೃಪೆಗೆ ಪಾತ್ರರಾದರು. ಇದೇ ವೇಳೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಈ ಸಂದರ್ಭದಲ್ಲಿ ಕಾರ್ಯಕ್ರಮದ ರೂವಾರಿಗಳಾದ ಉಮಾ ಮಹೇಶ್ವರ ದೇವಸ್ಥಾನದ ಶ್ರೀ ಉದಯಶಂಕರ ಶಾಸ್ತ್ರಿಗಳು, ನಗರ ಪಾಲಿಕೆ ಮಾಜಿ ಸದಸ್ಯ ದಿನೇಶ್ ಕೆ. ಶೆಟ್ಟಿ, ಪಾಲಿಕೆ ಸದಸ್ಯ ಎ. ನಾಗರಾಜ್, ಎ.ಎಸ್. ಮೃತ್ಯುಂಜಯ, ಕೆ.ಎಂ. ಶಿವಮೂರ್ತಯ್ಯ,ಎ.ಎಸ್.ಜಯರಾಜ್, ಯು.ಎಂ. ರಾಜಯ್ಯ, ಎಚ್.ಬಿ. ವೀರಭದ್ರಪ್ಪ, ಸಿ.ಎಂ. ವೀರೇಶ್ ಸೇರಿದಂತೆ, ಇತರರು ಇದ್ದರು.

# ತೆಂಗಿನ ಬೆಳೆಯ ಉತ್ಪಾದನೆ ಕುಂಠಿತ ಮಾಡುತ್ತಿರುವ ಕಪ್ಪು ತಲೆ ಹುಳು



ದಾವಣಗೆರೆ,ಫೆ.5- ತೆಂಗಿನಲ್ಲಿ ಕಪ್ಪು ತಲೆ ಹುಳುವಿನ ಹಾನಿಯಿಂದ ತೆಂಗಿನ ಬೆಳೆಯ ಉತ್ಪಾದನೆ ಕುಂಠಿತವಾಗುವ ಎಲ್ಲಾ ಲಕ್ಷಣಗಳಿವೆ ಎಂದು ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ ಅಭಿಪ್ರಾಯ ಪಟ್ಟರು.

ತಾಲ್ಲೂಕಿನ ಮುದಹದಡಿ, ಮಿಟ್ಲಕಟ್ಟೆ, ಬಟ್ಲಕಟ್ಟೆ, ನಾಗನೂರು ಸುತ್ತ ಮುತ್ತ ತೆಂಗಿನ ತೋಟಗಳಿಗೆ ತೋಟಗಾರಿಕೆ ಇಲಾಖೆ ಹಾಗೂ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ವೈಜ್ಞಾನಿಕ ಕ್ಷೇತ್ರ ಭೇಟಿ ನೀಡಿ ಮಾಹಿತಿ ನೀಡಲಾಯಿತು.

ಮೇಲಿನ ಗ್ರಾಮಗಳ ತೆಂಗಿನ ತೋಟಗಳಲ್ಲಿ ನಿರೋಧಕ ಶಕ್ತಿ ಕುಂದಿರುವುದರ ಪರಿಣಾಮ, ತೋಟಗಳಲ್ಲಿ ಕಪ್ಪು ತಲೆ ಹುಳದ ಬಾಧೆ ತೀವ್ರವಾಗಿದೆ, ಈ ರೀತಿ ಎಲೆಯ ಕೆಳಭಾಗದಲ್ಲಿ ಹಸಿರು ಭಾಗವನ್ನು ಕೆರೆದು ತಿನ್ನುವುದು ನಂತರ ಗರಿಗಳು ಸುಟ್ಟ ರೀತಿ ಭಾವಿಸುವುದು ಈ ಹಾನಿ ಲಕ್ಷಣಗಳಾಗಿವೆ, ಇದರ ಬಾಧೆ ಬೇಸಿಗೆ ತಿಂಗಳುಗಳಲ್ಲಿ ಹೆಚ್ಚುವ ಸಂಭವವಿದ್ದು, ರೈತರು ಸೂಕ್ತ ಹತೋಟಿ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯತೆಯಿದೆ ಎಂದು ತಿಳಿಸಿದರು.

ಇದರ ನಿಯಂತ್ರಣಕ್ಕೆ ತೀವ್ರತೆ ಮೊದಲ ಹಂತದಲ್ಲಿದ್ದಾಗ ಹೊರವಲಯದ ಮರಗಳಲ್ಲಿ ಹಾನಿಯಾದ ಗರಿಗಳನ್ನು ಕತ್ತರಿಸಿ ನಾಶ ಮಾಡಬೇಕು, ತೋಟದಲ್ಲಿ ಬಿದ್ದ ಗರಿಗಳು, ಕಳೆಗಳನ್ನು ತೆಗದುಹಾಕಿ ಸ್ವಚ್ಛಗೊಳಿಸಬೇಕು. ಕಪ್ಪು ತಲೆ ಹುಳು ಮರಿ ಹುಳುವಿನ ಹಂತದಲ್ಲಿದ್ದಾಗ ತೋಟಗಾರಿಕೆ ಇಲಾಖೆಯಲ್ಲಿ ದೊರೆಯುವ ಪರೋಪಜೀವಿ ಗೋನಿಯೋಜಸ್ ನೆಫೆಂಡಿಡಿಸ್ ಅನ್ನು ಪ್ರತಿ ಪ್ರತಿ ಮರಕ್ಕೆ 15 ರಿಂದ 20 ರಂತೆ ಪ್ರತಿ 15 ದಿವಸಗಳಿಗೊಮ್ಮೆ ಕನಿಷ್ಠ ನಾಲ್ಕು ಬಾರಿ ಬಿಡಬೇಕು, ಸಿಂಪರಣೆ ಮಾಡುವುದಾದರೆ ಬೈಫೆನ್‌ಥ್ರಿನ್ 1.5 ಮೀ ಲಿ ಅಥವಾ ಅಜಾಡಿರೆಕ್ಟಿನ್ 5% ಅನ್ನು 2 ಮೀ ಲಿ ಪ್ರತಿ ಲೀಟರ್ ನೀರಿನಲ್ಲಿ ಬೆರಸಿ ಎಲೆಗಳ ಕೆಳಭಾಗ ಸಿಂಪರಣೆ ಮಾಡಬೇಕು ಎಂದು ವಿವರಿಸಿದರು.

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಶ್ರೀಮತಿ ರೇಷ್ಮಾ ಪರ್ವೀನ್ ಮತ್ತು ಸಹಾಯಕ ತೋಟಗಾರಿಕೆ ಅಧಿಕಾರಿ ಪವನ್ ಕುಮಾರ್ ರೈತರೊಂದಿಗೆ ಸಂವಾದ ನಡೆಸಿ, ಎಲ್ಲಾ ರೈತರು ಸಹಕಾರದಿಂದ ಮೇಲಿನ ಹತೋಟಿ ಕ್ರಮಗಳನ್ನು ಅನುಸರಿಸಬೇಕು ಎಂದು ತಿಳಿಸಿದರು.

# ಸದೃಢ ಆರೋಗ್ಯಕ್ಕಾಗಿ ಕ್ರೀಡೆ ಮುಖ್ಯ



## ಪ್ರೊ. ಸಿ.ಹೆಚ್. ಮುರುಗೇಂದ್ರಪ್ಪ

ದಾವಣಗೆರೆ, ಫೆ. 5 - ಇತ್ತೀಚಿನ ದಿನಗಳಲ್ಲಿ ವ್ಯಕ್ತಿಯು ದೈಹಿಕವಾಗಿ ಸದೃಢವಾಗಿರಬೇಕಾದರೆ ಕ್ರೀಡೆಯಲ್ಲಿ ತೊಡಗಿಸಿಕೊಂಡಾಗ ಮಾತ್ರ ಸಾಧ್ಯ. ಕ್ರೀಡಾಪಟುಗಳಿಗೆ ಪ್ರೋಟಿನ್‌ಯುಕ್ತ ಆಹಾರಗಳನ್ನು ಉಪಯೋಗಿಸಿದಾಗ ಸದೃಢರಾಗುತ್ತಾರೆ. ಹಾಗಾಗಿ ಪ್ರತಿಯೊಬ್ಬ ವ್ಯಕ್ತಿಯು ಸಹ ಕ್ರೀಡೆಯಲ್ಲಿ ತೊಡಗಿದಾಗ ತನ್ನದೇ ಆದ ಪ್ರತಿಭೆಯ ಮೂಲಕ ಜಗತ್ತಿಗೆ ಮಾದರಿಯಾಗಲು ಸಾಧ್ಯ ಎಂದು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ಅಧ್ಯಾಪಕರ ಸಂಘಗಳ ಒಕ್ಕೂಟದ ಮಾಜಿ ಅಧ್ಯಕ್ಷ ಪ್ರೊ. ಸಿ.ಹೆಚ್. ಮುರುಗೇಂದ್ರಪ್ಪ ತಿಳಿಸಿದರು.

ನಗರದ ಎ.ಆರ್.ಜಿ. ಕಲಾ ಮತ್ತು ವಾಣಿಜ್ಯ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರ ಹಾಗೂ ದಾವಣಗೆರೆ ವಿಶ್ವವಿದ್ಯಾನಿಲಯ ಕ್ರೀಡಾ ವಿಭಾಗ, ದಾವಣಗೆರೆ ವಿಶ್ವವಿದ್ಯಾಲಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘ ಹಮ್ಮಿಕೊಂಡಿದ್ದ ಭಾರ ಎತ್ತುವ ಮತ್ತು ದೇಹ ದಾರ್ಢ್ಯ ಸ್ಪರ್ಧೆ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ಜಿ.ಬಿ.ಬೋರಯ್ಯ ಮಾತನಾಡಿ, ಆರೋಗ್ಯವಾದ ಶರೀರವಿದ್ದರೆ ಉತ್ತಮ ಆಲೋಚನೆ ಮಾಡಲು ಸಾಧ್ಯ. ಜೀವನದಲ್ಲಿ ಕ್ರೀಡೆಯಲ್ಲಿ ತೊಡಗಿಸಿಕೊಳ್ಳಿ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕ್ರೀಡಾ ವಿಭಾಗದ ನಿರ್ದೇಶಕ ಡಾ. ಕೆ. ವೆಂಕಟೇಶ, ವೇಟ್ ಲಿಫ್ಟಿಂಗ್ ಅಸೋಸಿಯೇಷನ್‌ನ ಕಾರ್ಯದರ್ಶಿ ಹೆಚ್. ಬಸವರಾಜು ಹಾಗು ಕೆ. ಕುಮಾರ್, ಅಂತರರಾಷ್ಟ್ರೀಯ ಕ್ರೀಡಾ ಪಟು ಮಂಜು ಮೊಗವೀರ, ಎನ್. ಡಿ. ಕುಮಾರ, ಕೆ. ದುಗ್ಗೇಶಪ್ಪ, ಕ್ರೀಡಾ ವಿಭಾಗದ ಗಣೇಶ ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಕೆ. ಬೊಮ್ಮಣ್ಣ ಮತ್ತು ಡಾ. ಜೆ.ಕೆ. ಮಲ್ಲಿಕಾರ್ಜುನಪ್ಪ, ಪ್ರೊ ಜೆ.ಅನಿತಾ ಕುಮಾರಿ, ಪ್ರೊ. ಆನಂದ್, ಡಾ.ಚಮನ್‌ಸಾಬ್ ಉಪಸ್ಥಿತರಿದ್ದರು. ಪ್ರೊ. ರಮೇಶ್ ಪೂಜಾರ್ ಸ್ವಾಗತಿಸಿ, ಡಾ. ಹೆಚ್.ಆರ್. ತಿಪ್ಪೇಸ್ವಾಮಿ ನಿರೂಪಿಸಿದರು.

# ರಾಣೇಬೆನ್ನೂರಿನಲ್ಲಿ ಇಂದು ಮೌನ ಪ್ರತಿಭಟನೆ

ನಗರದ ಮಿನಿ ವಿಧಾನಸೌಧದ ಮುಂದೆ ಹುತಾತ್ಮ ಸ್ವಾತಂತ್ರ್ಯ ಸೇನಾನಿ ಮೆಣಸಿನಹಾಳ ತಿಮ್ಮನಗೌಡರ ಪುತ್ಥಳಿಯ ಪಕ್ಕದಲ್ಲಿ ನಗರಸಭೆ ನಿರ್ಮಿಸುತ್ತಿರುವ ಸಾರ್ವಜನಿಕ ಶೌಚಾಲಯದ ಕಾಮಗಾರಿಯನ್ನು ಈ ಕೂಡಲೇ ಶಾಶ್ವತವಾಗಿ ಬಂದ್ ಮಾಡಬೇಕೆಂದು ಒತ್ತಾಯಿಸಿ, ಇಂದು ಬೆಳಗ್ಗೆ 10.30 ಕ್ಕೆ ಮೌನ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ.

ನಗರದ ಕೆ.ಇ.ಬಿ. ವಿನಾಯಕ ದೇವಸ್ಥಾನದಿಂದ ರೈತ ಪರ, ಕನ್ನಡ ಪರ, ಮೆಣಸಿನಹಾಳ ತಿಮ್ಮನಗೌಡರ ಅಭಿಮಾನಿಗಳ ಬಳಗದಿಂದ ಮೌನ ಪ್ರತಿಭಟನೆ ನಡೆಸಿ, ತಹಶೀಲ್ದಾರ್ ಕಛೇರಿಗೆ ತೆರಳಿ ಬೀಗ ಜಡಿದು ಬಲತ್ಕಾರದಿಂದ ನಿರ್ಮಿಸುತ್ತಿರುವ ಶೌಚಾಲಯವನ್ನು ನೆಲಸಮಗೊಳಿಸಲಾಗುವುದೆಂದು ರೈತ ಮುಖಂಡ, ಪ್ರಗತಿಪರ ಚಿಂತಕ ರವೀಂದ್ರಗೌಡ ಎಫ್. ಪಾಟೀಲ ಎಚ್ಚರಿಕೆ ನೀಡಿದ್ದಾರೆ.

# ಇಂದು ಓರಿಗಾಮಿ ಕೌಶಲ್ಯ ಕಾರ್ಯಾಗಾರ ಸಮಾರೋಪ

ನಗರದ ಸೇಂಟ್ ಜಾನ್ಸ್ ಆಂಗ್ಲ ಮಾಧ್ಯಮ ಕಾನ್ವೆಂಟ್ ಪ್ರೌಢಶಾಲೆಯಲ್ಲಿ ನಡೆಯುತ್ತಿರುವ ಗಣಿತ ಶಿಕ್ಷಕರಿಗಾಗಿ ಓರಿಗಾಮಿ ಕೌಶಲ್ಯ ಕಾರ್ಯಾಗಾರದ ಸಮಾರೋಪ ಸಮಾರಂಭವು ಇಂದು ಸಂಜೆ 3.30 ಕ್ಕೆ ನಡೆಯಲಿದೆ.

ಅಧ್ಯಕ್ಷತೆಯನ್ನು ಟಿ.ಎಂ. ಉಮಾಪತಯ್ಯ ವಹಿಸುವರು. ಶ್ರೀಮತಿ ಆರ್.ಬಿ. ವಸಂತಕುಮಾರಿ ಅಭಿನಂದನಾ ಪತ್ರ ವಿತರಿಸುವರು.

ಮುಖ್ಯ ಅತಿಥಿಗಳಾಗಿ ಎನ್.ಎಂ. ಲೋಕೇಶ್, ಲಕ್ಷ್ಮಣ್ ನಾಯ್ಕ್, ಡಾ. ಎಂ.ಆರ್. ಜಗದೀಶ್, ಅಂಗಡಿ ಸಂಗಪ್ಪ ಆಗಮಿಸುವರು.

# ಚಿಗಟೇರಿ ಜಿಲ್ಲಾಸ್ಪತ್ರೆ ಆರೋಗ್ಯ ರಕ್ಷಾ ಸಮಿತಿಗೆ ಎ. ಪ್ರಕಾಶ್ ನೇಮಕ



ದಾವಣಗೆರೆ, ಫೆ. 5 - ಇಲ್ಲಿನ ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿ/ ಸಲಹಾ ಸಮಿತಿಗೆ ಅಧಿಕಾರೇತರ ಸದಸ್ಯರನ್ನಾಗಿ ತಾಲ್ಲೂಕಿನ ಹೊಸ ಕುಂದವಾಡದ ಎ. ಪ್ರಕಾಶ್ ಅವರನ್ನು ನೇಮಕ ಮಾಡಲಾಗಿದೆ.

ಸರ್ಕಾರದ ಆದೇಶದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿಗಳ ಸೂಚನೆಯಂತೆ ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಅಧೀಕ್ಷಕರೂ, ಆರೋಗ್ಯ ರಕ್ಷಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಸೇರಿದಂತೆ ಒಟ್ಟು ಎಂಟು ಜನರನ್ನು ಈ ಸಮಿತಿಯ ಅಧಿಕಾರೇತರ ಸದಸ್ಯರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

# ರಾಷ್ಟ್ರಪತಿ ಪದಕಕ್ಕೆ ಸಂಚಾರಿ ಪೊಲೀಸ್ ಠಾಣೆಯ ಸಿಪಿಐ ಅನಿಲ್ ಆಯ್ಕೆ



ದಾವಣಗೆರೆ, ಫೆ. 5 - ದೇಶದ ಭದ್ರತೆ, ಸಾರ್ವಭೌಮತೆ, ಏಕತೆ ಮತ್ತು ಸಮಗ್ರತೆಯನ್ನು ಕಾಪಾಡುವಲ್ಲಿ ನಿರಂತರವಾಗಿ ತೊಡಗಿರುವ ಗೃಹರಕ್ಷಕ ದಳ, ನಾಗರಿಕ ರಕ್ಷಣೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಮತ್ತು ಎಸ್‌ಡಿಆರ್‌ಎಫ್ ಇಲಾಖೆಯ ಯೋಧರು ಮತ್ತು ಅಧಿಕಾರಿಗಳ ಸಾಧನೆಗೆ ನೀಡುವ ಅತ್ಯುತ್ತಮ ಪದಕವೇ ರಾಷ್ಟ್ರಪತಿ ಪದಕ. ಇಂತಹ ವಿಶೇಷ ಪದಕಕ್ಕೆ ದಾವಣಗೆರೆಯ ಸಂಚಾರಿ ಪೊಲೀಸ್ ಠಾಣೆಯ ಸಿಪಿಐ ಆರ್.ಪಿ. ಅನಿಲ್ ಆಯ್ಕೆಯಾಗಿದ್ದಾರೆ.

ಇವರು ಹಿರಿಯ ಪರ್ತಕರ್ತೆ ಗೌರಿ ಲಂಕೇಶ್ ಹಾಗೂ ಕರ್ನಾಟಕದ ಬಹು ಪ್ರಸಿದ್ಧ ವಿದ್ವಾಂಸರಲ್ಲಿ ಒಬ್ಬರಾದ ಎಂ.ಎಂ.ಕಲ್ಬುರ್ಗಿ ಹತ್ಯೆ ಪ್ರಕರಣದ ತನಿಖಾ ತಂಡದಲ್ಲಿದ್ದು, ಅತ್ಯುತ್ತಮ ಕಾರ್ಯದಕ್ಷತೆ ಹೊಂದಿದ್ದರು.

ಮೆರಿಟೋರಿಯಸ್ ಮೆಡಲ್ (ರಾಷ್ಟ್ರಪತಿ ಪದಕ) ಅನ್ನು 18 ವರ್ಷ ಸೇವೆ ಪೂರೈಸಿದ ಬಳಿಕ ಅಧಿಕಾರಿಗಳಿಗೆ ಕೊಡಮಾಡಲಾಗುತ್ತದೆ. ಸರ್ಕಾರದ ಆಯಾ ಇಲಾಖೆಯ ಹಿರಿಯ ಹಾಗೂ ಮೇಲಧಿಕಾರಿಗಳು, ಒಬ್ಬ ಅಧಿಕಾರಿಯ ಸಾಧನೆಯ ಬಗ್ಗೆ ತಯಾರು ಮಾಡುವ ವರದಿಯ ಆಧಾರದಲ್ಲಿ ಈ ಮೆಡಲ್ ಕೊಡುವುದು ಪದ್ಧತಿ. ಇದೀಗ ತನಿಖೆಯಲ್ಲಿ ತೋರಿಸಿದ ಕಾರ್ಯದಕ್ಷತೆಗೆ ಅನಿಲ್ ಅವರನ್ನು ಪ್ರತಿಷ್ಠಿತ ಪದಕ ಹುಡುಕಿಕೊಂಡು ಬಂದಿದೆ. ಸಿಪಿಐ ಅನಿಲ್ ಅವರು ಗೌರಿ ಲಂಕೇಶ್ ಹತ್ಯೆ ಪ್ರಕರಣ, ಎಂ.ಎಂ.ಕಲ್ಬುರ್ಗಿ ಹತ್ಯೆ ಪ್ರಕರಣ ಸೇರಿದಂತೆ ತುಮಕೂರು ಜಿಲ್ಲೆಯ ಪಾವಗಡದಲ್ಲಿ ಪೊಲೀಸ್ ಅಧಿಕಾರಿಯಾಗಿದ್ದಾಗ 17 ಕೆಜಿ ಬಂಗಾರ ದರೋಡೆ ಪ್ರಕರಣದ ತನಿಖಾ ತಂಡದ ಭಾಗವಾಗಿದ್ದರು. ಪ್ರಮುಖ ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೆ ಮಾಡುವಲ್ಲಿ ನಿರ್ಣಾಯಕವಾಗಿ ಕಾರ್ಯ ನಿರ್ವಹಿಸಿದ್ದರು. ಇದಲ್ಲದೆ ಪಾವಗಡದ ಶನಿಮಹಾತ್ಮ ದೇವಸ್ಥಾನದಲ್ಲಿದ್ದ ವ್ಯಕ್ತಿಯ ಆಭರಣಗಳನ್ನು ಕಳ್ಳತನ ಮಾಡಿದ್ದ ಆರೋಪಿಯನ್ನು ಮೂರೇ ಗಂಟೆಯಲ್ಲಿ ಹಿಡಿದಿದ್ದರು. ಬೆಂಗಳೂರಿನ ಶ್ರೀರಾಮಪುರದಲ್ಲಿ ಕಾರ್ಪೊರೇಟ್ ಕಿಡ್ನ್ಯಾಪ್ ಪ್ರಕರಣವನ್ನು ಬಗೆಹರಿಸಿದ್ದರು.

ಸಿಪಿಐ ಅನಿಲ್ ಪ್ರತಿಕ್ರಿಯಿಸಿ, ನನ್ನ ಸೇವೆಯನ್ನು ಮೇಲಾಧಿಕಾರಿಗಳು ಪರಿಗಣಿಸಿ 18 ವರ್ಷದ ಬಳಿಕ ಈ ಮೆರಿಟೋರಿಯಸ್ ಪದಕ ದೊರಕುವಂತೆ ಮಾಡಿದ್ದಾರೆ. ಮೇಲಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಆಗಸ್ಟ್ ಇಲ್ಲವೇ ನವೆಂಬರ್‌ನಲ್ಲಿ ಮೆಡಲ್ ನೀಡುತ್ತಾರೆ. ಹೆಮ್ಮೆ ಅನ್ನಿಸುತ್ತಿದೆ ಎಂದರು.

# ಬಿಜೆಪಿ ಬಿಡಲ್ಲ, ಕಾಂಗ್ರೆಸ್ ಸೇರಲ್ಲ : ಪೂಜಾರ್ ಸ್ಪಷ್ಟನೆ



ರಾಣೇಬೆನ್ನೂರು, ಫೆ. 5- ನಾನು ಸೇರಿದಂತೆ ಹಾವೇರಿ ಜಿಲ್ಲೆಯ ಮೂವರು ಶಾಸಕರು ಬಿಜೆಪಿ ಬಿಟ್ಟು ಕಾಂಗ್ರೆಸ್ ಸೇರಲಿದ್ದಾರೆ ಎಂದು ಇಂದು ಮಾಧ್ಯಮದಲ್ಲಿ ಪ್ರಸಾರವಾದ ಸುದ್ದಿ ಸಂಪೂರ್ಣ ಸುಳ್ಳು. ನಾನು ಬಿಜೆಪಿ ಬಿಡಲ್ಲ, ಕಾಂಗ್ರೆಸ್ ಸೇರಲ್ಲ ಎಂದು ರಾಣೇಬೆನ್ನೂರು ಶಾಸಕ ಅರುಣಕುಮಾರ ಪೂಜಾರ ಅವರು ಇಂದು ತಮ್ಮನಿವಾಸದಲ್ಲಿತುರ್ತಾಗಿಕರೆದಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು.

ನಮ್ಮ ತಂದೆ ಮಂಡಲ ಪಂಚಾಯ್ತಿಯಲ್ಲಿ ಜನತಾಪಕ್ಷ ಬೆಂಬಲಿತ ಸದಸ್ಯರಾಗಿ ಆಯ್ಕೆಯಾಗಿದ್ದರು. ನನ್ನ ಶ್ರೀಮತಿ ಮಂಗಳಗೌರಿ ಪೂಜಾರ ಬಿಜೆಪಿ ಬೆಂಬಲಿತರಾಗಿ ಜಿ.ಪಂ. ಸದಸ್ಯರಾಗಿ ಆಯ್ಕೆಯಾಗಿದ್ದರು. ನಾನು 2004 ರಲ್ಲಿ ರಾಜಕೀಯ ಪ್ರವೇಶಿಸಿ 2010ರಲ್ಲಿ ಜಿಲ್ಲಾ ಯುವ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸಿದ್ದೇನೆ. ನಮ್ಮ ಕುಟುಂಬ ಮೊದಲಿನಿಂದಲೂ ಕಾಂಗ್ರೆಸ್‌ನಿಂದ ಅಂತರ ಕಾಯ್ದುಕೊಂಡು ಬಂದಿದೆ ಎಂದು ಶಾಸಕ ಅರುಣಕುಮಾರ ಪೂಜಾರ ವಿವರಿಸಿದರು.

ನನ್ನ ಅಭಿವೃದ್ಧಿ ಕಾಮಗಾರಿಯ ಚಿಂತನೆ ಸಹಿಸದವರು ಇಂತಹ ಸುಳ್ಳು ಸುದ್ದಿ ಹರಡುತ್ತಿದ್ದಾರೆ. ನನ್ನ ತೇಜೋವಧೆ ಮಾಡುವ ಜನರಿಗೆ ತಪ್ಪು ಸಂದೇಶ ಕೊಡುವ ಉದ್ದೇಶದಿಂದ ಕಾಣದ ಕೈ ಮಾಡುವ ಇಂತಹ ತಂತ್ರಗಾರಿಕೆಯನ್ನು ನಂಬಂದತೆ ಕ್ಷೇತ್ರದ ಜನರಲ್ಲಿ ಮನವಿ ಮಾಡಿರುವ ಶಾಸಕರು, ನನಗ ಟಿಕೆಟ್ ಸಿಗಲಿ, ಸಿಗದಿರಲಿ ನನ್ನ ಜೀವವಿರುವರೆಗೆ ನಾನು ಬಿಜೆಪಿಯಲ್ಲಿಯೇ ಇರುತ್ತೇನೆ ಎಂದು ಸ್ಪಷ್ಟಪಡಿಸಿದರು.

# ನಾಳೆ ಶ್ರೀ ಕೆಂಡೇಶ್ವರ ಸ್ವಾಮಿಯ ರಾಜಗೋಪುರದ ಲೋಕಾರ್ಪಣೆ

ದಾವಣಗೆರೆ, ಫೆ. 5- ತಾಲ್ಲೂಕಿನ ವಡೆಯರಹಳ್ಳಿಯ ಪುರಾತನ ಶ್ರೀ ಕೆಂಡೇಶ್ವರ ಸ್ವಾಮಿಯ ರಾಜಗೋಪುರದ ಲೋಕಾರ್ಪಣೆ ಮತ್ತು ಶಿಖರ ಕಳಸಾರೋಹಣ ಮತ್ತು ದೇವಸ್ಥಾನ ಲೋಕಾರ್ಪಣೆ ಕಾರ್ಯಕ್ರಮವು ಇದೇ ದಿನಾಂಕ 7ರ ಮಂಗಳವಾರ ನಡೆಯಲಿದೆ.

ಶಿಖರ ಕಳಸಾರೋಹಣ ಪ್ರಯುಕ್ತ ನಾಳೆ ದಿನಾಂಕ 6ರ ಸೋಮವಾರ ಗೋದೂಳಿ ಮುಹೂರ್ತದಲ್ಲಿ ಪೂಜಾ ಕಾರ್ಯಕ್ರಮಗಳು ಪ್ರಾರಂಭ ಸಂಜೆ ಗಂಗೆ ಪೂಜೆ ಮತ್ತು ಮಹಾಗಣಪತಿ ಪೂಜೆ, ಮಹಾ ಸಂಕಲ್ಪ ಪೂಜೆ, ನವಗ್ರಹ ಶಾಂತಿ, ಪಂಚಕಳಸ ಪೂಜೆ, ಪುಣ್ಯಾನಂದಿ ಮಹಾನ್ಯಾಸ ಪೂಜೆ, ವಾಸ್ತು ಪೂಜೆ ಮಹಾಲಕ್ಷ್ಮಿ ಹಾಗೂ ರುದ್ರಹೋಮ ಮತ್ತು ಜಯಾದಿ ಹೋಮ ಮತ್ತು ಪೂರ್ಣಾಹುತಿ ನಡೆಯಲಿದೆ.

ನಾಳೆ ಮಂಗಳವಾರ ಬೆಳಿಗ್ಗೆ ಪ್ರಾತಃಕಾಲ ಶ್ರೀ ಕೆಂಡೇಶ್ವರ ಸ್ವಾಮಿಗೆ ಮುತ್ತೈದೆಯರಿಂದ ಕುಂಭಾಭಿಷೇಕ, ಬಿಲ್ವಾರ್ಚನೆ, ಗ್ರಾಮದ ಎಲ್ಲಾ ದೇವರಿಗೆ ಅಭಿಷೇಕ ಮತ್ತು ಅಲಂಕಾರ ಪೂಜೆ ಮತ್ತು ಶ್ರೀ ಚೌಡೇಶ್ವರಿ ದೇವಿಗೆ ಅಭಿಷೇಕ ಮತ್ತು ಅಲಂಕಾರ ಮತ್ತು ಮುತ್ತೈದೆಯರಿಂದ ಉಡಿ ತುಂಬುವ ಕಾರ್ಯಕ್ರಮ ಇರುತ್ತದೆ.

ರಾಮಘಟ್ಟದ ಶ್ರೀ ರೇವಣಸಿದ್ದ ಶಿವಾಚಾರ್ಯ ಮಹಾಸ್ವಾಮಿಗಳು, ಶಿಕಾರಿಪುರ ತಾಲ್ಲೂಕು ತೊಗರ್ಸಿಯ ಶ್ರೀ ಮಹಾಂತ ದೇಶೀಕೇಂದ್ರ ಸ್ವಾಮಿಗಳು ಸಾನ್ನಿಧ್ಯ ವಹಿಸಲಿದ್ದಾರೆ.

ತೀರ್ಥಹಳ್ಳಿ ತಾಲ್ಲೂಕು ಕೋಣಂದೂರಿನ ಶ್ರೀಪತಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ನೇತೃತ್ವ ವಹಿಸಲಿದ್ದಾರೆ.

ಶ್ರೀ ಗುರುಬಸವ ದೇವರ ಸಂಸ್ಥಾನ ಮಠ ಖೇದರಿಪುರ (ಕ್ಯಾಸನೂರು) ಶ್ರೀ ಗುರುಬಸವ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ಸಮ್ಮುಖದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಕೊಡಗನೂರು ಗ್ರಾ.ಪಂ. ಅಧ್ಯಕ್ಷ ಎಸ್. ಸಿದ್ದಪ್ಪ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು.

ವಿಶೇಷ ಆಹ್ವಾನಿತರಾಗಿ ಕೊಡಗನೂರು ಗ್ರಾ.ಪಂ. ಆಡಳಿತಾಧಿಕಾರಿಗಳು, ಮಾಜಿ ಮತ್ತು ಹಾಲಿ ಸದಸ್ಯರುಗಳು ಉಪಸ್ಥಿತರಿರುವರು.

ಸರ್ವರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಶ್ರೀ ಕೆಂಡೇಶ್ವರ ಸೇವಾ ಸಮಿತಿ ಕೋರಿದೆ.

# ಸಮಾನ ಮನಸ್ಕರ ವೇದಿಕೆಯಿಂದ ಸೌಹಾರ್ದ ಅಭಿಯಾನ



ದಾವಣಗೆರೆ,ಫೆ.5- ಗಣರಾಜ್ಯೋತ್ಸವದ ಅಂಗವಾಗಿ 'ನಮ್ಮನಡೆ ಸಾಮರಸ್ಯದ ಕಡೆ ಮತ್ತು ಸಮಾನ ಮನಸ್ಕರ ವೇದಿಕೆ' ಮುಖಂಡರು ಸೇರಿ ಜಿಲ್ಲೆಯಾದ್ಯಂತ ಪ್ರೀತಿ, ಸ್ನೇಹ, ಬಾಂಧವ್ಯ ಮತ್ತು ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಸಲುವಾಗಿ ಜಿಲ್ಲೆಯಾದ್ಯಂತ ಸೌಹಾರ್ದ ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು .

ಗಾಂಧಿನಗರದ ಅಂಬೇಡ್ಕರ್ ವೃತ್ತದಲ್ಲಿ ಈ ಅಭಿಯಾನ ನಡೆಸಲಾಯಿತು.ಮಾನವೀಯ ಮೌಲ್ಯಗಳು, ಪ್ರೀತಿ ಬಾಂಧವ್ಯ ನಶಿಸಿ ಹೋಗುತ್ತಿರುವ ಈ ಕಾಲಘಟ್ಟದಲ್ಲಿ ಸಂಬಂಧಗಳನ್ನು ಗಟ್ಟಿಗೊಳಿಸುವ ಒಂದು ಸಣ್ಣ ಪ್ರಯತ್ನ ಇದಾಗಿದೆ. ಜನರ ಮಧ್ಯದಲ್ಲಿ ಬಾಂಧವ್ಯ ಬೆಸೆಯುವ ಪ್ರಯತ್ನವನ್ನು ಎಲ್ಲಾ ಸ್ನೇಹಪರ, ಜೀವಪರ ವ್ಯಕ್ತಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಅಥವಾ ಸಭೆಗಳನ್ನು ಮಾಡಿ ಒಬ್ಬರಿಗೊಬ್ಬರು ವಿಚಾರಗಳ ವಿನಿಮಯ ಮಾಡುವುದರ ಮೂಲಕ ಮಾನವೀಯ ಬಾಂಧವ್ಯವನ್ನು ಗಟ್ಟಿಗೊಳಿಸುವ ಪ್ರಯತ್ನ ಮಾಡಬಹುದಾಗಿದೆ. ಈ ನಿಟ್ಟಿನಲ್ಲಿ ನಮ್ಮ ನಡೆ ಸಾಮರಸ್ಯ ಕಡೆ ತಂಡವು ಸಭೆಯನ್ನು ಮಾಡಿ ಸೌಹಾರ್ದ ಗೀತೆಗಳನ್ನು ಹಾಡಿ ಸೌಹಾರ್ದ ಅಭಿಯಾನಕ್ಕೆ ಚಾಲನೆ ನೀಡಲಾಯಿತು ಎಂದು ವೇದಿಕೆ ಸಂಚಾಲಕ ನ್ಯಾಯವಾದಿ ಅನೀಸ್ ಪಾಷಾ ತಿಳಿಸಿದ್ದಾರೆ.

ಪಾಲಿಕೆ ಸದಸ್ಯ ಎಲ್.ಡಿ. ಗೋಣೆಪ್ಪ ಗಿಡಕ್ಕೆ ನೀರು ಎರೆಯುವ ಮೂಲಕ ಕಾರ್ಯಕ್ರಮ ಉದ್ಘಾಟನೆ ಮಾಡಿದರು. ವಕೀಲರಾದ ಅಂಜಿನಪ್ಪ ನಿರೂಪಿಸಿದರು. ಸತೀಶ್ ಅರವಿಂದ್ ಸ್ವಾಗತಿದರು, ಹೆಚ್.ಸಿ. ಗುಡ್ಡಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು, ಮುಸ್ತಫಾ ವಂದಿಸಿದರು.

ಹಿರಿಯರಾದ ಡಿ. ತಿಪ್ಪಣ್ಣ ಕತ್ತಲಗೆರೆ, ಹಿರಿಯ ವಕೀಲ ಎಲ್.ಹೆಚ್. ಅರುಣ್ ಕುಮಾರ್, ಬಲ್ಲೂರ್ ರವಿಕುಮಾರ್, ಹೆಚ್. ಮಲ್ಲೇಶ್, ಸಾಹಿತಿಗಳಾದ ಹುಲಿಕಟ್ಟೆ ಚನ್ನಬಸಪ್ಪ, ಆಡಿಟರ್ ಭಾಷಾ ಸಾಬ್, ಮೊಹಮ್ಮದ್ ಬಾಷಾ, ಅಂಜುಮನ್ ಸದಸ್ಯರಾದ ಆರೀಫ್ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ವಕೀಲರಾದ ರುದ್ರೇಶ್, ಖಲೀಲ್, ಫಕ್ರುದ್ದೀನ್, ಶ್ರೀಮತಿ ಪವಿತ್ರ, ಶಿವಳ್ಳಿ ನಾಗರಾಜ್, ಜಯಣ್ಣ, ಎಚ್.ಸಿ ಮಲ್ಲಪ್ಪ, ಲೋಕಪ್ಪ, ಚನ್ನಬಸಪ್ಪ ಮತ್ತಿತರರು ಉಪಸ್ಥಿತರಿದ್ದರು.


**ಶ್ರೀ ಹುಲ್ಲುಮನೆ ಸೌಹಾರ್ದ ಸಹಕಾರ ಲಿ.**

#173/16, ಕಾಲೇಜ್ ರಸ್ತೆ, ನಿಟುವಳ್ಳಿ, ದಾವಣಗೆರೆ-4.

ದೂರವಾಣಿ ಸಂಖ್ಯೆ : 08192 260019

**ಅಧಿಸೂಚನೆ :**

ಈ ಕೆಳಕಂಡ ತಾತ್ಕಾಲಿಕ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ

| | | | |
|---|---|---|---|
| 01) | ಮ್ಯಾನೇಜರ್ (ನಿವೃತ್ತ ಬ್ಯಾಂಕ್ ಮ್ಯಾನೇಜರ್) | ಹುದ್ದೆಗಳು - 02 | B.com., BBM., MBA., |
| 02) | ಅಭಿವೃದ್ಧಿ ಅಧಿಕಾರಿಗಳು (ಬ್ಯಾಂಕಿಂಗ್) | ಹುದ್ದೆಗಳು - 10 | SSLC, PUC, Degree |
| 03) | ಮಾರ್ಕೆಟಿಂಗ್ ಆಫೀಸರ್ (ಪೈಪ್ ಡಿವಿಜನ್) | ಹುದ್ದೆಗಳು - 05 | Degree |

ಸ್ವಂತ ವಾಹನವುಳ್ಳ ಅಭ್ಯರ್ಥಿಗಳಿಗೆ ಆದ್ಯತೆ. ಅರ್ಜಿ ಸಲ್ಲಿಸುವ ವಿಧಾನ

email ID : hullumanesouhardha@gmail.com

ಆಡಳಿತ ಮಂಡಳಿ

# ಅಹಂಕಾರ ರಹಿತವಾಗಿ ದಾನ ಮಾಡುವುದೇ ದಾಸೋಹ

## ಕೊಟ್ಟೂರು ತರಳಬಾಳು ಹುಣ್ಣಿಮೆಯ ಕೊನೆಯ ದಿನದ ಮಹೋತ್ಸವದಲ್ಲಿ ಪ್ರೊ. ಕೃಷ್ಣೇಗೌಡ



ಕೊಟ್ಟೂರು, ಫೆ. 5 – ಅಹಂಕಾರ ರಹಿತವಾಗಿ ದಾನ ಮಾಡುವುದೇ ದಾಸೋಹ ತತ್ವದ ಪರಿಕಲ್ಪನೆ. ದಾಸೋಹವು ದಾನ ಮಾಡುವವನಿಗೆ ವಿನಯ ಕೊಡುತ್ತದೆ ಎಂದು ವಾಗ್ಮಿ ಪ್ರೊ. ಕೃಷ್ಣೇಗೌಡ ಹೇಳಿದರು.

ತರಳಬಾಳು ಹುಣ್ಣಿಮೆ ಮಹೋತ್ಸವದ ಒಂಭತ್ತನೇ ಹಾಗೂ ಕೊನೆಯ ದಿನದಂದು ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಅವರು ಮಾತನಾಡಿದರು.

ದಾನ ಮಾಡುವಾಗ ಅಹಂಕಾರ ಇರುತ್ತದೆ. ನಾನು ಕೊಡುವವನು ಎಂಬ ಭಾವನೆ ಇರುತ್ತದೆ. ಈ ಭಾವನೆ ಇರಬಾರದು ಎಂದೇ ಶರಣರು ದಾಸೋಹ ತತ್ವ ಅಳವಡಿಸಿಕೊಂಡರು. ದಾಸೋಹ ಎಂಬುದು ದಾಸೋ ಅಹಂ ಎಂಬ ಪದಗ ಳಿಂದ ಬಂದಿದೆ. ಕೊಡುವನಿಗೆ ಅಹಂಕಾರ ಇಲ್ಲದೇ ದಾಸನಾಗಿ ಕೊಡುವುದು ಎಂಬುದೇ ಇದರ ಅರ್ಥ ಎಂದರು.

ಜಾನಪದ ವಿದ್ವಾಂಸ ಶಂಭು ವಿ. ಬಳಿಗಾರ್ ಮಾತನಾಡಿ, ಅಂತರಂಗದ ಕತ್ತಲೆ ಕಳೆದುಕೊಂಡು ಅಜ್ಞಾನ ದೂರ ಆಗಬೇಕು. ಈ ಕಾರ್ಯಕ್ಕೆ ತರಳಬಾಳು ಹುಣ್ಣಿಮೆ ಕಾರ್ಯಕ್ರಮ ನೆರವಾಗಿದೆ ಎಂದರು.

ವಿದ್ವಾಂಸ ಬಿ.ಸಿ. ಮಹಾಬಲೇಶ್ವರಪ್ಪ ಮಾತನಾಡಿ, 12ನೇ ಶತಮಾನದಲ್ಲಿ ನಡೆದ ಶರಣ ಕ್ರಾಂತಿಯಲ್ಲಿ 720 ಶಿವಶರಣ ರಿದ್ದರು. ಆ ಕಾಲದಲ್ಲಿ ಮಹಾಮನೆಯಲ್ಲಿ ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣೆ ಕಾರ್ಯ ಶರಣರಿಂದ ನಡೆಯಿತು ಎಂದರು.

ಬಸವಾದಿ ಶರಣರು ವಿಶ್ವದ ಮೊದಲ ಬಂಡಾಯಗಾರರು. ಅವರು ಜಾತಿ, ಮೌಢ್ಯತೆ, ಬಂಡವಾಳಶಾಹಿ ಹಾಗೂ ಅಸ್ಪೃಶ್ಯತೆ ವಿರುದ್ಧ ಸಿಡಿದೆದ್ದರು. ವೈಜ್ಞಾನಿಕ ಹಾಗೂ ವೈಚಾರಿಕತೆಯ ತಳಹದಿಯ ಮೇಲೆ ಬದುಕಿನ ಸಮಗ್ರತೆಯ ಪರಿಚಯ ಮಾಡಿಕೊಟ್ಟರು ಎಂದು ತಿಳಿಸಿದರು.

ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ಎಸ್. ಪರಮಶಿವಯ್ಯ ಮಾತನಾಡಿ, ಸಿರಿಗೆರೆ ಹಾಗೂ ಸಿದ್ದಗಂಗಾ ಮಠಗಳ ನಡುವೆ ಅವಿನಾಭಾವ ಸಂಬಂಧ ಇದೆ. ಸಿದ್ದಗಂಗಾ ಮಠದ ಲಿಂ. ಶ್ರೀ ಶಿವಕುಮಾರ ಸ್ವಾಮೀಜಿ ಹಾಗೂ ಸಿರಿಗೆರೆ ಹಿರಿಯ ಜಗದ್ಗುರುಗಳಾದ ಲಿಂ. ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಅವರು ಕಷ್ಟಗಳನ್ನು ಎದುರಿಸಿ ದೊಡ್ಡ ಸಂಘಟನೆ ಕಟ್ಟಿದ್ದಾರೆ ಎಂದರು.

ಮೊಳಕಾಲ್ಮೂರಿನ ನ್ಯಾಯಮೂರ್ತಿ ಪ್ರಿಯಾಂಕ ಕೊಟ್ರೇಶ್ ಮಾತನಾಡಿ, ನ್ಯಾಯದಾನ ಪ್ರಕ್ರಿಯೆ ಅವಸರವಾದರೂ ಇಲ್ಲವೇ ವಿಳಂಬವಾದರೂ ನ್ಯಾಯ ಸಿಗುವುದಿಲ್ಲ. ವಾದಿ - ಪ್ರತಿವಾದಿಗಳು ತಮ್ಮ ನಿಲುವು ತಿಳಿಸಲು ನ್ಯಾಯಾಲಯಗಳು ಸಮರ್ಪಕ ಸಮಯ ನೀಡಬೇಕು ಎಂದರು.

ನ್ಯಾಯಾಲಯದಿಂದ ಬರುವ ತೀರ್ಪುಗಳು ಒಬ್ಬ ಕಕ್ಷಿದಾರನ ಪರವಾಗಿ ರುತ್ತವೆ. ಅದೇ ಲೋಕ್ ಅದಾಲತ್‌ಗಳಲ್ಲಿ ಸಂಧಾನದ ಮೂಲಕ ಪ್ರಕರಣ ಇತ್ಯರ್ಥ ಮಾಡಿಕೊಂಡಾಗ ಉಭಯರಿಗೂ ನ್ಯಾಯ ಸಿಗುತ್ತದೆ. ಸಂಧಾನ ಪ್ರಕ್ರಿಯೆಗೆ ಮುಂದಾದರೆ ಕಕ್ಷಿದಾರರು ತಾವೇ ತಮ್ಮ ತೀರ್ಪು ಬರೆದುಕೊಂಡಂತೆ ಎಂದು ಹೇಳಿದರು.

ಸಮಾರಂಭದ ಸಾನ್ನಿಧ್ಯವನ್ನು ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ವಹಿಸಿದ್ದರು.

ವೇದಿಕೆ ಮೇಲೆ ಜೆ.ಎಸ್.ಡಬ್ಲ್ಯೂ. ಕಂಪನಿಯ ಉಪಾಧ್ಯಕ್ಷ ಮುರುಗನ್, ಸಾಧು ಸದ್ಧರ್ಮ ಸಮಾಜದ ಅಧ್ಯಕ್ಷ ಹೆಚ್.ಆರ್. ಬಸವರಾಜಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಮೈನ್ಸ್‌ಗಳ ಚೆಕ್ ಹರಿದು ಆಕ್ರೋಶ

ಸಿರಿಗೆರೆ ಸುತ್ತಲಿನ ಗಣಿಗಳ ಮಾಲೀಕರು ಹುಣ್ಣಿಮೆಗಾಗಿ ಲಕ್ಷ ರೂ.ಗಳ ದೇಣಿಗೆ ಕೊಟ್ಟಿದ್ದಾರೆ. ಆದರೆ, ಗಣಿ ವಾಹನಗಳಿಗೆ ಸಿಲುಕಿ ಹಲವರು ಸಾವನ್ನಪ್ಪಿದ್ದಾರೆ. ಅವರಿಗೆ ಗಣಿಗಳ ಮಾಲೀಕರು ಪರಿಹಾರ ನೀಡಿಲ್ಲ. ಹೀಗಾಗಿ ತಾವು ದೇಣಿಗೆ ಸ್ವೀಕರಿಸುವುದಿಲ್ಲ ಎಂದ ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ವೇದಿಕೆಯ ಮೇಲೆಯೇ ಚೆಕ್ ಹರಿಯುವ ಮೂಲಕ ಆಕ್ರೋಶ ಹೊರ ಹಾಕಿದರು.

ಸಿರಿಗೆರೆ ವಿದ್ಯಾಸಂಸ್ಥೆಯ ಗುಮಾಸ್ತರೊಬ್ಬರು ಗಣಿ ಲಾರಿಗೆ ಸಿಲುಕಿ ಸಾವನ್ನಪ್ಪಿದ್ದಾರೆ ಹಾಗೂ ಸಿರಿಗೆರೆ ಶಾಲೆಯ ವಿದ್ಯಾರ್ಥಿನಿ ಗಾಯ ಗೊಂಡಿದ್ದಾರೆ. ಈ ಎರಡು ಕುಟುಂಬದವರಿಗೆ ತಲಾ 25 ಲಕ್ಷ ರೂ.ಗಳ ಪರಿಹಾರ ನಾಳೆಯೇ ನೀಡಬೇಕು ಎಂದು ಶ್ರೀಗಳು ಇದೇ ಸಂದರ್ಭದಲ್ಲಿ ಗಣಿ ಮಾಲೀಕರಿಗೆ ತಾಕೀತು ಮಾಡಿದರು.

## ರಾಜನಹಳ್ಳಿ : 8ರಂದು ಉದ್ಯೋಗ ಮೇಳ

ಮಲೇಬೆನ್ನೂರು, ಫೆ. 5 - ರಾಜನಹಳ್ಳಿಯ ಶ್ರೀ ವಾಲ್ಮೀಕಿ ಗುರುಪೀಠದಲ್ಲಿ ಇದೇ ದಿನಾಂಕ 8 ಮತ್ತು 9ರಂದು ನಡೆಯಲಿರುವ ಐತಿಹಾಸಿಕ 5 ನೇ ವರ್ಷದ ವಾಲ್ಮೀಕಿ ಜಾತ್ರಾ ಮಹೋತ್ಸವದ ಪ್ರಯುಕ್ತ ವಾಲ್ಮೀಕಿ ಗುರುಪೀಠ ಟ್ರಸ್ಟ್ ಹಾಗೂ ಎಮ್ ಆರ್ ಎನ್ (ನಿರಾಣಿ) ಫೌಂಡೇಶನ್ ಇವರ ಸಹಯೋಗದಲ್ಲಿ ದಿನಾಂಕ 8ರ ಬುಧವಾರ ಬೆಳಗ್ಗೆ 10 ರಿಂದ 5 ಗಂಟೆವರೆಗೆ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ತಿಳಿಸಿದ್ದಾರೆ.

ಉತ್ತಮ ಭವಿಷ್ಯಕ್ಕೊಂದು ಉದ್ಯೋಗಾವಕಾಶ ನೀಡುವ ನಿಟ್ಟಿನಲ್ಲಿ ಶ್ರೀಮಠದ ವತಿಯಿಂದ ಈ ಅವಕಾಶ ಕಲ್ಪಿಸಲಾಗಿದೆ. ಈ ಉದ್ಯೋಗ ಮೇಳದಲ್ಲಿ 40 ರಿಂದ 50ಕ್ಕೂ ಹೆಚ್ಚು ಸಂಸ್ಥೆಗಳು ಭಾಗವಹಿಸಲಿವೆ.

ಆಸಕ್ತರು ತಮ್ಮ ಆಧಾರ್ ಕಾರ್ಡ್, ಎಸ್ ಎಸ್ ಎಲ್ ಸಿ ಅಂಕಪಟ್ಟಿ ಹಾಗೂ ವಿದ್ಯಾರ್ಹತೆಯ ಅಗತ್ಯ ದಾಖಲಾತಿಗಳ ಜೆರಾಕ್ಸ್ ಪ್ರತಿಯನ್ನು (5 ಪ್ರತಿ) ಕಡ್ಡಾಯವಾಗಿ ತರತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ -9449677153 ,9738800039 ಸಂಪರ್ಕಿಸಿ ಎಂದು ಸ್ವಾಮೀಜಿ ತಿಳಿಸಿದರು.

## ಅಂಚೆ ವಿಭಾಗೀಯ ಡಾಕ್ ಅದಾಲತ್

ದಾವಣಗೆರೆ, ಫೆ.5- ಇದೇ ದಿನಾಂಕ 15 ರ ಸಂಜೆ 4 ಗಂಟೆಗೆ ದಾವಣಗೆರೆ ಅಂಚೆ ವಿಭಾಗೀಯ ಡಾಕ್ ಅದಾಲತ್ತನ್ನು ನಗರದ ಪ್ರಧಾನ ಅಂಚೆ ಅಧೀಕ್ಷಕರ ಕಚೇರಿಯ ಮೊದಲನೇ ಮಹಡಿಯಲ್ಲಿ ಹಮ್ಮಿಕೊಳ್ಳಲಾಗಿದೆ.

ಅದಾಲತ್‌ಗೆ ಸಂಬಂಧಿಸಿದಂತೆ ಮುಂದಿನ ಕ್ರಮಕ್ಕಾಗಿ ಸಾರ್ವಜನಿಕರು ಮತ್ತು ಅಂಚೆ ಗ್ರಾಹಕರು ತಮ್ಮ ದೂರು ಮತ್ತು ಸಲಹೆಗಳನ್ನು ಇದೇ ದಿನಾಂಕ 14 ರೊಳಗೆ ಕಳುಹಿಸಲು ವಿಭಾಗದ ಅಂಚೆ ಅಧೀಕ್ಷಕರು ತಿಳಿಸಿದ್ದಾರೆ

## ಯು.ಬೇವಿನಹಳ್ಳಿ ಪಿ. ನಿಂಗಮ್ಮ ನಿಧನ



ಹರಪನಹಳ್ಳಿ ತಾಲ್ಲೂಕು ಯು.ಬೇವಿನಹಳ್ಳಿ ಗ್ರಾಮದ ದಿ|| ಪಾಟೀಲ್ ವಿರೂಪಾಕ್ಷ ಗೌಡ್ರು ರವರ ಧರ್ಮಪತ್ನಿ

**ಶ್ರೀಮತಿ ಪಿ. ನಿಂಗಮ್ಮ**

ಅವರು ದಿನಾಂಕ 5-2-2023ರ ಭಾನುವಾರ ಮಧ್ಯಾಹ್ನ 3.30 ಕ್ಕೆ ನಿಧನರಾದರು. ಮೃತರಿಗೆ 75 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 6-2-2023ರ ಸೋಮವಾರ ಮಧ್ಯಾಹ್ನ 12.30 ಗಂಟೆಗೆ ಯು.ಬೇವಿನಹಳ್ಳಿ ಗ್ರಾಮದಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗ

ಪಿ. ಕೆಂಚನಗೌಡ್ರು ತಾ.ಪಂ. ಮಾಜಿ ಸದಸ್ಯರು ಮತ್ತು ಸಹೋದರರು, ಸಹೋದರಿ, ಪಾಟೀಲ್ ವಂಶಸ್ಥರು, ಯು. ಬೇವಿನಹಳ್ಳಿ.

ಮೊ. : 9972591858, 9844377222

## ಕುಂಬಳೂರು : ಡಿಸಿಸಿ ಬ್ಯಾಂಕ್ ನೂತನ ಅಧ್ಯಕ್ಷರಿಗೆ ಸನ್ಮಾನ



ಮಲೇಬೆನ್ನೂರು ಫೆ. 5 - ಕುಂಬಳೂರು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ನೂತನ ಅಧ್ಯಕ್ಷ ಹೊಳೆಸಿರಿಗೆರೆಯ ಬಿ.ಹಾಲೇಶಪ್ಪ ಅವರನ್ನು ಶನಿವಾರ ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ಡಿ.ಕೆ ಸ್ವಾಮಿ, ಉಪಾಧ್ಯಕ್ಷ ತಿಪ್ಪೇಸ್ವಾಮಿ, ನಿರ್ದೇಶಕ ಕರಡೆಪ್ಪರ ಸೋಮಶೇಖರ್, ಎಂ.ವಾಸುದೇವ ಮೂರ್ತಿ, ಆರ್.ರಾಜು, ಹೆಚ್.ಆಂಜನೇಯ, ಕೆ.ಕುಮಾರ್, ಶ್ರೀಮತಿ ಹನುಮಮ್ಮ, ಸಂಘದ ಸಿಇಓ ಶ್ರೀಮತಿ ಯಶೋದಮ್ಮ, ಗ್ರಾಮದ ಮುಖಂಡ ಹಳೆಮನೆ ಶಂಭುಲಿಂಗಪ್ಪ, ಎಸ್.ರಾಮಣ್ಣ ಹುಲ್ಮನಿ ನಿಂಗಪ್ಪ, ಕೆ.ರವೀಂದ್ರ, ಕೆ. ತೀರ್ಥಪ್ಪ, ಬಿ.ಕೆಂಪೇಗೌಡ, ಎನ್.ಲೋಕೇಶ್, ಗೌಡ್ರು ಮೂರ್ತೆಪ್ಪ, ಕೆ.ಗಿರೀಶ್, ಶಿವಕುಮಾರ್, ಶ್ರೀಮತಿ ವನಜಾಕ್ಷಮ್ಮ ಮತ್ತಿತರರು ಈ ವೇಳೆ ಹಾಜರಿದ್ದು, ಹಾಲೇಶಪ್ಪ ಅವರನ್ನು ಅಭಿನಂದಿಸಿದರು.

## ಸೇವಾಲಾಲ್ ಪುರಸ್ಕಾರ

ಚನ್ನಗಿರಿ, ಜ. 27- ಚನ್ನಗಿರಿ ತಾಲ್ಲೂಕಿನ ಕಬ್ಬಳ ಗ್ರಾಮದ ಶ್ರೀ ಸೇವಾಲಾಲ್ ಯುವಕರ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ. ಎಸ್ಸೆಸ್ಸೆಲ್ಸಿಯಲ್ಲಿ ಶೇ 85 ರಷ್ಟು, ಪಿಯುಸಿ, ಡಿಪ್ಲೋಮಾ, ಐಟಿಐನಲ್ಲಿ ಶೇ.80 ರಷ್ಟು ಹಾಗೂ ಡಿಗ್ರಿ ಯಲ್ಲಿ ಶೇ.65 ರಷ್ಟು ಅಂಕ ಗಳಿಸಿದ ಗ್ರಾಮದ ವಿದ್ಯಾರ್ಥಿಗ ಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಫೆಬ್ರವರಿ 10 ರೊಳಗೆ ಸಂಘಕ್ಕೆ ತಲುಪಿಸಬೇಕು. ಮಾಹಿತಿಗಾಗಿ ಮೊ: 96200 22083, 73533 43886 ಯನ್ನು ಸಂಪರ್ಕಿಸಬಹುದು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎಂ. ಅಭಿಲಾಷ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ರಾಜ್ಯ ಬಾಸ್ಕೆಟ್‌ಬಾಲ್ ಲೀಗ್ ಪಂದ್ಯಾವಳಿ

ರಾಜ್ಯ ಬಾಸ್ಕೆಟ್‌ಬಾಲ್ ಸಂಸ್ಥೆ ಹಾಗೂ ಜಿಲ್ಲಾ ಬಾಸ್ಕೆಟ್ ಬಾಲ್ ಸಂಸ್ಥೆಗಳ ಜಂಟಿ ಆಶ್ರಯದಲ್ಲಿ ಜಿಲ್ಲಾ ಕ್ರೀಡಾಂಗಣದಲ್ಲಿ ಕರ್ನಾಟಕ ಬಾಸ್ಕೆಟ್‌ಬಾಲ್ ಲೀಗ್ ಪಂದ್ಯಾವಳಿ ಇಂದು ಮತ್ತು ನಾಳೆ ನಡೆಯಲಿವೆ.

ಪಂದ್ಯಾವಳಿಯಲ್ಲಿ ಹೊಸಪೇಟೆ, ಬಳ್ಳಾರಿ, ಶಿವಮೊಗ್ಗ, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯ 2 ತಂಡಗಳು ಭಾಗವಹಿಸಲಿವೆ. ಇದರಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ತಂಡಗಳು ಬೆಂಗಳೂರಿನಲ್ಲಿ ನಡೆಯುವ ಉಳಿದ 10 ತಂಡಗಳ ಜೊತೆ ಆಡಲಿವೆ ಎಂದು ಜಿಲ್ಲಾ ಬಾಸ್ಕೆಟ್‌ಬಾಲ್ ಅಸೋಸಿಯೇಷನ್ ಅಧ್ಯಕ್ಷ ಬಿ.ಪಿ. ಹರೀಶ್ ಹಾಗೂ ಕಾರ್ಯದರ್ಶಿ ಆರ್. ವೀರೇಶ್ ತಿಳಿಸಿದ್ದಾರೆ.

## ಮಾರುಕಟ್ಟೆ ಸ್ಥಿರತೆಗೆ ಸೆಬಿ, ಆರ್.ಬಿ.ಐ. ತುದಿಗಾಲಲ್ಲಿ ನಿಲ್ಲಬೇಕು : ಸಚಿವ ನಿರ್ಮಲ

ನವದೆಹಲಿ, ಫೆ. 5 – ಷೇರು ಮಾರುಕಟ್ಟೆ ಸ್ಥಿರವಾಗಿರುವಂತೆ ನೋಡಿಕೊಳ್ಳಲು ಮಾರುಕಟ್ಟೆ ನಿಯಂತ್ರಕರಾದ ಸೆಬಿ ಹಾಗೂ ಆರ್.ಬಿ.ಐ. ತುದಿಗಾಲಲ್ಲಿ ನಿಂತು ಕಾರ್ಯ ನಿರ್ವಹಿಸಬೇಕು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ತಿಳಿಸಿದರು.

ಅಮೆರಿಕದ ಹಿಂಡನ್‌ಬರ್ಗ್ ರೀಸರ್ಚ್ ವರದಿಯ ನಂತರ ಅದಾನಿ ಸಮೂಹದ ಷೇರುಗಳ ಮೌಲ್ಯ ತೀವ್ರ ಕುಸಿತವಾಗಿರುವ ಹಿನ್ನೆಲೆಯಲ್ಲಿ ಸಚಿವೆ ಈ ಹೇಳಿಕೆ ನೀಡಿದ್ದಾರೆ.

ಬ್ಯಾಂಕುಗಳು ಹಾಗೂ ವಿಮಾ ಸಂಸ್ಥೆಗಳು ಯಾವುದೇ ಒಂದು ಕಂಪನಿ ಮೇಲೆ ಅತಿಯಾದ ಹೂಡಿಕೆ ಮಾಡಬಾರದು. ಭಾರತದ ಮಾರುಕಟ್ಟೆ ನಿಯಂತ್ರಕರಿಂದ ಉತ್ತಮವಾಗಿ ನಿರ್ವಹಿಸಲ್ಪಡುತ್ತಿದೆ ಎಂದು ಸೀತಾರಾಮನ್ ಹೇಳಿದ್ದಾರೆ. ಮಾರುಕಟ್ಟೆಯಲ್ಲಿ ಕೆಲವೊಮ್ಮೆ ಏರಿಳಿತ ಆಗುತ್ತದೆ. ಆದರೆ, ಇಂತಹ ವಿಷಯಗಳನ್ನು ಬಗೆಹರಿಸಬೇಕಿದೆ. ನಿಯಂತ್ರಕರು ಈ ವಿಷಯದ ಬಗ್ಗೆ ಗಮನ ಹರಿಸಲಿದ್ದಾರೆ ಎಂಬ ಬಗ್ಗೆ ನನಗೆ ಬಲವಾದ ನಂಬಿಕೆ ಇದೆ ಎಂದವರು ತಿಳಿಸಿದ್ದಾರೆ.


ಬೇಕಾಗಿದ್ದಾರೆ

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ

ಶಾಂತಲಾ
ದಿ ವೆಡ್ಡಿಂಗ್ ಮಾಲ್....
ಚಾಮರಾಜ ಪೇಟೆ, ದಾವಣಗೆರೆ.
9686195327



ssims
SPARSH
CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಮೊಣಕಾಲು ನೋವು
- ಭುಜದ ನೋವು
- ಸ್ಪೋರ್ಟ್ಸ್ ಇಂಜುರೀಸ್
- ಕೀಲು ಮರುಜೋಡಣೆ
- ಹಿಪ್ ಮರುಜೋಡಣೆ
- ರಿವಿಷನ್ ಶಸ್ತ್ರಚಿಕಿತ್ಸೆ
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಗುರುವಾರ, 9ನೇ ಫೆಬ್ರವರಿ 2023 । ಸಮಯ: ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: 96869 29090 / 99800 33277

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ




ಮೆದುಳು ಹಾಗೂ ನರ ಸಂಬಂಧಿ ತೊಂದರೆಗಳಿಗೆ ಬೇಕು ತಜ್ಞರ ಸಲಹೆ

ನಂಜಪ್ಪ ಹಾಸ್ಪಿಟಲ್ಸ್ ದಾವಣಗೆರೆ


- ತಲೆನೋವು / ಮೈಗ್ರೇನ್
- ಮೂರ್ಛೆರೋಗ (ಫಿಟ್ಸ್)
- ಮೆನಿಂಜೈಟಿಸ್
- ಪಾರ್ಕಿನ್‌ಸನ್ಸ್

ಇತ್ಯಾದಿ ಕಾಯಿಲೆಗಳಿಗೆ ನಮ್ಮ ನರಶಾಸ್ತ್ರಜ್ಞರನ್ನು ಸಂಪರ್ಕಿಸಿ



08192-260111/260222/260333
#605, ಮಾಗನೂರು ಬಸಪ್ಪ ರಸ್ತೆ (ಹದಡಿ ರಸ್ತೆ) ತರಳಬಾಳು ಬಡಾವಣೆ, ದಾವಣಗೆರೆ 577005


## ಹೆಚ್.ಎಂ. ಮೂರ್ತಿ ನಿಧನ



ದಾವಣಗೆರೆ ಸಿಟಿ ಎಂ.ಸಿ.ಸಿ 'ಬಿ' ಬ್ಲಾಕ್ ನಿವಾಸಿ
ನಿವೃತ್ತ ಇಂಜಿನಿಯರ್ (AEE)

**ಹೆಚ್.ಎಂ. ಮೂರ್ತಿ**

ಇವರು ದಿನಾಂಕ 4.02.2023ರ ಶನಿವಾರ ಬೆಳಗಿನ ಜಾವ 12.30ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 83 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 4.02.2023ರ ಶನಿವಾರ ಸಂಜೆ 5.30ಕ್ಕೆ ಹೆಬ್ಬಾಳ ಗ್ರಾಮದ ಸ್ವಂತ ಜಮೀನಿನಲ್ಲಿ ನೆರವೇರಿಸಲಾಯಿತು.

ದುಃಖತಪ್ತ ಕುಟುಂಬ ವರ್ಗ

ಮೊ : 98862 42433, 98450 31055


ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ವತಿಯಿಂದ ನಿರ್ಮಿಸುತ್ತಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯ ವಿವೇಕ ಶಾಲೆ ಯೋಜನೆಯಡಿಯಲ್ಲಿ ಮಂಜೂರಾಗಿರುವ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಶಿರಮಗೊಂಡನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 5 ಕೊಠಡಿಗಳ ನಿರ್ಮಾಣ ಕಾಮಗಾರಿಯ ಭೂಮಿಪೂಜೆ ಕಾರ್ಯಕ್ರಮ



ದಿನಾಂಕ :06-02-2023 ಸೋಮವಾರ ಸಮಯ : ಮಧ್ಯಾಹ್ನ 1 ಗಂಟೆಗೆ

ಶಿರಮಗೊಂಡನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 5 ಕೊಠಡಿಗಳ ನಿರ್ಮಾಣ ಕಾಮಗಾರಿ
ಅಂದಾಜು ಮೊತ್ತ 69.50 ಲಕ್ಷಗಳು

ಈ ಕಾಮಗಾರಿಯ ಭೂಮಿ ಪೂಜೆ ಸಮಾರಂಭಕ್ಕೆ ಆಗಮಿಸುತ್ತಿರುವ

ಸನ್ಮಾನ್ಯ ಡಾ|| ಶಾಮನೂರು ಶಿವಶಂಕರಪ್ಪ
ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರು ಹಾಗು ಮಾಜಿ ಸಚಿವರು
ಹಾಗು
ಸನ್ಮಾನ್ಯ ಶ್ರೀ ಎಸ್.ಎ. ರವೀಂದ್ರನಾಥ್
ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರು ಹಾಗು ಮಾಜಿ ಸಚಿವರು,

ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಎಪಿಎಂಸಿ ಮಾಜಿ ಸದಸ್ಯರುಗಳಿಗೂ, ಗ್ರಾಮ ಪಂಚಾಯಿತಿ ಹಾಲಿ ಮತ್ತು ಮಾಜಿ ಸದಸ್ಯರುಗಳಿಗೂ, ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೂ, ಗ್ರಾಮದ ಎಲ್ಲಾ ಮುಖಂಡರುಗಳಿಗೂ ಹಾಗೂ ಕಾರ್ಯಕರ್ತರಿಗೂ,ಅಭಿಮಾನಿಗಳಿಗೂ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಮತ್ತು ಶಿಕ್ಷಣ ಇಲಾಖೆ ಅಧಿಕಾರಿಗಳಿಗೂ ಹೃದಯಪೂರ್ವಕ ಸ್ವಾಗತ ಸುಸ್ವಾಗತ




## ಮುದೇಗೌಡ್ರ ಚಂದ್ರಶೇಖರಪ್ಪ ನಿಧನ



ದಾವಣಗೆರೆ ವಿದ್ಯಾನಗರ ವಿನಾಯಕ ಬಡಾವಣೆ #1845/150, 'ಸುದೈವ' 1ನೇ ಮೇನ್, 4ನೇ ಕ್ರಾಸ್ ವಾಸಿ ದಿ. ಮುದೇಗೌಡ್ರ ಬಕ್ಕಪ್ಪನವರ ಪುತ್ರ

**ಶ್ರೀ ಮುದೇಗೌಡ್ರ ಚಂದ್ರಶೇಖರಪ್ಪನವರು**

ದಿನಾಂಕ 5.02.2023ರ ಭಾನುವಾರ ರಾತ್ರಿ 11 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 66 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರಿ, ಓರ್ವ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 06.02.2023ರ ಸೋಮವಾರ ಸಂಜೆ 4 ಗಂಟೆಗೆ ದಾವಣಗೆರೆ ತಾಲ್ಲೂಕು ದೇವರಹಟ್ಟಿಯಲ್ಲಿರುವ ಮುದೇಗೌಡ್ರ ಶಾಂತಿಧಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಮುದೇಗೌಡ್ರ ಕುಟುಂಬ ವರ್ಗ

ಮೊ. 98444-30275, 74065-52781

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte